ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಅರೆಕಾಲಿಕ ವೃತ್ತಿಗಳ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಅರೆಕಾಲಿಕ ಉದ್ಯೋಗಕ್ಕೂ ಸೇರಿಕೊಂಡರೆ ಭವಿಷ್ಯದ ದೃಷ್ಟಿಯಿಂದ ಅನುಕೂಲ.

ಆಳ-ಅಗಲ
ಕಾಂಗ್ರೆಸ್‌ನಲ್ಲಿ ಪರಿವರ್ತನೆಯ ತುಡಿತ?

‘ತಾಲಿಬಾನ್ ಮೇಲೆ ರಷ್ಯಾ, ಚೀನಾ, ಪಾಕ್, ಅಮೆರಿಕ ನಿಗಾ’ 9
‘ಪರಭಾಷೆ ಪದ ಬಳಕೆಗೆ ಮಡಿವಂತಿಕೆ ಬೇಡ’ 8
ಆಂಧ್ರ ಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳದಲ್ಲಿ ಭಾರಿ ಮಳೆ
ಗುಲಾಬ್ ಚಂಡಮಾರುತ ನೆಲಸ್ಪರ್ಶ 9

ಚನ್ನಿ ಸಂಪುಟಕ್ಕೆ 15 ಸಚಿವರ ಸೇರ್ಪಡೆ

ಚಂಡೀಗಡ (ಪಿಟಿಐ): ಪಂಜಾಬ್ ಸಚಿವ ಸಂಪುಟ ಭಾನುವಾರ ವಿಸ್ತರಣೆಯಾಗಿದ್ದು, ಏಳು ಮಂದಿ ಹೊಸಬರು ಸೇರಿದಂತೆ 15 ಸಚಿವರು ಪ್ರಮಾಣ ವಚನ ಸ್ವೀಕರಿಸಿದರು 9

ಉತ್ತರ ಪ್ರದೇಶ ಸಂಪುಟ ವಿಸ್ತರಣೆ

ಲಖನೌ (ಪಿಟಿಐ): ಉತ್ತರ ಪ್ರದೇಶ ಸಂಪುಟವನ್ನು ಭಾನುವಾರ ವಿಸ್ತರಣೆ ಮಾಡಲಾಗಿದೆ. ಒಟ್ಟು ಏಳು ಜನರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಈಚೆಗಷ್ಟೇ ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದ್ದ ಜಿತಿನ್ ಪ್ರಸಾದ ಅವರಿಗೆ ಸಚಿವ ಸ್ಥಾನವನ್ನು ನೀಡಲಾಗಿದೆ. 9

ಪ್ರವಾಸ ನೆಚ್ಚಿಕೊಂಡವರ ಬದುಕು ಪ್ರಯಾಸ 4
‘ಆಕ್ರೋಶದಿಂದ ಕೇಳಿ ಮಹಿಳಾ ಮೀಸಲು’ 7

ಇಂದಿನ ಬಂದ್‌ಗೆ ನೈತಿಕ ಬೆಂಬಲ ಘೋಷಿಸಿರುವ ಬಹುತೇಕ ಸಂಘಟನೆಗಳು

ಭಾರತ ಬಂದ್: ರೈತರ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ಸೋಮವಾರ (ಸೆ.27) ಕರೆ ನೀಡಿರುವ ‘ಭಾರತ್ ಬಂದ್’ಗೆ ರಾಜ್ಯದಲ್ಲಿ ಹಲವು ಸಂಘಟನೆಗಳು ನೈತಿಕ ಬೆಂಬಲ ಸೂಚಿಸಿದ್ದು, ರೈತ ಸಂಘಟನೆಗಳು ರಾಜ್ಯದಾದ್ಯಂತ ಬೃಹತ್ ಪ್ರತಿಭಟನಾ ರ‍್ಯಾಲಿಗಳನ್ನು ಆಯೋಜಿಸಿವೆ.

ಬೆಂಗಳೂರಿನಲ್ಲಿ ವಿವಿಧೆಡೆ ರ‍್ಯಾಲಿಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಕೇಂದ್ರಗಳು ಹಾಗೂ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲೂ ರ‍್ಯಾಲಿಗಳನ್ನು ಆಯೋಜಿಸಲು ಉದ್ದೇಶಿಸಿವೆ.ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿವೆ.

ರಾಜ್ಯದಲ್ಲಿ ಶಾಲಾ-ಕಾಲೇಜುಗಳು, ಅಂಗಡಿ ಮುಂಗಟ್ಟು, ಸಾರಿಗೆ ಸೇವೆ ಸೇರಿದಂತೆ ಎಲ್ಲ ಅಗತ್ಯ ಸೇವೆಗಳೂ ಎಂದಿನಂತೇ ಇರಲಿವೆ.

‘ಬೆಂಗಳೂರು ನಗರದಲ್ಲಿ ಕೆ.ಆರ್. ಪುರದಿಂದ ಟೌನ್‌ಹಾಲ್‌ವರೆಗೆ, ಶಿವಾಜಿ ನಗರದಿಂದ ಟೌನ್‌ಹಾಲ್‌ವರೆಗೆ, ಸುಮನಹಳ್ಳಿಯಿಂದ ಟೌನ್‌ಹಾಲ್‌ವರೆಗೆ ರೈತರ ರ‍್ಯಾಲಿಗಳು ನಡೆಯಲಿವೆ. ನಂತರ, ಬೆಳಿಗ್ಗೆ 11 ಗಂಟೆಗೆ ಟೌನ್‌ಹಾಲ್‌ನಿಂದ ಮೈಸೂರು ಬ್ಯಾಂಕ್ ವೃತ್ತದವರೆಗೆ ಬೃಹತ್ ರ‍್ಯಾಲಿ ನಡೆಯಲಿದೆ’ ಎಂದು ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ.

‘ಸುಮಾರು 10 ಸಾವಿರ ರೈತರು, ನಾಗರಿಕರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ರ‍್ಯಾಲಿಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಕೋವಿಡ್‌–19ನಿಂದ ಆಟೋ ಚಾಲಕರು ಸೇರಿದಂತೆ ಜನಸಾಮಾನ್ಯರು ಸಂಕಷ್ಟದಲ್ಲಿರುವುದು ನಿಜ. ಆದರೆ, ಕೇಂದ್ರ ಸರ್ಕಾರದ ನೀತಿಗಳು ಜನ ವಿರೋಧಿಯಾಗಿವೆ. ಕೃಷಿ ವಲಯವೂ ಇದಕ್ಕೆ ಹೊರತಾಗಿಲ್ಲ. ಆದರೆ, ರೈತರಿಂದ ಮಾತ್ರ ಪ್ರತಿರೋಧ ವ್ಯಕ್ತವಾಗಿದೆ’ ಎಂದು ತಿಳಿಸಿದ್ದಾರೆ.

4ನೇ ಪುಟ ನೋಡಿ

ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಲಾಗಿದೆ

ಆರಗ ಜ್ಞಾನೇಂದ್ರ, ಗೃಹ ಸಚಿವ

ಕೆಲವು ರಾಜ್ಯಗಳಲ್ಲಿ ಪರಿಣಾಮ?

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮೂರು ಹೊಸ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ಸೋಮವಾರ ಕರೆ ನೀಡಿರುವ ಭಾರತ್ ಬಂದ್‌ಗೆ ಕೆಲ ರಾಜ್ಯ ಸರ್ಕಾರಗಳು ಹಾಗೂ ಕಾಂಗ್ರೆಸ್ ಸೇರಿದಂತೆ ದೇಶದ ವಿವಿಧ ರಾಜಕೀಯ ಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ.

ಕೇರಳ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳು ಬಂದ್‌ಗೆ ಪೂರ್ಣ ಪ್ರಮಾಣದ ಬೆಂಬಲ ಸೂಚಿಸಿವೆ. ಆಂಧ್ರ ಪ್ರದೇಶ ಸರ್ಕಾರವು ಭಾನುವಾರ ಮಧ್ಯರಾತ್ರಿಯಿಂದ ಸೋಮವಾರ ಮಧ್ಯಾಹ್ನದವರೆಗೆ ಎಪಿಎಸ್‌ಆರ್‌ಟಿಸಿ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿದೆ.

ಎಎಪಿ, ವೈಎಸ್‌ಆರ್ ಕಾಂಗ್ರೆಸ್, ಡಿಎಂಕೆ, ತೆಲುಗು ದೇಶಂ, ಎಡಪಕ್ಷಗಳು, ಬಿಎಸ್‌ಪಿ ಸೇರಿದಂತೆ ಇತರ ಪಕ್ಷಗಳು ಬಂದ್‌ಗೆ ಬೆಂಬಲ ನೀಡಿವೆ.

ಏನೇನು ಇರಲಿವೆ?

- ಆಟೋ ರಿಕ್ಷಾಗಳು,
- ಬಸ್‌ಗಳು, ರೈಲು, ಮೆಟ್ರೊ,
- ಶಾಲಾ–ಕಾಲೇಜುಗಳು
- ಹೋಟೆಲ್‌ಗಳು
- ಚಿತ್ರಮಂದಿರಗಳು
- ವ್ಯಾಪಾರ ವಹಿವಾಟು
- ಮಾಲ್‌ಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಾಮೆಡ್–ಕೆ: ರಾಜ್ಯದ ವೀರೇಶ್ ಮೊದಲಿಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಕಾಮೆಡ್-ಕೆ ನಡೆಸಿದ ಪರೀಕ್ಷೆಯ ಫಲಿತಾಂಶ ಭಾನುವಾರ (ಸೆ. 26) ಪ್ರಕಟಗೊಂಡಿದ್ದು, ಬೆಂಗಳೂರಿನ ವೀರೇಶ್ ಬಿ. ಪಾಟೀಲ್ ಮೊದಲ ಸ್ಥಾನ ಪಡೆದಿದ್ದಾರೆ.

ವೀರೇಶ್ ಬಿ. ಪಾಟೀಲ್

ಮೊದಲ 10 ಸ್ಥಾನಗಳ ಪೈಕಿ ಐವರು ಕರ್ನಾಟಕದ ವಿದ್ಯಾರ್ಥಿಗಳು. ಅಲ್ಲದೆ, ಮೊದಲ 100 ಸ್ಥಾನಗಳ ಪೈಕಿ 44 ಸ್ಥಾನಗಳು ರಾಜ್ಯದ ವಿದ್ಯಾರ್ಥಿಗಳ ಪಾಲಾಗಿವೆ.

ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳ ಪೈಕಿ 4,660 ವಿದ್ಯಾರ್ಥಿಗಳು ಶೇ 90 ರಿಂದ ಶೇ 100 ರಷ್ಟು ಅಂಕ ಗಳಿಸಿದ್ದಾರೆ. 4,343 ವಿದ್ಯಾರ್ಥಿಗಳು ಶೇ 80 ರಿಂದ ಶೇ 90ರಷ್ಟು ಅಂಕ ಗಳಿಸಿದ್ದಾರೆ.

ದೇಶದಾದ್ಯಂತ 66,304 ವಿದ್ಯಾರ್ಥಿಗಳು ಕಾಮೆಡ್-ಕೆ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ಈ ಪೈಕಿ, 44,111 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ ಕರ್ನಾಟಕದ 16,632 ವಿದ್ಯಾರ್ಥಿಗಳು ಮತ್ತು ಹೊರ ರಾಜ್ಯಗಳಿಂದ 27,479 ವಿದ್ಯಾರ್ಥಿಗಳು ಇದ್ದರು.

‘ಕಳೆದ ವರ್ಷದಂತೆ ಈ ಬಾರಿ ಕೂಡಾ ಆನ್‌ಲೈನ್ ಮೂಲಕ ಕೌನ್ಸೆಲಿಂಗ್ ನಡೆಸಿ ಎಂಜಿನಿಯರಿಂಗ್ ಸೀಟುಗಳಿಗೆ ಪ್ರವೇಶ ನೀಡಲಾಗುವುದು. ವಿದ್ಯಾರ್ಥಿಗಳು ಎಲ್ಲ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. ತಜ್ಞರ ಸಮಿತಿ ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಮುಂದಿನ ಪ್ರಕ್ರಿಯೆಯನ್ನು ಪ್ರಕಟಿಸಲಾಗುವುದು’ ಎಂದು ಕಾಮೆಡ್-ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಎಸ್. ಕುಮಾರ್ ತಿಳಿಸಿದ್ದಾರೆ.

4ನೇ ಪುಟ ನೋಡಿ

ಮೊದಲ ಹತ್ತು ಸ್ಥಾನ ಪಡೆದ ವಿದ್ಯಾರ್ಥಿಗಳು

- ವೀರೇಶ್ ಬಿ. ಪಾಟೀಲ್- ಬೆಂಗಳೂರು
- ಆರ್. ಶಿವ ಸುಧಾನ್ – ಬೆಂಗಳೂರು
- ಗೌರವ್ ಕಟಾರಿಯಾ- ರಾಜಸ್ಥಾನ
- ಕಟಿಕೇಲ ಪುನೀತ್ ಕುಮಾರ್- ಆಂಧ್ರಪ್ರದೇಶ
- ರಿಶಿತ್ ಶ್ರೀವಾಸ್ತವ- ರಾಜಸ್ಥಾನ
- ಭಾವೇಶ್ ಗುರ್ನಾನಿ- ರಾಜಸ್ಥಾನ
- ಎ.ಶ್ರೀಕರ- ಬೆಂಗಳೂರು
- ಪಿ. ನಿಶ್ಚಿತ್- ಮೈಸೂರು
- ದೀಪಕ್ ಚೌಧರಿ- ಉತ್ತರ ಪ್ರದೇಶ
- ಎಂ. ಶ್ರೀಹರ್ಷ ಭಟ್- ಬಳ್ಳಾರಿ

ಡೀಸೆಲ್ ದರ 25 ಪೈಸೆ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಭಾನುವಾರ ಡೀಸೆಲ್ ದರವನ್ನು ಲೀಟರಿಗೆ 25 ಪೈಸೆ ಹೆಚ್ಚಿಸಿವೆ. ಪೆಟ್ರೋಲ್ ದರದಲ್ಲಿ ಬದಲಾವಣೆ ಆಗಿಲ್ಲ.

ಈ ದರ ಏರಿಕೆಯಿಂದ ಬೆಂಗಳೂರಿನಲ್ಲಿ ಡೀಸೆಲ್ ದರ ₹94.51ಕ್ಕೆ ತಲುಪಿದೆ. ದೆಹಲಿಯಲ್ಲಿ ಡೀಸೆಲ್ ದರ ₹ 89.07ಕ್ಕೆ, ಮುಂಬೈನಲ್ಲಿ ₹ 96.68ಕ್ಕೆ ಏರಿಕೆ ಕಂಡಿದೆ.

ಸೆಪ್ಟೆಂಬರ್ 24ರಂದು ಡೀಸೆಲ್ ದರವನ್ನು ಲೀಟರಿಗೆ 20 ಪೈಸೆ ಹೆಚ್ಚಿಸಲಾಗಿತ್ತು. ಆಗ ಸಹ ಪೆಟ್ರೋಲ್ ದರದಲ್ಲಿ ಬದಲಾವಣೆ ಮಾಡಿರಲಿಲ್ಲ. ಬ್ರೆಂಟ್ ಕಚ್ಚಾತೈಲ ದರವು ವಾರದಲ್ಲಿ ಶೇ 2ರಷ್ಟು ಏರಿಕೆ ಕಂಡಿದ್ದು ಬ್ಯಾರಲ್‌ಗೆ 77.50 ಡಾಲರ್‌ಗಳಿಗೆ ತಲುಪಿದೆ.

ಹಲಸೂರು ಕೆರೆ ಮಾಲಿನ್ಯ: ಎನ್‌ಜಿಟಿ ಸಮಿತಿ ಶಿಫಾರಸು

₹23 ಕೋಟಿ ಪರಿಹಾರ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಹಲಸೂರು ಕೆರೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು ಜಲಮಂಡಳಿ ಮತ್ತು ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್‌ನಿಂದ (ಎಂಇಜಿ) ಪರಿಸರ ನಷ್ಟದ ಪರಿಹಾರವಾಗಿ ₹ 23.71 ಕೋಟಿ ಪಡೆಯುವಂತೆ ರಾಷ್ಟ್ರೀಯ ಹಸಿರು ನ್ಯಾಯಪೀಠ (ಎನ್‌ಜಿಟಿ) ನೇಮಿಸಿದ್ದ ಜಂಟಿ ಸಮಿತಿ ಶಿಫಾರಸು ಮಾಡಿದೆ.

ಕೆರೆಯ ಸ್ವಚ್ಛತೆ ಮತ್ತು ನೀರಿನ ಗುಣಮಟ್ಟ ಕಾಯ್ದುಕೊಳ್ಳಲು ಸಮಿತಿಯು ಈ ಹಿಂದೆ (2020ರ ಆಗಸ್ಟ್ 10ರಂದು) ನೀಡಿದ್ದ ಶಿಫಾರಸುಗಳು ಪಾಲನೆ ಆಗುತ್ತಿವೆಯೋ, ಇಲ್ಲವೋ ಎಂಬುದನ್ನು ಮತ್ತೆ ಪರಿಶೀಲಿಸಿರುವ ಜಂಟಿ ಸಮಿತಿಯು ಎನ್‌ಜಿಟಿಗೆ ವರದಿ ಸಲ್ಲಿಸಿದೆ.

ಹಿಂದಿನ ಶಿಫಾರಸುಗಳನ್ನು ಬಿಬಿಎಂಪಿ, ಜಲಮಂಡಳಿ ಮತ್ತು ಎಂಇಜಿಗಳು ಭಾಗಶಃ ಜಾರಿಗೊಳಿಸಿವೆ. ನೀರಿನ ಗುಣಮಟ್ಟದಲ್ಲಿ ಸುಧಾರಣೆಯಾಗಿಲ್ಲ. ಹೀಗಾಗಿ ಈ ಪ್ರಾಧಿಕಾರಗಳಿಂದ ಪರಿಹಾರ ಪಡೆಯಬಹುದು ಎಂದು ಸಮಿತಿ ತಿಳಿಸಿದೆ.

ಟ್ಯಾನರಿ ರಸ್ತೆಯಲ್ಲಿ ನಡೆಯುತ್ತಿರುವ ಕಸಾಯಿಖಾನೆ ಹಾಗೂ ಕಲುಷಿತ ನೀರಿನ ಶುದ್ಧೀಕರಣ ಘಟಕದ ಕಾರ್ಯಾಚರಣೆಯಲ್ಲಿ ಸರಿಯಾದ ಮಾನದಂಡಗಳನ್ನು ಅನುಸರಿಸದ ಕಾರಣಕ್ಕೆ ಬಿಬಿಎಂಪಿಯಿಂದ ₹17.83 ಕೋಟಿ, ಹಲಸೂರು ಕೆರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 2 ಎಂಎಲ್‌ಡಿ ಕಲುಷಿತ ನೀರಿನ ಶುದ್ಧೀಕರಣ ಘಟಕದಲ್ಲಿ (ಎಸ್‌ಟಿಪಿ) ಸೂಕ್ತ ಮಾನದಂಡಗಳನ್ನು ಪಾಲಿಸದ ಕಾರಣಕ್ಕೆ ಜಲಮಂಡಳಿಯಿಂದ ₹ 2.94 ಕೋಟಿ ಹಾಗೂ 100 ಕೆಎಲ್‌ಡಿ ಎಸ್‌ಟಿಪಿಯಲ್ಲೂ ನಿಗದಿತ ಮಾನದಂಡಗಳನ್ನು ಪಾಲಿಸದ ಕಾರಣಕ್ಕೆ ಎಂಇಜಿಯಿಂದ ₹ 2.94 ಕೋಟಿ ಪರಿಹಾರ ಪಡೆಯಬಹುದು ಎಂದು ಸಮಿತಿ ಶಿಫಾರಸು ಮಾಡಿದೆ.

ಒಳಚರಂಡಿಯ ನೀರು ಹಲಸೂರು ಕೆರೆ ಸೇರುತ್ತಿರುವುದರಿಂದ ನೀರು ಕಲುಷಿತಗೊಂಡು, ಗುಣಮಟ್ಟ ಕುಸಿದಿತ್ತು. ಈ ಕಾರಣದಿಂದ ಎನ್‌ಜಿಟಿ ಸ್ವಯಂ ಪ್ರೇರಣೆಯಿಂದ ವಿಚಾರಣೆ ಕೈಗೆತ್ತಿಕೊಂಡು, ಪರಿಶೀಲನೆಗಾಗಿ ಜಂಟಿ ಸಮಿತಿ ರಚಿಸಿತ್ತು.

ಈ ಜಂಟಿ ಸಮಿತಿಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಿಬಿಎಂಪಿ ಮತ್ತು ರಾಜ್ಯ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡಿದೆ.

ಆರ್‌ಟಿಒ, ಎಆರ್‌ಟಿಒ, ಐಎಂವಿ ಅಧಿಕಾರಿಗಳ ಕೊರತೆ

ಸಾರಿಗೆ ಇಲಾಖೆ: ಶೇ 55 ಹುದ್ದೆ ಖಾಲಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ವರಮಾನ ತಂದು ಕೊಡುವ ಇಲಾಖೆಗಳಲ್ಲಿ ಮೂರನೇ ಸ್ಥಾನದಲ್ಲಿರುವ ಸಾರಿಗೆ ಇಲಾಖೆಯಲ್ಲಿ ಶೇ 55ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ.

ಸಾರಿಗೆ ನಿಯಮ ಉಲ್ಲಂಘನೆ ತಡೆಯುವಲ್ಲಿ ಮಹತ್ತರ ಪಾತ್ರ ನಿರ್ವಹಿಸುವ ಹುದ್ದೆಗಳೆಂದೇ ಗುರುತಿಸಿಕೊಂಡಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ), ಹಿರಿಯ ಮೋಟಾರು ವಾಹನ ನಿರೀಕ್ಷಕರು, ಮೋಟಾರು ವಾಹನ ನಿರೀಕ್ಷಕ (ಐಎಂವಿ) ಹುದ್ದೆಗಳು ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಇವೆ.

ಈ ಮೂರು ವೃಂದದ ಒಬ್ಬ ಅಧಿಕಾರಿ ಎರಡರಿಂದ ಮೂರು ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಬ್ಬಂದಿ ಕೊರತೆಯಿಂದ ಚೆಕ್ ಪೋಸ್ಟ್ ಮತ್ತು ಕಚೇರಿ ಎರಡೂ ಕಡೆ ಕೆಲಸ ಮಾಡಬೇಕಾದ ಒತ್ತಡ ಇದೆ.

‘ಅಪಘಾತಗಳು ಸಂಭವಿಸಿದ ಸಂದರ್ಭಗಳಲ್ಲಿ ಸುಪ್ರೀಂಕೋರ್ಟ್ ನಿರ್ದೇಶನದಂತೆ ರಸ್ತೆ ಸುರಕ್ಷತಾ ನಿಯಮದನ್ವಯ ಘಟನೆ ನಡೆದ ಸ್ಥಳಕ್ಕೆ ಅನುಗುಣವಾಗಿ ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಹೆದ್ದಾರಿ ಎಂಜಿನಿಯರ್‌ಗಳು, ಪೊಲೀಸರು ಮತ್ತು ಮೋಟಾರು ವಾಹನ ನಿರೀಕ್ಷಕರು ತೆರಳಿ ಜಂಟಿ ಸಮೀಕ್ಷೆ ನಡೆಸಬೇಕು. ಇತರ ಕೆಲಸಗಳ ಜೊತೆಗೆ ಕೋರ್ಟ್ ಪ್ರಕರಣಗಳಿಗೂ ಓಡಾಡಬೇಕು. ಹೀಗಾಗಿ, ಕೆಲಸದ ಒತ್ತಡ ಹೆಚ್ಚಿದೆ’ ಎಂದು ಮೋಟಾರು ವಾಹನ ನಿರೀಕ್ಷಕರೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

ಐಎಂವಿ ಹುದ್ದೆಗಳಿಗೆ 2008 ರಲ್ಲಿ 103 ಮಂದಿಯನ್ನು ನೇಮಕಾತಿ ಮಾಡಿಕೊಂಡಿತ್ತು. ಆದರೆ, ಪೆಟ್ರೋಲ್‌ನಿಂದ ಚಾಲಿತ ಭಾರಿ ವಾಹನಗಳ (ಬಸ್, ಲಾರಿ) ದುರಸ್ತಿ ಬಗ್ಗೆ ಒಂದು ವರ್ಷದ ಸೇವಾನುಭವದ ಅರ್ಹತೆ ಇಲ್ಲ ಎಂಬ ಕಾರಣಕ್ಕೆ ಕೆಎಟಿ ಮತ್ತು ಹೈಕೋರ್ಟ್ ತೀರ್ಪಿನಿಂದ ಅವರೆಲ್ಲರೂ ಹುದ್ದೆ ಕಳೆದುಕೊಂಡರೂ, ಸುಪ್ರೀಂ ಕೋರ್ಟ್‌ನ ‘ಅಂತಿಮ ತೀರ್ಪಿಗೆ ಒಳಪಟ್ಟು’ ಮುಂದುವರಿಯುವಂತಾಗಿದೆ.

2019ರ ಜುಲೈ 4ರಂದು ಮತ್ತೆ 129 ಮೋಟಾರು ವಾಹನ ನಿರೀಕ್ಷಕ ಹುದ್ದೆಗೆ ಕೆಪಿಎಸ್‌ಸಿ ತಾತ್ಕಾಲಿಕ ಪಟ್ಟಿ ಪ್ರಕಟಿಸಿದೆ. ಆದರೆ, ಅಭ್ಯರ್ಥಿಗಳು ಪೆಟ್ರೋಲ್‌ನಿಂದ ಚಾಲಿತ ಭಾರಿ ವಾಹನಗಳ ದುರಸ್ತಿ ಬಗ್ಗೆ ಸೇವಾ ಅನುಭವದ ಪ್ರಮಾಣಪತ್ರ ಸಲ್ಲಿಸಬೇಕೆಂಬ ನಿಯಮದ ಕಾರಣಕ್ಕೆ ಹಲವರು ನಕಲಿ ಪ್ರಮಾಣಪತ್ರ ಸಲ್ಲಿಸಿದ್ದರು. ಹೀಗಾಗಿ, ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ದೂರಿ ಅನೇಕರು ಕೆಪಿಎಸ್‌ಸಿಗೆ ಆಕ್ಷೇಪ ಸಲ್ಲಿಸಿದ್ದರು. ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ.

ಅಂಕಿ-ಅಂಶಗಳು

2,781 ಮಂಜೂರಾದ ಒಟ್ಟು ಹುದ್ದೆ | **1,250** ಕಾರ್ಯನಿರತ | **1,531** ಖಾಲಿ

ಸಾರಿಗೆ ಇಲಾಖೆ	ಯಾವೆಲ್ಲ ಹುದ್ದೆಗಳಲ್ಲಿ ಹೆಚ್ಚು ಖಾಲಿ		
ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ
ಪ್ರಾದೇಶಿಕ ಸಾರಿಗೆ ಅಧಿಕಾರಿ	47	36	11
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	103	26	77
ಹಿರಿಯ ಮೋಟಾರು ವಾಹನ ನಿರೀಕ್ಷಕರು	214	86	128
ಮೋಟಾರು ವಾಹನ ನಿರೀಕ್ಷಕರು	430	122	308
ಪ್ರಥಮ ದರ್ಜೆ ಸಹಾಯಕರು	436	271	165
ದ್ವಿತೀಯ ದರ್ಜೆ ಸಹಾಯಕರು	546	192	354
ಬೆರಳಚ್ಚುಗಾರರು	116	33	83

ಐಎಂವಿ ನೇಮಕ: ಹಸಿರುನಿಶಾನೆ

ಐಎಂವಿ 129 ಹುದ್ದೆಯ ತಾತ್ಕಾಲಿಕ ಪಟ್ಟಿಗೆ ಸಂಬಂಧಿಸಿದಂತೆ ಇತ್ತೀಚೆಗೆ ತೀರ್ಪು ನೀಡಿರುವ ಹೈಕೋರ್ಟ್, ‘ಅರ್ಹತೆ’ಯ ಗೊಂದಲಕ್ಕೆ ತೆರೆ ಎಳೆದಿದೆ. ಪೆಟ್ರೋಲ್‌ನಿಂದ ಚಾಲಿತ ಭಾರಿ ವಾಹನಗಳ (ಬಸ್, ಲಾರಿ) ದುರಸ್ತಿ ಬಗ್ಗೆ ಒಂದು ವರ್ಷದ ಸೇವಾ ಅನುಭವ ಪ್ರಮಾಣಪತ್ರ ಮತ್ತು ಭಾರಿ ವಾಹನ (ಹೆವಿ) ಚಾಲನಾ ಪ್ರಮಾಣಪತ್ರಬೇಕೆಂಬ ಅರ್ಹತೆಯನ್ನು ಮೋಟಾರು ವಾಹನ ಕಾಯ್ದೆಯಿಂದ 2019ರ ಮಾರ್ಚ್ 8ರಂದುಕೇಂದ್ರ ತೆಗೆದುಹಾಕಿದೆ. ಹೀಗಾಗಿ, ರಾಜ್ಯ ಸರ್ಕಾರ ಕೂಡಾ ಕಾಯ್ದೆಗೆ ತಿದ್ದುಪಡಿ ಮಾಡಿಕೊಂಡಿದೆ. ಈ ಬಗ್ಗೆ ಕೆಪಿಎಸ್‌ಸಿ ಸಲ್ಲಿಸಿರುವ ಪ್ರಮಾಣಪತ್ರವನ್ನು ಹೈಕೋರ್ಟ್ ಪರಿಗಣಿಸಿದೆ. ಹೀಗಾಗಿ, ಸ್ಥಗಿತಗೊಂಡಿದ್ದ ಆಯ್ಕೆ ಪ್ರಕ್ರಿಯೆ ಮುಂದುವರಿಸಲು ಇದ್ದ ತಡೆ ನಿವಾರಣೆಯಾಗಿದೆ.

ವಸಂತನಗರ:ಲಿಡ್‌ಕರ್ ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಲಿಡ್‌ಕರ್ ಬ್ರ್ಯಾಂಡ್‌ನ ನೂತನ ಮಾರಾಟ ಮಳಿಗೆಯನ್ನು ವಸಂತನಗರದಲ್ಲಿ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು.

ಇದುವರೆಗೆ ಲಿಡ್‌ಕರ್ ನಿಗಮವು ರಾಜ್ಯದಾದ್ಯಂತ 15 ಮಾರಾಟ ಮಳಿಗೆಗಳನ್ನು ಹೊಂದಿತ್ತು. ವಸಂತನಗರದಲ್ಲಿ ಆರಂಭಿಸಿರುವ ಮಳಿಗೆಯು 16ನೇಯದ್ದು.

ಕುಶಲಕರ್ಮಿಗಳು ತಯಾರಿಸುವ ಉತ್ಪನ್ನಗಳನ್ನು ಖರೀದಿಸಿ ಲಿಡ್‌ಕರ್ ಬ್ರ್ಯಾಂಡ್ ಅಡಿ ಮಳಿಗೆಗಳಲ್ಲಿ ಹಾಗೂ ವಸ್ತು ಪ್ರದರ್ಶನಗಳಲ್ಲಿ ಮಾರಾಟ ಮಾಡಲಾಗುತ್ತದೆ. ಲಿಡ್‌ಕರ್ ಮಾರಾಟ ಮಳಿಗೆಗಳನ್ನು ಪ್ರತಿಷ್ಠಿತ ಬ್ರ್ಯಾಂಡೆಡ್ ಮಾರಾಟ ಮಳಿಗೆಗಳಿಗೆ ಸಮನಾಗಿ ಉನ್ನತೀಕರಣಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ ಬೆಂಗಳೂರಿನ ಜಯನಗರ ಮತ್ತು ಮೈಸೂರಿನಲ್ಲಿರುವ ಮಳಿಗೆಗಳನ್ನು ನೂತನ ಬ್ರ್ಯಾಂಡಿಂಗ್‌ನೊಂದಿಗೆ ಉನ್ನತೀಕರಿಸಲಾಗಿದೆ. ಮುಂದಿನ ದಿನಗಳಲ್ಲಿ ಬೆಳಗಾವಿ ಮತ್ತು ಮಂಗಳೂರಿನಲ್ಲಿ ನೂತನ ಬ್ರ್ಯಾಂಡಿಂಗ್‌ನೊಂದಿಗೆ ಮಳಿಗೆಗಳನ್ನು ಆರಂಭಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಇದೇ ಸಂದರ್ಭದಲ್ಲಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಪ್ರೊ. ಎನ್. ಲಿಂಗಣ್ಣ, ಸಂಸದರಾದ ಪಿ.ಸಿ. ಮೋಹನ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಡಾ. ಎನ್. ನಾಗಾಂಬಿಕಾ ದೇವಿ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಾದ ಡಾ. ರವಿ ಕುಮಾರ್ ಸುರಪುರ, ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಹೆಚ್. ನಟರಾಜು ಉಪಸ್ಥಿತರಿದ್ದರು.

ನಿಗಮದಲ್ಲಿ ಆನ್‌ಲೈನ್ ಮಾರಾಟ ವ್ಯವಸ್ಥೆ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ. 'ಭೌಗೋಳಿಕ ಸೂಚಿ' (ಜಿಯೊಗ್ರಾಫಿಕಲ್ ಇಂಡಿಕೇಷನ್) ಪಡೆದಿರುವ ಕೊಲ್ಹಾಪುರಿ ಪಾದರಕ್ಷೆಗಳ ಮಾರಾಟಕ್ಕೆ ಎಂ.ಜಿ ರಸ್ತೆಯಲ್ಲಿರುವ ಕಾವೇರಿ ಎಂಪೋರಿಯಮ್‌ನಲ್ಲಿ ಕೌಂಟರ್ ತೆರೆಯಲಾಗಿದೆ ಎಂದು ತಿಳಿಸಿದೆ.

ವಸಂತ ನಗರದಲ್ಲಿನ ಲಿಡ್‌ಕರ್ ಬ್ರ್ಯಾಂಡ್‌ನ ನೂತನ ಮಳಿಗೆ ಉದ್ಘಾಟಿಸಿದ ಸಚಿವ ಕೋಟ ಶ್ರೀನಿವಾಸ ಪೂಜಾರಿ ವಿವಿಧ ಉತ್ಪನ್ನಗಳನ್ನು ವೀಕ್ಷಿಸಿದರು. ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಎಚ್. ನಟರಾಜು, ನಿಗಮದ ಅಧ್ಯಕ್ಷ ಪ್ರೊ. ಎನ್. ಲಿಂಗಣ್ಣ, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಎನ್. ನಾಗಾಂಬಿಕಾ ದೇವಿ ಇದ್ದರು.

ಹೊಸ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತ ಸಂಘಟನೆಗಳಿಂದ 'ಭಾರತ ಬಂದ್'ಗೆ ಕರೆ

'ಪ್ರಜಾಸತ್ತಾತ್ಮಕ ಹೋರಾಟಕ್ಕೆ ನಾಂದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತ ಸಂಘಟನೆಗಳು ಸೋಮವಾರ ಕರೆ ನೀಡಿರುವ ಭಾರತ ಬಂದ್‌ಗೆ ಹಲವು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ.

'ಬಂದ್‌ಗೆ ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯು ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ಈ ಬಂದ್ ದೇಶದೆಲ್ಲೆಡೆ ಪ್ರಜಾಸತ್ತಾತ್ಮಕ ಹೋರಾಟಗಳ ಹೊಸ ಪರ್ವಕ್ಕೆ ನಾಂದಿ ಹಾಡಲಿದೆ' ಎಂದು ವೇದಿಕೆ ಅಧ್ಯಕ್ಷ ಬಿ.ಆರ್. ಮಂಜುನಾಥ್ ತಿಳಿಸಿದ್ದಾರೆ.

'ಕೇಂದ್ರ ಸರ್ಕಾರದ ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ. ಜನವಿರೋಧಿ ಶಿಕ್ಷಣ ನೀತಿ ಜಾರಿಗೊಳಿಸಲು ಮುಂದಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಹನಗಳ ಸಂಚಾರಕ್ಕೆ ಒತ್ತಾಯ ಇಲ್ಲ: 'ರೈತರ ಹೋರಾಟಕ್ಕೆ ಬೆಂಬಲ ಇದೆ. ಆದರೆ, ವಾಹನಗಳ ಸಂಚಾರ ಸ್ಥಗಿತಗೊಳಿಸುವಂತೆ ಯಾರನ್ನು ಒತ್ತಾಯಿಸುವುದಿಲ್ಲ' ಎಂದು ಕರ್ನಾಟಕ ರಾಜ್ಯ ಖಾಸಗಿ ವಾಹನಗಳ ಚಾಲಕರ ಸಂಘದ ಅಧ್ಯಕ್ಷ ಪುಟ್ಟಲಿಂಗಯ್ಯ ತಿಳಿಸಿದ್ದಾರೆ.

'ಎರಡು ಲಾಕ್‌ಡೌನ್‌ಗಳಿಂದ ತತ್ತರಿಸಿದ್ದೇವೆ. ಸಾಲದ ಹೊರೆ ಹೆಚ್ಚಾಗಿದೆ. ಪೆಟ್ರೋಲ್,ಡೀಸೆಲ್ ದರವೂ ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ದಿನ ದುಡಿಮೆ ನಿಲ್ಲಿಸಿದರೆ ಕಷ್ಟ ವಾಗುತ್ತದೆ. ರೈತರ ಹೋರಾಟಕ್ಕೆ ನೈತಿಕ ಬೆಂಬಲ ನೀಡುತ್ತೇವೆ' ಎಂದು ಓಲಾ–ಉಬರ್ ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ಹೇಳಿದ್ದಾರೆ.

'ಹೋಟೆಲ್ ಬಂದ್ ಮಾಡಿದರೆ ರೈತರಿಗೆ ನಷ್ಟ': 'ಬಂದ್‌ಗೆ ಬೆಂಬಲ ಇಲ್ಲ. ಕೃಷಿ ಉತ್ಪನ್ನಗಳ ಮೇಲೆಯೇ ಹೋಟೆಲ್ ಉದ್ಯಮ ಅವಲಂಬಿತವಾಗಿರುವುದರಿಂದ ಹೋಟೆಲ್‌ಗಳನ್ನು ಬಂದ್ ಮಾಡಿದರೆ ರೈತರಿಗೆ ನಷ್ಟವಾಗುತ್ತದೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.

'ಭಾರತ್ ಬಂದ್'ಗೆ ಕಾಂಗ್ರೆಸ್ ಬೆಂಬಲ– ಡಿಕೆಶಿ

ಬೆಂಗಳೂರು: ರೈತರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೋಮವಾರ (ಸೆ.27) ನಡೆಯಲಿರುವ 'ಭಾರತ್ ಬಂದ್' ಕರೆಗೆ ರಾಜ್ಯ ಕಾಂಗ್ರೆಸ್ ಬೆಂಬಲ ವ್ಯಕ್ತಪಡಿಸಿದೆ.

'ರೈತರ ಹಕ್ಕೊತ್ತಾಯದ ಶಾಂತಿಯುತ ಬಂದ್ ಕರೆಗೆ ಪಕ್ಷದ ಬೆಂಬಲವಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

'ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ರೈತ ವಿರೋಧಿ ಧೋರಣೆಯಿಂದ ದೇಶದ ಬಹುಸಂಖ್ಯಾತ ಅನ್ನದಾತ ಸಮುದಾಯ ವಿಷಮ ಪರಿಸ್ಥಿತಿ ಎದುರಿಸುತ್ತಿದೆ. ಕೆಲವೇ ಮಂದಿ ಉದ್ಯಮಿಗಳ ಬೆಂಬಲಕ್ಕೆ ನಿಂತಿರುವ ಬಿಜೆಪಿ ಇಡೀ ಶ್ರಮಿಕ ಜನಸಮುದಾಯವನ್ನು ವಂಚಿಸುತ್ತಿದೆ' ಎಂದು ದೂರಿದ್ದಾರೆ.

'ಪ್ರಧಾನಿ ಮೋದಿ ಸರ್ಕಾರದ ಕರಾಳ ಶಾಸನ, ನೀತಿ, ಧೋರಣೆ ವಿರುದ್ಧ ರೈತರು ದಿಲ್ಲಿಯ ರಸ್ತೆಗಳಲ್ಲಿ ವರ್ಷಗಳಿಂದ ಹೋರಾಟ ನಡೆಸಿದ್ದಾರೆ. ರೈತರ ಹೋರಾಟವನ್ನು ಹತ್ತಿಕ್ಕುವ ನಿರಂತರ ಪ್ರಯತ್ನ ನಡೆಸಿದ ಬಿಜೆಪಿ ಸರ್ಕಾರ, ಅವರ ನ್ಯಾಯಯುತ ಬೇಡಿಕೆಗಳನ್ನು ಕೇಳುವ ಕನಿಷ್ಠ ಸೌಜನ್ಯ ತೋರಿಲ್ಲ. ಬಿಜೆಪಿಯ ಅಮಾನವೀಯ ಮನಸ್ಥಿತಿಗೆ ಇದು ನಿದರ್ಶನ' ಎಂದು ಕಿಡಿಕಾರಿದ್ದಾರೆ.

'ರೈತರ ಹಿತರಕ್ಷಣೆಗಾಗಿ ದಶಕದ ಹಿಂದೆಯೇ ಭೂಸ್ವಾಧೀನ ಕಾಯ್ದೆಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜಾರಿ ಮಾಡಿತ್ತು. ಆದರೆ, ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಸಾಗಿದ ಮೋದಿ ಸರ್ಕಾರ, ಏಳು ವರ್ಷಗಳಲ್ಲಿ ದೇಶದ ರೈತರ ಬದುಕನ್ನು ಅಸಹನೀಯಗೊಳಿಸಿದೆ' ಎಂದು ಶಿವಕುಮಾರ್ ಹೇಳಿದ್ದಾರೆ.

ಪರೀಕ್ಷೆ ಮುಂದೂಡಿಕೆ

ಭಾರತ ಬಂದ್ ಕಾರಣಕ್ಕೆ ಸೋಮವಾರ ನಡೆಯಬೇಕಾಗಿದ್ದ ಪರೀಕ್ಷೆಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯ ಮುಂದೂಡಿದೆ.

ಎಲ್ಲ ಸ್ನಾತಕ, ಸ್ನಾತಕೋತ್ತರ ಹಾಗೂ ಬಿ.ಇಡಿ. ಪದವಿಗಳ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಕುಲಸಚಿವ (ಮೌಲ್ಯಮಾಪನ) ಪ್ರೊ.ಬಿ. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಂದ್‌ಗೆ ನೈತಿಕ ಬೆಂಬಲ ಮಾತ್ರ ನೀಡಲಾಗಿದೆ. ಸ್ವಯಂ ನಿರ್ಧಾರ ಕೈಗೊಳ್ಳುವಂತೆ ಆಟೋ ಚಾಲಕರಿಗೆ ತಿಳಿಸಿದ್ದೇವೆ.
ರುದ್ರಮೂರ್ತಿ, ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ ಅಧ್ಯಕ್ಷ

ನಾವು ರೈತರ ಮಕ್ಕಳಾಗಿ ಬಂದ್‌ಗೆ ನೈತಿಕ ಬೆಂಬಲ ಕೊಡುತ್ತೇವೆ. ಆದರೆ, ಬಸ್‌ಗಳ ಸಂಚಾರಕ್ಕೆ ಯಾವುದೇ ರೀತಿ ಅಡ್ಡಿ ಮಾಡುವುದಿಲ್ಲ. ನಾಲ್ಕು ನಿಗಮಗಳಲ್ಲಿ ಬಸ್‌ಗಳ ಸಂಚಾರಕ್ಕೆ ವ್ಯತ್ಯಯವಾಗುವುದಿಲ್ಲ.
ಆರ್. ಚಂದ್ರಶೇಖರ್, ಸಾರಿಗೆ ನೌಕರರ ಕೂಟದ ಅಧ್ಯಕ್ಷ

ಬಿಎಂಟಿಸಿ ಬಸ್‌ಗಳ ಸಂಚಾರದಲ್ಲಿ ಯಾವುದೇ ರೀತಿಯ ವ್ಯತ್ಯಯವಾಗುವುದಿಲ್ಲ. ಬಸ್‌ಗಳ ಸೇವೆ ಎಂದಿನಂತೆ ಇರಲಿದೆ.
ವಿ. ಅನ್ಬುಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ

'ಸೋಮವಾರ ಎಲ್ಲ ಹೋಟೆಲ್‌ಗಳು ತೆರೆದಿರುತ್ತವೆ. ಆದರೆ, ರೈತರಿಗೆ ನಾವು ಸದಾ ಬೆಂಬಲ ನೀಡುತ್ತಾ ಬಂದಿದ್ದೇವೆ. ರೈತ ಸಮುದಾಯದ ಜತೆ ಅನ್ಯೋನ್ಯ ಸಂಬಂಧ ಹೊಂದಿದ್ದೇವೆ' ಎಂದು ಹೇಳಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ ಸಂಖ್ಯೆ: 080-29560027
ಇ–ಮೇಲ್: dhobangalorerural@gmail.com

ದಿನಾಂಕ: 27/09/2021

ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಯ ನೇಮಕಾತಿಗಾಗಿ ಅರ್ಜಿ ಅಹ್ವಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಇಚ್ಚೆಯುಳ್ಳ ಅಭ್ಯರ್ಥಿಗಳು ಹೆಲ್ತ್ ಆಂಡ್ ವೆಲ್‌ನೆಸ್ ಸೆಂಟರ್, ಎನ್.ಎಚ್.ಎಂ. ಯೋಜನೆಯಡಿಯಲ್ಲಿ ಎಂ.ಎಲ್.ಎಚ್.ಪಿ ಹುದ್ದೆಗಳ ಕುರಿತು ವಿವರ ಕೆಳಗಿನಂತಿವೆ.

ಸಂಖ್ಯೆ	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ	ಮಾಸಿಕ ಸಂಭಾವನೆ:
1	ಸಮುದಾಯ ಆರೋಗ್ಯ ಅಧಿಕಾರಿಗಳು (ಸಿ.ಹೆಚ್.ಓ)	142 ಹುದ್ದೆ	ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಎಸ್ಸಿ ನರ್ಸಿಂಗ್/ಪೋಸ್ಟ್ ಬಿಎಸ್ಸಿ ನರ್ಸಿಂಗ್ ಜೊತೆಗೆ ರಾಜ್ಯ ನರ್ಸಿಂಗ್ ಕೌನ್ಸಿಲ್ ಕೆ.ಎನ್.ಸಿ/ಐ.ಎನ್.ಸಿ ನಿಂದ ನೋಂದಣಿ ಹೊಂದಿರಬೇಕು, ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಪ್ರಾವಿಣ್ಯತೆ ಹೊಂದಿರಬೇಕು.	ರೂ.22,000/– (ಪ್ರತಿ ತಿಂಗಳಿಗೆ) ಜೊತೆಗೆ ಹೆಚ್ಚುವರಿಯಾಗಿ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ರೂ. 8,000/–ವರೆಗೆ ನೀಡಲಾಗುವುದು.

ವಯೋಮಿತಿ: ಸಾಮಾನ್ಯ ಅಭ್ಯರ್ಥಿ : 35 ವರ್ಷ; ಎಸ್.ಸಿ/ಎಸ್.ಟಿ/ಪ್ರ.ವರ್ಗ 1 / ಮಾಜಿ ಸೈನಿಕ : 40 ವರ್ಷ; 2ಎ/2ಬಿ/3ಎ/3ಬಿ ಹಾಗೂ ಇತರೆ ಹಿಂದುಳಿದ ವರ್ಗ (ರಾಜ್ಯ) : 38ವರ್ಷ.
ಅರ್ಜಿಯನ್ನು ಕೇವಲ ಆನ್‌ಲೈನ್ ಮುಖಾಂತರ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸಲ್ಲಿಸಬೇಕು ಹಾಗೂ ಪರೀಕ್ಷೆಯನ್ನು ಆನ್‌ಲೈನ್ ಮುಖಾಂತರ ನೆಡೆಸಲಾಗುವುದು. (ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಸಂಪರ್ಕಿಸಬಹುದು)

ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ	27/09/2021 –11:30 am
ಹಣ ಪಾವತಿಗಾಗಿ ಆನ್‌ಲೈನ್ ಗೇಟ್ವೇ ಪ್ರಾರಂಭ ದಿನಾಂಕ	29/09/2021 – 1:30 pm
ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	18/10/2021 (ಸಾಯಂಕಾಲ 5.00 ಗಂಟೆವರೆಗೆ)
ಲಿಖಿತ ಪರೀಕ್ಷೆ ಮತ್ತು ಫಲಿತಾಂಶ ಪ್ರಕಟಣೆ ದಿನಾಂಕ	23/10/2021
ಮೂಲ ದಾಖಲೆಗಳ ಪರಿಶೀಲನೆ ಪ್ರಾರಂಭ	26/10/2021 ರಂದು ಪ್ರಾರಂಭ

ಹೆಚ್ಚಿನ ಮಾಹಿತಿಗಾಗಿ http://www.karnataka.gov.in/hfw ಸಂಪರ್ಕಿಸಬಹುದು.
ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳಿಗಾಗಿ ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿಕ/ಬೆಂಗ್ರಾಜಿ/218/Maa Comm/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜೆಡಿಎಸ್‌ನ ಹಲವು ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ

ಯಲಹಂಕ: 'ಭಾರತ ದೇಶದ ಇತಿಹಾಸದಲ್ಲಿ ನರೇಂದ್ರ ಮೋದಿ ಅವರಂತೆ ಸುಳ್ಳುಗಳನ್ನು ಹೇಳಿದ ಪ್ರಧಾನಿಯನ್ನು ಹಿಂದೆಂದೂ ಕಂಡಿಲ್ಲ. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರಾಗಿದ್ದು, ಬಿಜೆಪಿ ಸರ್ಕಾರ ಸುಳ್ಳು ಉತ್ಪಾದಿಸುವ ಕಾರ್ಖಾನೆಯಾಗಿದೆ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಹೆಬ್ಬಾಳ ಮತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಗಳ ಕಾಂಗ್ರೆಸ್ ಪಕ್ಷದ ವತಿಯಿಂದ ಡಾಲರ್ಸ್ ಕಾಲೊನಿಯಲ್ಲಿ ಆಯೋಜಿಸಿದ್ದ ವಿವಿಧ ಪಕ್ಷಗಳ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಯಾದ ಸಮಾರಂಭದಲ್ಲಿ ಮಾತನಾಡಿದ ಅವರು, 'ಮೋದಿಯವರು ಮಾತೆತ್ತಿದರೆ ಅಚ್ಛೇ ದಿನ್ ಆಯೇಗ ಎಂದು ಹೇಳುತ್ತಾರೆ. ಆದರೆ, ಇಂದು ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ಏನನ್ನೂ ಕೊಂಡುಕೊಳ್ಳಲು ಆಗದೆ ಜನರು ಬದುಕಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದರು.

'ಇಂದು ಬೆಂಗಳೂರು ನಗರದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದರೆ, ಇದಕ್ಕೆ ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನೀಡಿದ ಅನುದಾನದಿಂದಲೇ ಹೊರತು, ಬಿಜೆಪಿ ಸರ್ಕಾರ ನಯಾಪೈಸೆಯನ್ನೂ ಕೊಟ್ಟಿಲ್ಲ. ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತದೆ. ಬಡವರಿಗೆ ಏಳು ಕೆಜಿಯಲ್ಲ, ಹತ್ತು ಕೆಜಿ ಅಕ್ಕಿಯನ್ನು ಉಚಿತವಾಗಿ ಕೊಡುತ್ತೇವೆ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ, ಶಿಕ್ಷಣ, ಉದ್ಯೋಗ ಸೇರಿದಂತೆ ಯಾವುದೇ ಹೊಸ ಕಾರ್ಯಕ್ರಮಗಳನ್ನು ರೂಪಿಸಿಲ್ಲ. ದೇಶದಲ್ಲಿ ರೈತರು ಒಂದು ವರ್ಷದಿಂದ ಹೋರಾಟ ಮಾಡುತ್ತಿದ್ದಾರೆ. ಅವರ ಸಮಸ್ಯೆಗಳನ್ನು ಬಗೆಹರಿಸದೆ ಬಂಡವಾಳಶಾಹಿಗಳ ಪರವಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ. ರೈತರ ಹೋರಾಟಗಳಿಗೆ ಕಾಂಗ್ರೆಸ್ ಎಂದಿಗೂ ಜೊತೆಯಾಗಿ ನಿಲ್ಲಲಿದೆ ಎಂದು ಘೋಷಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಶಾಸಕರಾದ ಕೃಷ್ಣಬೈರೇಗೌಡ, ಬೈರತಿ ಸುರೇಶ್ ಮಾತನಾಡಿದರು.

ಸೇರ್ಪಡೆ: 2018ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಎಂ.ಹನುಮಂತೇಗೌಡ, ಟಿ.ಜಿ.ಚಂದ್ರು, ಮಾಜಿ ಉಪಮೇಯರ್ ಎಂ.ಆನಂದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಟಿ.ಕೆ.ಗೋಪಾಲಯ್ಯ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿಯನ್ನು ತೊರೆದು 100ಕ್ಕೂ ಹೆಚ್ಚು ಮುಖಂಡರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕಾಂಗ್ರೆಸ್ ಮುಖಂಡ ಎಂ.ಆರ್. ಸೀತಾರಾಂ, ರವಿ, ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪುಷ್ಪಾ ಅಮರನಾಥ್, ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ, ಬಿಬಿಎಂಪಿ ಮಾಜಿ ಸದಸ್ಯರಾದ ಅಬ್ದುಲ್ ವಾಜಿದ್, ಎಂ.ಆನಂದಕುಮಾರ್, ಬೆಂಗಳೂರು ಉತ್ತರಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಜಕುಮಾರ್, ಮುಖಂಡರಾದ ಎಂ.ಎನ್.ಜಯಗೋಪಾಲಗೌಡ, ಎನ್. ಎನ್.ಶ್ರೀನಿವಾಸಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಎಂ.ಹನುಮಂತೇಗೌಡ, ಟಿ.ಜಿ.ಚಂದ್ರು, ಎಂ.ಆನಂದ್ ಮತ್ತಿತರರು ಜೆಡಿಎಸ್ ತೊರೆದು, ಕಾಂಗ್ರೆಸ್ ಸೇರ್ಪಡೆಯಾದರು. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ರಾಮಲಿಂಗಾರೆಡ್ಡಿ, ಕೃಷ್ಣಬೈರೇಗೌಡ, ಬೈರತಿ ಸುರೇಶ್ ಇತರರು ಇದ್ದರು.

ರಾಜು ಕ್ಷತ್ರಿಯ ಫೆಡರೇಷನ್‌ಗೆ ಗೌರವಾಧ್ಯಕ್ಷ ನೇಮಕ

ಬೆಂಗಳೂರು: ಸಮುದಾಯದ ಜನರಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ತಲುಪಿಸುವ ಹಾಗೂ ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಕರ್ನಾಟಕ ರಾಜು ಕ್ಷತ್ರಿಯ ಫೆಡರೇಷನ್ ಅಸ್ತಿತ್ವಕ್ಕೆ ಬಂದಿದ್ದು, ಇದರ ಗೌರವಾಧ್ಯಕ್ಷರಾಗಿ ರಾಧಾಕೃಷ್ಣ ರಾಜು ನೇಮಕಗೊಂಡಿದ್ದಾರೆ.

ಫೆಡರೇಷನ್‌ನ ಮೊದಲ ಸಾಮಾನ್ಯ ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಸಲಾಗಿದೆ.

'ರಾಜು ಕ್ಷತ್ರಿಯ ಸಮಾಜಕ್ಕೆ ಸಮಾಜ ಕಲ್ಯಾಣ ಹಾಗೂ ಇತರ ಇಲಾಖೆಗಳಿಂದ ವಿವಿಧ ಸೌಲಭ್ಯಗಳು ದೊರೆಯುತ್ತವೆ. ಇವು ಸಮುದಾಯದ ಜನರಿಗೆ ಸರಿಯಾಗಿ ತಲುಪುತ್ತಿಲ್ಲ. ಹೀಗಾಗಿ ಫೆಡರೇಷನ್ ರೂಪಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹಿಂದುಳಿದ ವರ್ಗಕ್ಕೆ ಕೋಟ್ಯಂತರ ರೂಪಾಯಿ ಅನುದಾನ ಲಭಿಸುತ್ತಿದೆ. ಇದರ ಬಗ್ಗೆಯೂ ಜನರಲ್ಲಿ ಅರಿವು ಮೂಡಿಸಬೇಕಿದೆ. ಜೊತೆಗೆ ಸಮುದಾಯದ ವಿದ್ಯಾರ್ಥಿಗಳಿಗೆ ಉದ್ಯೋಗ ಆಧಾರಿತ ಶಿಕ್ಷಣ ನೀಡುವುದಕ್ಕೂ ಒತ್ತು ನೀಡಬೇಕಿದೆ' ಎಂದು ರಾಧಾಕೃಷ್ಣ ರಾಜು ಹೇಳಿದರು.

ಒಕ್ಕೂಟದ ಅಧ್ಯಕ್ಷ ಕೆ.ಶಾಮರಾಜು 'ರಾಜು ಕ್ಷತ್ರಿಯ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಈ ಸಂಬಂಧ ಸರ್ಕಾರಕ್ಕೆ ಮನವಿ ಮಾಡಲಾಗುವುದು' ಎಂದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Vishweshwariah Layout

3BHK (2UNITS) SPACIOUS FLATS Sale,Less Price Under Construction on BDA 'A'Katha Site,Pre- Launch Offers (Investors Welcome): 9606631148/ 9606037596

RENTAL PROPERTIES

Accommodation Available

Commercial

1550 SQFT OFFICE space, 1st floor with workstations, cabins, 2 toilets, Lift, parking space- most prime area, NehruNagar, KumaraPark, near Reddy Petrol Bunk, Contact 9972856142

Flats

BRIGADE PANORAMA Mysore Road Near R.V.Engineering College 3& Half BHK Rent Rs.21900/- Lease-22 Lakhs Contact:9986033339

JOB OPPORTUNITIES

Teachers/ Professors

***ELITE PUBLIC** SCHOOL* Kempegowda layout Laggere Bangalore* Requires teachers* English, D.Ed / B,Ed Science/ Mathematics, B.Ed 9980200444, 9972223344

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

Wanted

JOBS FOR-WOMEN (Reliance)Age above 30yrs (Degree) Fixed Salary 18k to 23k, PF+ESI Malleswaram: 9343349670

BUSINESS

Business to Business

Financial Services

INVEST 20K to 5Lakhs in Trading, Multiple Businesses. Weekly/Monthly 10%Secured Fixed Returns.Investors, Referral, Freelancers Welcome. Good Regular Income. Contact:-7892818780. Bengaluru.

Medical

RETIRED RADIOLOGIST (30 years experience) seeks suitable engagement/ associateship on win-win basis around 15 km Chandapur (Hosur Road)9448477703

Business Offers

Finance

NRI'S INVESTMENT AndFinance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

PERSONAL

Announcements

PINK COLOUR Bajaj scooter having Registration No. CKW-2316 was sold to customer. He has not Re-Registered in his name. If the Vehicle is seen on the Road please inform to: 8861830680.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಕೆಪಿಸಿಸಿ ಪಟ್ಟಿ: ದೆಹಲಿಗೆ ಡಿಕೆಶಿ

ಬೆಂಗಳೂರು: ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿ ಅಂತಿಮಗೊಳಿಸುವುದು ಸೇರಿದಂತೆ ಪಕ್ಷ ಸಂಘಟನೆಯ ಕಾರ್ಯತಂತ್ರಗಳ ಕುರಿತು ಚರ್ಚಿಸಲು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ವರಿಷ್ಠರ ಭೇಟಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಮಧ್ಯಾಹ್ನ ದೆಹಲಿಗೆ ತೆರಳಿದ್ದಾರೆ.

ಎರಡು ದಿನ ದೆಹಲಿಯಲ್ಲಿದ್ದು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಶಿವಕುಮಾರ್ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜೆಡಿಎಸ್, ಬಿಜೆಪಿಯಿಂದ ಕಾಂಗ್ರೆಸ್ ಸೇರಲು ಮುಂದಾಗಿರುವವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಬಗ್ಗೆಯೂ ಅವರು ಹೈಕಮಾಂಡ್ ಜೊತೆ ಚರ್ಚಿಸಲಿದ್ದಾರೆ. ಜೆಡಿಎಸ್ ಶಾಸಕರಾದ ಜಿ. ಟಿ. ದೇವೇಗೌಡ ಮತ್ತು ಶ್ರೀನಿವಾಸಗೌಡ ಅವರು ಕಾಂಗ್ರೆಸ್ ಸೇರುವ ಇಂಗಿತವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಜೆಡಿಎಸ್‌ನ ಇನ್ನೂ ಕೆಲವು ಶಾಸಕರು ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಬಗೆಗಿನ ಸಾಧಕ– ಬಾಧಕಗಳ ಬಗ್ಗೆಯೂ ವರಿಷ್ಠರಿಗೆ ವಿವರಿಸಲಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿ ವರ್ಷದಿಂದ ನನೆಗುದಿಗೆ ಬಿದ್ದಿದೆ. ಪಟ್ಟಿ ಅಂತಿಮಗೊಳಿಸುವ ಬಗ್ಗೆ ಈಗಾಗಲೇ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಜೊತೆ ವರಿಷ್ಠರು ಚರ್ಚಿಸಿದ್ದಾರೆ. ಇತ್ತೀಚೆಗೆ ರಾಜ್ಯಕ್ಕೆ ಬಂದಿದ್ದ ಸುರ್ಜೇವಾಲಾ, ಜಿಲ್ಲಾಮಟ್ಟದ ನಾಯಕರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಪಕ್ಷದ ಮುಂಚೂಣಿಯ ಘಟಕಗಳ ನೇತೃತ್ವವನ್ನು ಹೊಸಬರಿಗೆ ವಹಿಸುವ, ಕೆಲವು ಜಿಲ್ಲಾ ಘಟಕಗಳ ಅಧ್ಯಕ್ಷರ ಬದಲಾವಣೆಯ ಬಗ್ಗೆಯೂ ಚರ್ಚೆ ನಡೆದಿದೆ.

ಉಚಿತ ಆರೋಗ್ಯ ಶಿಬಿರ...

ರಾಜರಾಜೇಶ್ವರಿ ನಗರದ ಬಿಇಎಂಎಲ್ ಬಡಾವಣೆಯ ಬಾಲಕೃಷ್ಣ ರಂಗಮಂದಿರದಲ್ಲಿ ಯಶಸ್ ಚಾರಿಟಬಲ್ ಟ್ರಸ್ಟ್, ಸ್ವಾತಿ ಜ್ಯೋತಿ ಮಹಿಳಾ ಸಹಕಾರಿ ಸಂಘ, ಲಯನ್ಸ್ ಕ್ಲಬ್ ಮತ್ತು ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಕೋವಿಡ್ ಲಸಿಕಾ ಕಾರ್ಯಕ್ರಮಕ್ಕೆ ಕೆಪಿಸಿಸಿ ಪ್ರಚಾರ ಸಮಿತಿ ಸಂಚಾಲಕ ಎಂ.ತಿಬ್ಬೇಗೌಡ ಚಾಲನೆ ನೀಡಿದರು. ಬಳಿಕ ಸುಮಾರು 5 ಸಾವಿರ ಬಡ ಕುಟುಂಬಗಳಿಗೆ ಸೀರೆ, ಕಂಬಳಿ, ಹೊದಿಕೆ ವಿತರಿಸಿದರು. ಕಾಂಗ್ರೆಸ್‌ನ ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಎಂ.ರಾಜ್‌ಕುಮಾರ್, ಕಾಂಗ್ರೆಸ್ ಮುಖಂಡರಾದ ಎಚ್.ಕುಸುಮಾ, ಬಿ.ಎಚ್.ಚಂದ್ರಶೇಖರ್, ಹನುಮಂತರಾಯಪ್ಪ, ಕೆಂಪೇಗೌಡ, ಕಿರುತೆರೆ ನಟಿ ಮುನಿರತ್ನಮ್ಮ, ಸುಮಿತ್ರಾ, ರಾಜೇಗೌಡ, ಶಿವು ಇದ್ದರು -ಪ್ರಜಾವಾಣಿ ಚಿತ್ರ

ಪತ್ನಿ ಜೊತೆ ಜಾಲಿರೈಡ್ ಹೊರಟಿದ್ದ ಜವೇರ್ ಮೇವಾನಿ

ಪಾನಮತ್ತನಾಗಿ ಅಡ್ಡಾದಿಡ್ಡಿ ಚಾಲನೆ; ಉದ್ಯಮಿ ಮಗ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತನಾಗಿ ಅಡ್ಡಾದಿಡ್ಡಿ ಕಾರು ಚಲಾಯಿಸಿ ಅಪಘಾತವನ್ನುಂಟು ಮಾಡಿದ್ದ ಆರೋಪದಡಿ ಜವೇರ್ ಮೇವಾನಿ ಎಂಬಾತನನ್ನು ಹಲಸೂರು ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

'ದೊಮ್ಮಲೂರು ರಸ್ತೆಯಲ್ಲಿ ಶನಿವಾರ ರಾತ್ರಿ ಅಪಘಾತವಾಗಿದೆ. ಪಾನಮತ್ತ ಚಾಲನೆ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ್ದ ಆರೋಪದಡಿ ಜವೇರ್‌ನನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣದ ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪತ್ನಿ ಜೊತೆ ಜಾಲಿರೈಡ್: 'ಉದ್ಯಮಿ ಕರೀಮ್ ಮೇವಾನಿ ಅವರ ಮಗ ಜವೇರ್, ಇಂದಿರಾನಗರದ ಪಬ್‌ನಲ್ಲಿ ಆಯೋಜಿಸಿದ್ದ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ. ಪಾರ್ಟಿ ಮುಗಿದ ನಂತರ ಐಷಾರಾಮಿ ಕಾರಿನಲ್ಲಿ ಪತ್ನಿ ಶ್ರೇಯಾ ಹಾಗೂ ಇಬ್ಬರು ಸ್ನೇಹಿತರ ಜೊತೆ ಜಾಲಿರೈಡ್‌ಗೆ ಹೊರಟಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಾನಮತ್ತನಾಗಿದ್ದ ಜವೇರ್, ಗಂಟೆಗೆ 100 ಕಿ.ಮೀ.ನಿಂದ 120 ಕಿ.ಮೀ ವೇಗದಲ್ಲಿ ಕಾರು ಚಲಾಯಿಸುತ್ತಿದ್ದ. ದೊಮ್ಮಲೂರು ರಸ್ತೆಯಲ್ಲಿ ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕಕ್ಕೆ ಕಾರು ಗುದ್ದಿಸಿದ್ದ. ನಂತರ, ರಸ್ತೆಯಲ್ಲಿ ಹೊರಟಿದ್ದ ಕ್ಯಾಬ್‌ಗೂ ಕಾರು ಡಿಕ್ಕಿ ಹೊಡೆಸಿದ್ದ. ಇದರಿಂದ ಕ್ಯಾಬ್ ಜಖಂಗೊಂಡಿತು. ಕಾರಿನಲ್ಲಿದ್ದ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದೂ ತಿಳಿಸಿವೆ.

ರಂಪಾಟ ಮಾಡಿದ್ದ ಆರೋಪಿ: 'ಅಪಘಾತವನ್ನುಂಟು ಮಾಡಿದ್ದ ಜವೇರ್ ಸ್ನೇಹಿತರ ಜೊತೆ ಸೇರಿ, ಅಪಘಾತ ಪ್ರಶ್ನಿಸಿದವರ ವಿರುದ್ಧವೇ ತಿರುಗಿ ಬಿದ್ದಿದ್ದ. ತಾನು ಕುಡಿದಿಲ್ಲವೆಂದು ವಾದಿಸಿ ರಂಪಾಟ ಮಾಡಿದ್ದ. ಅಪಘಾತದ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋದ ಸಿಬ್ಬಂದಿ, ಜವೇರ್‌ನನ್ನು ವಶಕ್ಕೆ ಪಡೆದಿದ್ದರು' ಎಂದೂ ಮೂಲಗಳು ಹೇಳಿವೆ.

'ಜವೇರ್‌ನನ್ನು ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಅವರು ಮದ್ಯ ಕುಡಿದಿದ್ದು ವರದಿಯಿಂದ ದೃಢಪಟ್ಟಿದೆ. ಹೀಗಾಗಿ, ಅವರನ್ನು ವಶಕ್ಕೆ ಪಡೆಯಲಾಗಿದೆ. ಪುರಾವೆಗಳು ಸಂಗ್ರಹಿಸಿ ಬಂಧಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

'ಆರೋಪಿ ಜವೇರ್ ಕಾರೂ ಜಖಂಗೊಂಡಿದೆ. ಅಪಘಾತದ ಸ್ಥಳದಲ್ಲಿದ್ದ ಜವೇರ್ ಸ್ನೇಹಿತರು ಹಾಗೂ ಗಾಯಾಳುಗಳಿಂದ ಹೇಳಿಕೆ ಪಡೆಯಲಾಗಿದೆ. ಆರೋಪಿ ಚಲಾಯಿಸುತ್ತಿದ್ದ ವಾಹನದ ಕೆಲ ದಾಖಲೆಗಳು ನವೀಕರಣ ಆಗಿಲ್ಲ. ಆ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದೂ ಹೇಳಿವೆ.

ಜವೇರ್

'ಜಾಲಿ ರೈಡ್ ಮೇಲೆ ನಿಗಾ'

'ಪಾನಮತ್ತರಾಗಿ ಕಾರು ಚಲಾಯಿಸುವವರು ಹಾಗೂ ಜಾಲಿರೈಡ್ ಮೋಜಿನಲ್ಲಿ ಸಾರ್ವಜನಿಕರ ಜೀವಕ್ಕೆ ಕುತ್ತು ತರುತ್ತಿರುವವರು ಹೆಚ್ಚಾಗುತ್ತಿದ್ದಾರೆ. ಇಂಥವರ ಮೇಲೆ ನಿಗಾ ವಹಿಸಲಾಗಿದೆ. ಸಿಕ್ಕಿಬಿದ್ದರೆ, ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಗಣ್ಯರು ಹಾಗೂ ಉದ್ಯಮಿಗಳ ಮಕ್ಕಳು ಐಷಾರಾಮಿ ಕಾರುಗಳಲ್ಲಿ ಜಾಲಿರೈಡ್ ಮಾಡುತ್ತಿರುವುದು ಗೊತ್ತಾಗಿದೆ. ನಗರದ ಪ್ರಮುಖ ರಸ್ತೆಗಳಲ್ಲಿ ತಪಾಸಣೆ ಚುರುಕುಗೊಳಿಸಲಾಗಿದೆ' ಎಂದೂ ತಿಳಿಸಿದರು.

ದಾಸನಪುರ ಎಪಿಎಂಸಿಗೆ ಮತ್ತೆ ಗ್ರಹಣ

• ವಿಜಯಕುಮಾರ್ ಎಸ್.ಕೆ.

ದಾಸನಪುರ ಎಪಿಎಂಸಿ ಖಾಲಿ ಇರುವುದು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಬೆಂಗಳೂರು: ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಮತ್ತು ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ದಾಸನಪುರದಲ್ಲಿ ನಿರ್ಮಿಸಿರುವ ಎಪಿಎಂಸಿಗೆ ಮತ್ತೊಮ್ಮೆ ಗ್ರಹಣ ಹಿಡಿದಿದೆ. ಕೋವಿಡ್ ಸಂದರ್ಭದಲ್ಲಿ ಕಳೆಗಟ್ಟಿದ್ದ ಈ ಮಾರುಕಟ್ಟೆ ಈಗ ಬಣಗುಡುತ್ತಿದೆ.

ಬೆಳೆಯುತ್ತಿರುವ ಬೆಂಗಳೂರನ್ನು ದೃಷ್ಟಿಯಲ್ಲಿಟ್ಟುಕೊಂಡು 2006ರಲ್ಲಿ ದಾಸನಪುರ ಬಳಿ 67 ಎಕರೆ ಸ್ವಾಧೀನಪಡಿಸಿಕೊಂಡ ಸರ್ಕಾರ, ವಿಶಾಲವಾದ ಮಾರುಕಟ್ಟೆ ನಿರ್ಮಿಸಿತು. ಎ ಮತ್ತು ಬಿ ಬ್ಲಾಕ್ ಕಾಮಗಾರಿ ಪೂರ್ಣಗೊಂಡು 12 ವರ್ಷಗಳೇ ಕಳೆದಿದ್ದು, ಮಾರುಕಟ್ಟೆ ಮಾತ್ರ ಪರಿಪೂರ್ಣವಾಗಿ ಆರಂಭವಾಗಿಲ್ಲ. ಕೋವಿಡ್ ಸಂದರ್ಭದಲ್ಲಿ ಜನ ಸಂದಣಿ ಕಡಿಮೆ ಮಾಡಲು ಈ ಮಾರುಕಟ್ಟೆಯನ್ನು ಸರ್ಕಾರ ಬಳಸಿಕೊಂಡಿತು. ಈರುಳ್ಳಿ–ಬೆಳ್ಳುಳ್ಳಿ ಮತ್ತು ಆಲೂಗಡ್ಡೆ ವರ್ತಕರನ್ನು ಯಶವಂತಪುರದಿಂದ ದಾಸನಪುರಕ್ಕೆ ಸಂಪೂರ್ಣವಾಗಿ ಸ್ಥಳಾಂತರ ಮಾಡಿತು.

ಕೋವಿಡ್ ಎರಡನೇ ಅಲೆ ಲಾಕ್‌ಡೌನ್ ಮುಗಿದ ಬಳಿಕ ಯಶವಂತಪುರಕ್ಕೆ ಮರಳಿ ಹೋಗುವ ಒತ್ತಾಯ ವರ್ತಕರಿಂದ ಆರಂಭವಾಯಿತು. ಪಕ್ಕದಲ್ಲೇ ನಿರ್ಮಾಣ ಹಂತದಲ್ಲಿರುವ ಸಿ ಬ್ಲಾಕ್ ಕಾಮಗಾರಿ ಮುಗಿಯುತ ತನಕ ಮಾತ್ರ ಯಶವಂತಪುರಕ್ಕೆ ಸ್ಥಳಾಂತರ ಆಗಲು ಅವಕಾಶ ನೀಡುವುದಾಗಿ ಕೃಷಿ ಮಾರುಕಟ್ಟೆ ಇಲಾಖೆ ಷರತ್ತು ವಿಧಿಸಿತ್ತು. ಈ ಷರತ್ತಿಗೆ ಒಪ್ಪಿದರೆ ಮಾತ್ರ ಸ್ಥಳಾಂತರಕ್ಕೆ ಅವಕಾಶ ನೀಡುವುದಾಗಿ ತಿಳಿಸಿತ್ತು.

ಆದರೆ, ಯಶವಂತಪುರದಲ್ಲಿ ಸ್ವಂತ ಮತ್ತು ಬಾಡಿಗೆ ಮಳಿಗೆ ಹೊಂದಿರುವ ವರ್ತಕರು ಅದಕ್ಕೆ ಒಪ್ಪಲಿಲ್ಲ. ಬಳಿಕ ಎಲ್ಲಾ ಷರತ್ತುಗಳನ್ನು ಸರ್ಕಾರ ವಾಪಸ್ ಪಡೆದು ಸ್ಥಳಾಂತರಕ್ಕೆ ಅವಕಾಶ ನೀಡಿದೆ. 309 ವರ್ತಕರು ದಾಸನಪುರದಿಂದ ಯಶವಂತಪುರಕ್ಕೆ ಮರಳಿ ವಹಿವಾಟು ಆರಂಭಿಸಿದ್ದಾರೆ. ಆದರೆ, ಅತ್ತ ದಾಸನಪುರ ಮಾರುಕಟ್ಟೆ ವಹಿವಾಟು ಸಂಪೂರ್ಣ ಕುಸಿದಿದೆ. ಯಶವಂತಪುರದಲ್ಲಿ ಮಳಿಗೆ ಇಲ್ಲದ ಶೇ 30ರಷ್ಟು ವರ್ತಕರು ಮಾತ್ರ ಅಲ್ಲಿ ಉಳಿದಿದ್ದು, ಮಾರುಕಟ್ಟೆ ಪ್ರಾಂಗಣವೇ ಖಾಲಿ ಖಾಲಿಯಾಗಿ ಕಾಣಿಸುತ್ತಿದೆ.

ಇಡೀ ಮಾರುಕಟ್ಟೆಯಲ್ಲಿ ಅಲ್ಲೊಂದು ಇಲ್ಲೊಂದು ಲಾರಿ ನಿಂತಿದ್ದರೆ, ವರ್ತಕರ ಮುಖದಲ್ಲಿ ದುಃಖ ಮಡುಗಟ್ಟಿದೆ. ಚೀಲ ಹೊರುವ ಹಮಾಲಿಗಳು ಮತ್ತು ಈರುಳ್ಳಿ ಬೇರ್ಪಡಿಸುವ ಕೆಲಸ ಮಾಡುವ ಮಹಿಳೆಯರು ಕೆಲಸವಿಲ್ಲದೆ ಖಾಲಿ ಕೈನಲ್ಲಿ ಕುಳಿತಿದ್ದಾರೆ. ಮಾರುಕಟ್ಟೆ ನಂಬಿ ಸುತ್ತಮುತ್ತ ತೆರೆದುಕೊಂಡಿರುವ ಅಂಗಡಿಗಳು, ಕ್ಯಾಂಟಿನ್‌ಗಳನ್ನು ನಡೆಸುವವರ ಮುಖಗಳೂ ಬಾಡಿ ಹೋಗಿವೆ.

ವಿಶಾಲವಾಗಿರುವ ಈ ಮಾರುಕಟ್ಟೆಯಲ್ಲಿ ರೈತರಿಗೆ, ಖರೀದಿದಾರರಿಗೆ ಮತ್ತು ವರ್ತಕರಿಗೆ ಅನುಕೂಲಗಳು ಹೆಚ್ಚಿವೆ. ಲಾರಿಗಳು ಯಾವುದೇ ದಟ್ಟಣೆಗೆ ಸಿಲುಕದೆ ಬಂದು ಹೋಗಬಹುದು. ಹಳ್ಳಿಗಳಿಂದ ಬರುವ ರೈತರು ನಗರದೊಳಗೆ ಬರದೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದು. ಆದರೆ, ವರ್ತಕರನ್ನು ಹಿಡಿದಿಟ್ಟುಕೊಳ್ಳಲು ಸರ್ಕಾರ ಗಂಭೀರ ಪ್ರಯತ್ನ ಮಾಡುತ್ತಿಲ್ಲ ಎಂದು ದಾಸನಪುರದಲ್ಲಿ ಉಳಿದಿರುವ ವರ್ತಕರು ಬೇಸರ ವ್ಯಕ್ತಪಡಿಸುತ್ತಾರೆ.

309 ವರ್ತಕರು ಯಶವಂತಪುರಕ್ಕೆ ವಾಪಸ್ ಹೋಗಿ 10 ದಿನಗಳಾಗಿವೆ. ಕ್ರಮೇಣವಾಗಿ ರೈತರು ಯಶವಂತಪುರದ ಕಡೆಗೆ ಮುಖ ಮಾಡಿದ್ದಾರೆ. ಶನಿವಾರ ಯಶವಂತಪುರ ಮಾರುಕಟ್ಟೆಗೆ 26,911 ಚೀಲ ಈರುಳ್ಳಿ ಬಂದಿದ್ದರೆ, 16,875 ಚೀಲ ಆಲೂಗಡ್ಡೆ ಬಂದಿದೆ. ದಾಸನಪುರ ಮಾರುಕಟ್ಟೆಗೆ 24,664 ಚೀಲ ಈರುಳ್ಳಿ ಮತ್ತು 1,375 ಚೀಲ ಮಾತ್ರ ಆಲೂಗಡ್ಡೆ ಬಂದಿದೆ. ದಿನ ಕಳೆದಂತೆ ಇನ್ನೂ ಕಡಿಮೆಯಾಗಲಿದೆ ಎಂಬುದು ವರ್ತಕರು ಆತಂಕ.

ಸರ್ಕಾರ ನೀಡಿದ ಭರವಸೆ ನಂಬಿ ನಾಲ್ಕು ವರ್ಷಗಳಿಂದ ಸಾಲ ಮಾಡಿ ಅಂಗಡಿ ತೆರೆದಿದ್ದೇವೆ. ಈಗ ಮನೆ, ಆಸ್ತಿ ಮಾರಾಟ ಮಾಡುವ ಸ್ಥಿತಿ ಬಂದಿದೆ. ಎರಡು ಕಡೆ ಸಗಟು ಮಾರುಕಟ್ಟೆ ನಡೆಸಲು ಅವಕಾಶ ನೀಡಿದರೆ ರೈತರು ಮತ್ತು ಖರೀದಿದಾರರಿಗೆ ಗೊಂದಲ ಉಂಟಾಗಲಿದೆ. ಯಾವ ಮಾರುಕಟ್ಟೆಯಲ್ಲಿ ಉತ್ತಮ ದರ ಸಿಗಲಿದೆ ಎಂಬುದು ಗೊತ್ತಾಗದೆ ರೈತರು ನಷ್ಟ ಅನುಭವಿಸುವ ಸಾಧ್ಯತೆಯೂ ಇದೆ. ಇನ್ನು ನಗರದೊಳಗೇ ಉತ್ಪನ್ನಗಳು ಲಭ್ಯವಾದರೆ ಖರೀದಿದಾರರು ಈ ಮಾರುಕಟ್ಟೆಗೆ ಬರುವುದನ್ನೇ ನಿಲ್ಲಿಸುತ್ತಾರೆ. ಆಗ ಈ ಮಾರುಕಟ್ಟೆಯ ಉತ್ಪನ್ನಗಳಿಗೆ ಬೆಲೆ ಸಿಗದಂತಾಗಿ ರೈತರಿಗೆ ತೊಂದರೆ ಆಗಲಿದೆ. ಈ ರೀತಿಯ ಗೊಂದಲಮಯ ಸ್ಥಿತಿಯನ್ನು ಸರ್ಕಾರವೇ ಹುಟ್ಟು ಹಾಕಿದೆ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಬಾಡಿಗೆ ಮನ್ನಾ ಮಾಡಬೇಕು



ನಾಲ್ಕು ವರ್ಷಗಳಿಂದ ಇಲ್ಲಿನ ವರ್ತಕರನ್ನು ಪ್ರಯೋಗದ ವಸ್ತುಗಳನ್ನಾಗಿ ಅಧಿಕಾರಿಗಳು ಮಾಡಿಕೊಂಡಿದ್ದಾರೆ. ಮನೆ–ಆಸ್ತಿ ಮಾರಾಟ ಮಾಡಿಕೊಳ್ಳುವ ಸ್ಥಿತಿಗೆ ಬಂದಿದ್ದೇವೆ. ವ್ಯಾಪಾರವೇ ಇಲ್ಲದಿರುವಾಗ ಬಾಡಿಗೆ ಕಟ್ಟಲು ಒತ್ತಾಯಿಸಲಾಗುತ್ತಿದೆ. ಪ್ರತಿ 11 ತಿಂಗಳಿಗೆ ಬಾಡಿಗೆ ಹೆಚ್ಚಳ ಮಾಡಲಾಗಿದೆ. ಪ್ರತಿ ಮಳಿಗೆಗೆ ₹20 ಸಾವಿರ ಇದೆ. ವಹಿವಾಟಿಲ್ಲದೆ ಬಾಡಿಗೆ ಕಟ್ಟುವುದು ಹೇಗೆ? ಮಾರುಕಟ್ಟೆ ಅಭಿವೃದ್ಧಿ ಆಗುವ ತನಕ ಬಾಡಿಗೆ ಮನ್ನಾ ಮಾಡಬೇಕು. ಒಂದೇ ಮಾರುಕಟ್ಟೆ ಮಾಡಿದರೆ ಬಾಡಿಗೆ ಪಾವತಿಸಲು ನಾವು ಹಿಂಜರಿಯುವುದಿಲ್ಲ.

–ಪ್ರಸನ್ನ, ದಾಸನಪುರ ಎಪಿಎಂಸಿ ವರ್ತಕ

ಹುಸ್ಕೂರು ರಸ್ತೆಯ ಹೆಗ್ಗಡದೇನಪುರ – ದಾಸನಪುರ ಹೋಬಳಿ ರಸ್ತೆ ಬದಿಯಲ್ಲಿ ಕಿ.ಮೀ. ಉದ್ದಕ್ಕೂ ಕಸ ಹಾಕಿರುವ ದೃಶ್ಯ ಪ್ರಜಾವಾಣಿ ಚಿತ್ರ

ಅಂಕಿ-ಅಂಶಗಳು

67 ಎಕರೆ
ದಾಸನಪುರ ಮಾರುಕಟ್ಟೆಯ ವಿಸ್ತೀರ್ಣ

252
ಎರಡು ಬ್ಲಾಕ್‌ನಲ್ಲಿ ಇರುವ ಮಳಿಗೆ

4 ಕಿ.ಮೀ.
ತುಮಕೂರು ರಸ್ತೆಯಿಂದ ಇರುವ ದೂರ

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ..
ಪ್ರಜಾವಾಣಿ ನೋಡಿಯೊ

ಎರಡೂ ಮಾರುಕಟ್ಟೆಯಲ್ಲೂ ವಹಿವಾಟು ಮುಂದುವರಿಸಲು ಸದ್ಯಕ್ಕೆ ಸರ್ಕಾರ ತೀರ್ಮಾನಿಸಿದೆ. ಸಿ ಬ್ಲಾಕ್ ಕಾಮಗಾರಿ ಪೂರ್ಣಗೊಂಡ ಬಳಿಕ ಏನು ಮಾಡಬೇಕು ಎಂಬುದನ್ನು ಮುಂದಿನ ದಿನಗಳಲ್ಲಿ ಸರ್ಕಾರ ತೀರ್ಮಾನಿಸಲಿದೆ

ಕರಿಗೌಡ
ಕೃಷಿ ಮಾರುಕಟ್ಟೆ ಇಲಾಖೆ ನಿರ್ದೇಶಕ

ಇದು ದಾಸನಪುರ ಮಾರುಕಟ್ಟೆ ವರ್ತಕರ ಅಳಲಾದರೆ, ಯಶವಂತಪುರಕ್ಕೆ ಮರಳಿ ಬಂದಿರುವ ವರ್ತಕರು ಅಭಿಪ್ರಾಯ ಬೇರೆಯೇ ಇದೆ. ‘ಯಶವಂತಪುರದಲ್ಲಿ ಕೆಲವರು ಸ್ವಂತ ಮಳಿಗೆ ಹೊಂದಿದ್ದರೆ, ಹಲವರು ಬಾಡಿಗೆ ಮಳಿಗೆಯನ್ನು ಕೃಷಿ ಮಾರುಕಟ್ಟೆ ಇಲಾಖೆಯೇ ನೀಡಿದೆ. ಸ್ವಂತ ಮಳಿಗೆ ಬಿಟ್ಟು ದಾಸನಪುರದಲ್ಲಿ ಈಗಾಗಲೇ ಮಳಿಗೆ ಪಡೆದಿರುವ ವರ್ತಕರ ಮಳಿಗೆಯಲ್ಲೇ ನಾವೂ ವಹಿವಾಟು ನಡೆಸುವುದು ಹೇಗೆ’ ಎಂದು ಪ್ರಶ್ನಿಸುತ್ತಾರೆ.

ಕೃಷಿ ಮಾರುಕಟ್ಟೆ ಇಲಾಖೆಯ ಗೊಂದಲಮಯ ತೀರ್ಮಾನಗಳು, ದೂರದೃಷ್ಟಿ ಇಲ್ಲದ ಆಲೋಚನೆಗಳಿಂದ ಎರಡೂ ಮಾರುಕಟ್ಟೆಯ ವರ್ತಕರ ನಡುವೆ ತಿಕ್ಕಾಟಕ್ಕೆ ಕಾರಣವಾಗಿದೆ.

ಸಂಪೂರ್ಣ ಸ್ಥಳಾಂತರ ಆದ ತರಕಾರಿ ಮಾರುಕಟ್ಟೆ

ಯಶವಂತಪುರದಲ್ಲಿ ಇದ್ದ ತರಕಾರಿ ಮಾರುಕಟ್ಟೆಯನ್ನು ಸಂಪೂರ್ಣವಾಗಿ ದಾಸನಪುರಕ್ಕೆ ಸ್ಥಳಾಂತರ ಮಾಡಲಾಗಿದೆ. ತರಕಾರಿ ವಹಿವಾಟಿಗೇ ಪ್ರತ್ಯೇಕ ಮಾರುಕಟ್ಟೆ ನಿರ್ಮಾಣವಾಗಿದೆ. ಈರುಳ್ಳಿ ಮತ್ತು ಆಲೂಗಡ್ಡೆ ವರ್ತಕರು ಯಶವಂತಪುರಕ್ಕೆ ಮರಳಿದರೂ, ತರಕಾರಿ ವ್ಯಾಪಾರಿಗಳು ದಾಸನಪುರದಲ್ಲಿನ ಸುಸಜ್ಜಿತ ಮಾರುಕಟ್ಟೆಯಲ್ಲೇ ಉಳಿದಿದ್ದಾರೆ. ಅದೇ ರೀತಿಯಲ್ಲಿ ಈರುಳ್ಳಿ–ಆಲೂಗಡ್ಡೆ ವಹಿವಾಟು ಒಂದೇ ಕಡೆ ನಡೆಯುವಂತೆ ಮಾಡಬೇಕು ಎಂಬುದು ದಾಸನಪುರ ವರ್ತಕರ ಒತ್ತಾಯ.

ಕೆಲಸವೂ ಇಲ್ಲ, ದುಡಿಮೆಯೂ ಇಲ್ಲ

ಯಶವಂತಪುರಕ್ಕೆ ವರ್ತಕರು ಮರಳಿದ ಬಳಿಕ ಕೆಲಸ ಇಲ್ಲದೆ ಬರಿಗೈ ಆಗಿದ್ದೇವೆ. ದಿನಕ್ಕೆ ₹60 ಪ್ರಯಾಣ ದರ ಖರ್ಚು ಮಾಡಿಕೊಂಡು ಬರಬೇಕು. ಬೇರ್ಪಡಿಸಿಕೊಟ್ಟರೆ ರೈತರು ಕೊಡುವ ಈರುಳ್ಳಿ ಅಥವಾ ಆಲೂಗಡ್ಡೆಯನ್ನೇ ಮಾರಾಟ ಮಾಡಿಕೊಂಡು ಜೀವನ ಸಾಗಿಸಬೇಕು. ಈಗ ವಹಿವಾಟು ಕಡಿಮೆ ಆಗಿರುವುದರಿಂದ ಕೆಲಸವೇ ಇಲ್ಲವಾಗಿದೆ. ನಮ್ಮ ಕಷ್ಟ ಯಾರಿಗೆ ಹೇಳುವುದು

–ಲಕ್ಷ್ಮಿ, ಕಾರ್ಮಿಕ ಮಹಿಳೆ

ಎರಡೂ ಮಾರುಕಟ್ಟೆ ಇರಲಿ

ಕೋವಿಡ್ ಸಂದರ್ಭದಲ್ಲಿ ತಾತ್ಕಾಲಿಕವಾಗಿ ದಾಸನಪುರಕ್ಕೆ ಸ್ಥಳಾಂತರ ಮಾಡಲಾಗಿತ್ತು. ಸೋಂಕು ಹರಡುವುದನ್ನು ತಡೆಯುವ ಸಾರ್ವಜನಿಕ ಉದ್ದೇಶದಿಂದ ಮೂಲಸೌಕರ್ಯಗಳ ಕೊರತೆ ಇದ್ದರೂ ಸ್ಥಳಾಂತರಕ್ಕೆ ಒಪ್ಪಿದೆವು. ಮಳಿಗೆ ಇಲ್ಲದಿದ್ದರೂ ಸ್ನೇಹಿತರ ಅಂಗಡಿಗಳಲ್ಲಿ ಚೀಲ ಇಳಿಸಿಕೊಂಡು ವಹಿವಾಟು ನಡೆಸಿದೆವು. ಕೋವಿಡ್ ಕಡಿಮೆಯಾದ ಬಳಿಕ ನಮ್ಮ ಸ್ವಂತ ಮಳಿಗೆಗಳಿಗೆ ವಾಪಸ್ ಬರಲು ಷರತ್ತುಗಳನ್ನು ಸರ್ಕಾರ ವಿಧಿಸಿತ್ತು. ಸಚಿವರು ಮತ್ತು ಅಧಿಕಾರಿಗಲಿಗೆ ಮನವರಿಕೆ ಮಾಡಿಕೊಟ್ಟ ಬಳಿಕ ಷರತ್ತು ಕೈಬಿಟ್ಟು ಸ್ಥಳಾಂತರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಎರಡೂ ಮಾರುಕಟ್ಟೆ ಉಳಿಸಲಿ. ಕೆಲ ದಿನಗಳಷ್ಟೇ ತೊಂದರೆ ಆಗಲಿದೆ. ಕ್ರಮೇಣ ಎರಡೂ ಮಾರುಕಟ್ಟೆ ಅಭಿವೃದ್ಧಿ ಆಗುವುದರಲ್ಲಿ ಅನುಮಾನ ಇಲ್ಲ.

–ಉದಯಶಂಕರ್, ಯಶವಂತಪುರ ಎಪಿಎಂಸಿ(ಈರುಳ್ಳಿ ಮತ್ತು ಆಲೂಗಡ್ಡೆ) ವರ್ತಕರ ಸಂಘದ ಕಾರ್ಯದರ್ಶಿ

ಒಂದೇ ಮಾರುಕಟ್ಟೆ ಉಳಿಸಬೇಕು

ದಾಸನಪುರ ಮಾರುಕಟ್ಟೆ ಸುಸಜ್ಜಿತ ವ್ಯವಸ್ಥೆ ಇದೆ. ವಿಶಾಲವಾಗಿ ಇರುವುದರಿಂದ ರೈತರು, ವರ್ತಕರು ಮತ್ತು ಖರೀದಿದಾರರು ಸೇರಿ ಎಲ್ಲರಿಗೂ ಅನುಕೂಲ ಆಗಿತ್ತು. ಎರಡು ಮಾರುಕಟ್ಟೆ ಇದ್ದರೆ ನಗರದ ಮಧ್ಯಭಾಗದಲ್ಲಿ ಇರುವ ಯಶವಂತಪುರ ಮಾರುಕಟ್ಟೆಯಲ್ಲಿ ವಹಿವಾಟ ಚುರುಕಾಗುತ್ತದೆ. ಹೊರಭಾಗದಲ್ಲಿರುವ ದಾಸನಪುರ ಮಾರುಕಟ್ಟೆ ಮಂಕಾಗುತ್ತದೆ. ಹೀಗಾಗಿ, ಒಂದೇ ಮಾರುಕಟ್ಟೆಯನ್ನು ಉಳಿಸಬೇಕು. ಯಶವಂತಪುರದ ವರ್ತಕರನ್ನು ದಾಸನಪುರಕ್ಕೆ ಸ್ಥಳಾಂತರ ಮಾಡಲು ಆಗದಿದ್ದರೆ, ನಮ್ಮನ್ನೂ ಅಲ್ಲಿಗೇ ಸ್ಥಳಾಂತರ ಮಾಡಲಿ. ವ್ಯಾಪಾರ ಇಲ್ಲದೆ ನಾವು ಇಲ್ಲಿ ಕುಳಿತು ಏನು ಮಾಡಬೇಕು.

–ಶ್ರೀರಾಮ ರೆಡ್ಡಿ, ದಾಸನಪುರ ಎಪಿಎಂಸಿ ವರ್ತಕರ ಸಂಘದ ಅಧ್ಯಕ್ಷ

ಭೂಗತ ಪಾತಕಿ ಹೆಸರಿನಲ್ಲಿ ಜೀವ ಬೆದರಿಕೆ

ಬೆಂಗಳೂರು: ಭೂಗತ ಪಾತಕಿ ಕಲಿ ಯೋಗೇಶ್ ಹೆಸರಿನಲ್ಲಿ ಅಂತರ್ಜಾಲ ಕರೆ ಮಾಡಿದ್ದ ವ್ಯಕ್ತಿಯೊಬ್ಬ ರಾಜ್ಯ ಕಾರ್ಮಿಕ ಪರಿಷತ್ ಸಂಘಟನೆ ಅಧ್ಯಕ್ಷ ರವಿ ಶೆಟ್ಟಿ ಬೈಂದೂರು ಅವರಿಗೆ ಜೀವ ಬೆದರಿಕೆಯೊಡ್ಡಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೀವ ಬೆದರಿಕೆ ಸಂಬಂಧ ರವಿ ಶೆಟ್ಟಿ ಬೈಂದೂರು ದೂರು ನೀಡಿದ್ದಾರೆ. ಕಲಿ ಯೋಗೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಸದ್ಯ ಆತನ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಇದೆ. ಆತ ಹಲವರಿಗೆ ಜೀವ ಬೆದರಿಕೆಯೊಡ್ಡಿರುವ ಪ್ರಕರಣಗಳು ಇವೆ’ ಎಂದು ಪೊಲೀಸರು ಹೇಳಿದರು.

‘ಬೋಳ ಸಹಕಾರಿ ವ್ಯವಸಾಯ ಸಂಘದ ವಿಚಾರ ಮತ್ತು ಅಕ್ರಮ ಕಲ್ಲು ಕ್ವಾರಿಗಳ ವಿಷಯ ಪ್ರಸ್ತಾಪಿಸಿದ್ದ ವ್ಯಕ್ತಿ, ‘ನಾನು ಭೂಗತ ಪಾತಕಿ ಕಲಿ ಯೋಗೇಶ್. ಸಂಘ ಹಾಗೂ ಕಲ್ಲು ಕ್ವಾರಿಗಳ ವಿಷಯಕ್ಕೆ ಹೋಗಬೇಡ. ಹೋದರೆ, ಒಂದು ಗತಿ ಕಾಣಿಸುತ್ತೇನೆ’ ಎಂಬುದಾಗಿ ಬೈಂದೂರು ಅವರನ್ನು ಬೆದರಿಸಿದ್ದಾನೆ. ಈ ಸಂಗತಿ ದೂರಿನಲ್ಲಿದೆ’ ಎಂದೂ ತಿಳಿಸಿದರು.

‘ಈಡಿಗ ಸಮುದಾಯದ ಉಪ ಪಂಗಡಗಳನ್ನು ಒಗ್ಗೂಡಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈಡಿಗ ಸಮುದಾಯದ 26 ಉಪ ಪಂಗಡಗಳನ್ನೂ ಒಗ್ಗೂಡಿಸಬೇಕಿದೆ. ಶ್ರೀ ನಾರಾಯಣ ಗುರು ವಿಚಾರ ವೇದಿಕೆಯ ಸದಸ್ಯರು ಹಾಗೂ ಸಮುದಾಯದ ಯುವಕರು ಈ ದಿಸೆಯಲ್ಲಿ ಕೆಲಸ ಮಾಡಬೇಕು’ ಎಂದು ಶ್ರೀ ನಾರಾಯಣ ಗುರು ವಿಚಾರ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ತಿಳಿಸಿದರು.

ವಿಚಾರ ವೇದಿಕೆಯ ಬೆಂಗಳೂರು ಘಟಕಕ್ಕೆ ಚಾಲನೆ ನೀಡಿ ಭಾನುವಾರ ಮಾತನಾಡಿದರು.

‘ರಾಜ್ಯದಲ್ಲಿ ಮೀಸಲಾತಿಯ ಕೂಗು ಕೇಳಿ ಬರುತ್ತಿದೆ. ಪ್ರಬಲ ಸಮುದಾಯಗಳು 2ಎ ಮೀಸಲಾತಿಗಾಗಿ ಪ್ರಯತ್ನಿಸುತ್ತಿವೆ. ಈಗಲೂ ಅನೇಕ ಸೌಕರ್ಯಗಳಿಂದ ವಂಚಿತವಾಗಿರುವ ನಮಗೆ ಇದರಿಂದ ಅಪಾಯ ಹೆಚ್ಚು. ಹೀಗಾಗಿ ಸಮುದಾಯದ ಎಲ್ಲರೂ ತಮ್ಮ ಹಕ್ಕು ಹಾಗೂ ಸೌಕರ್ಯಗಳಿಗಾಗಿ ಒಟ್ಟಾಗಿ ಹೋರಾಡಬೇಕು’ ಎಂದರು.

ಕಾರ್ಯಕ್ರಮದಲ್ಲಿ (ಎಡದಿಂದ) ಚಲನಚಿತ್ರ ನಿರ್ದೇಶಕ ನಕುಲ್ ಗೋವಿಂದ, ಸಹಾಯಕ ಪೊಲೀಸ್ ಆಯುಕ್ತೆ ರೀನಾ ಸುವರ್ಣ, ಸಮಾಜ ಸೇವಕಿ ರಾಜನಂದಿನಿ ಕಾಗೋಡು ಮತ್ತು ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ಇದ್ದರು ಪ್ರಜಾವಾಣಿ ಚಿತ್ರ

ಸಹಾಯಕ ಪೊಲೀಸ್ ಕಮಿಷನರ್ ರೀನಾ ಸುವರ್ಣ ‘ಈಡಿಗ ಸಮುದಾಯ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದೆ. ಸಮುದಾಯ ಒಗ್ಗೂಡುವ ಅಗತ್ಯ ಈಗ ಹೆಚ್ಚಿದೆ. ವಿವಿಧ ರಾಜಕೀಯ ಪಕ್ಷಗಳಲ್ಲಿರುವ ಸಮುದಾಯದ ನಾಯಕರು ಸಮಾಜದ ಹಿತ ಕಾಯಲು ಮುಂದಾಗಬೇಕು. ಇದಕ್ಕಾಗಿ ಪಕ್ಷ ಬೇಧ ಮರೆತು ಕೆಲಸ ಮಾಡಬೇಕು’ ಎಂದು ಹೇಳಿದರು.

ಉದ್ಯಮಿ ಗೋವಿಂದ ಬಾಬು ಪೂಜಾರಿ, ಸಂಘಟನೆಯ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಸುಂಟರಹಳ್ಳಿ, ಖಜಾಂಚಿ ದಿನೇಶ್ ಮಳಲಗದ್ದೆ, ಸಂಘಟನಾ ಕಾರ್ಯದರ್ಶಿ ಗಣೇಶ್, ಭಾಸ್ಕರ್ ಪೂಜಾರಿ ಇದ್ದರು.

14 ಕಾರುಗಳ ಗಾಜು ಪುಡಿ ಪುಡಿ: ಎಂಜಿನಿಯರಿಂಗ್ ವಿದ್ಯಾರ್ಥಿಗಳ ಬಂಧನ

ಬೆಂಗಳೂರು: ಸಾರ್ವಜನಿಕರ ಮನೆಗಳ ಮುಂದೆ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಕಾರುಗಳ ಗಾಜುಗಳನ್ನು ಒಡೆದು ಹಾಕಿದ್ದ ಐವರು ಆರೋಪಿಗಳನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಲಾದ ಬ್ಯಾಟ್

‘ವೈ.ಆರ್. ಮಯಾಂಕ್, ರೋಹಿತ್ ಸೈನಿ, ಅದ್ನಾನ್ ಫಹಾದ್, ಸಕ್ಷಂ ಭಾರದ್ವಾಜ್ ಹಾಗೂ ಜಯೇಸ್ ಬಂಧಿತರು. ಒಬ್ಬನ ಹೆಸರು ಗೊತ್ತಾಗಿಲ್ಲ. ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ ಹಾಗೂ ರಾಜಸ್ಥಾನದ ಆರೋಪಿಗಳು, ನಗರದ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅವರಿಂದ ಬ್ಯಾಟ್ ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕುಡಿದ ಅಮಲಿನಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲೂ ಕೃತ್ಯದ ದೃಶ್ಯ ಸೆರೆಯಾಗಿತ್ತು. ಸಾರ್ವಜನಿಕರೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

14 ಕಾರುಗಳು ಜಖಂ: ‘ಕೆಂಗೇರಿ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟೊಂದರಲ್ಲಿ ನೆಲೆಸಿದ್ದ ಸ್ನೇಹಿತರೊಬ್ಬರ ಹುಟ್ಟುಹಬ್ಬ ಆಚರಿಸಲು ಸೆ. 23ರಂದು ಆರೋಪಿಗಳು ಬಂದಿದ್ದರು. ತಮ್ಮ ಜೊತೆ ಕ್ರಿಕೆಟ್ ಬ್ಯಾಟ್ ತಂದಿದ್ದರು. ಹುಟ್ಟುಹಬ್ಬ ಪಾರ್ಟಿ ಮುಗಿಸಿಕೊಂಡು ವಾಪಸು ಹೊರಟಿದ್ದ ಆರೋಪಿಗಳು, ಪೆಟ್ರೋಲ್ ಬಂಕೊಂದಕ್ಕೆ ಹೋಗಿ ಪಾನೀಯ ಖರೀದಿಸಿದ್ದರು. ನಂತರ, ಹಲವು ರಸ್ತೆಗಳಲ್ಲಿ ಬೈಕ್‌ಗಳಲ್ಲಿ ಸುತ್ತಾಡಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಸಾರ್ವಜನಿಕರು ಮನೆಗಳ ಮುಂದೆ ರಸ್ತೆ ಬದಿಯಲ್ಲಿ ಕಾರುಗಳನ್ನು ನಿಲ್ಲಿಸಿದ್ದರು. ಅಂಥ ಕಾರುಗಳ ಬಳಿ ಹೋಗಿದ್ದ ಆರೋಪಿಗಳು, ಬ್ಯಾಟ್‌ನಿಂದ ಗಾಜುಗಳನ್ನು ಒಡೆದು ಪರಾರಿಯಾಗಿದ್ದರು. ಆರೋಪಿಗಳ ಕೃತ್ಯದಿಂದ 14 ಕಾರುಗಳು ಜಖಂಗೊಂಡಿವೆ. ಕೃತ್ಯದ ಬಗ್ಗೆ ರಾಜರಾಜೇಶ್ವರಿನಗರ ಹಾಗೂ ಕೆಂಗೇರಿ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು’ ಎಂದೂ ಹೇಳಿದರು.

ಉದ್ಯಮಿಗಳ ಮಕ್ಕಳು: ‘ಬಂಧಿತ ಆರೋಪಿಗಳ ಪೈಕಿ ಕೆಲವರು ಉದ್ಯಮಿಗಳ ಮಕ್ಕಳು. ಕಾಲೇಜಿನ ವಸತಿ ನಿಲಯದಲ್ಲಿ ವಾಸವಿದ್ದರು. ಪಾರ್ಟಿ ಇದ್ದಾಗ ಒಟ್ಟಿಗೆ ಸೇರುತ್ತಿದ್ದರು. ಇದೇ ಮೊದಲ ಬಾರಿಗೆ ಕುಡಿದ ಅಮಲಿನಲ್ಲಿ ಅವರೆಲ್ಲ ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ’ ಎಂದೂ ಪೊಲೀಸರು ಹೇಳಿದರು.

‘ಆರೋಪಿಗಳ ಕೃತ್ಯದ ಬಗ್ಗೆ ಕಾಲೇಜಿನವರಿಗೆ ಮಾಹಿತಿ ನೀಡಲಾಗಿದೆ. ವಿದ್ಯಾರ್ಥಿಗಳ ಬಗ್ಗೆ ಮತ್ತಷ್ಟು ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದೂ ತಿಳಿಸಿದರು.

ಕೆ.ಆರ್. ಪುರಂ, ಬೆಂಗಳೂರು ಷೋರೂಂಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ.

GRT JEWELLERS Since 1964

ಸ್ಥಾನ	ಕನಿಷ್ಠ ಅರ್ಹತೆ	ವಯಸ್ಸು
ಸೇಲ್ಸ್‌ಮನ್	10ನೇ ತರಗತಿ, PUC ಅಥವಾ ಪದವೀಧರರು	22 ರಿಂದ 27
ಸೇಲ್ಸ್‌ಗರ್ಲ್ಸ್	10ನೇ ತರಗತಿ, PUC ಅಥವಾ ಪದವೀಧರರು	22 ರಿಂದ 27
ಸೇಲ್ಸ್ ಅಸಿಸ್ಟೆಂಟ್ಸ್	10ನೇ ತರಗತಿ, PUC (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು)	17 ರಿಂದ 22

ದಿನಾಂಕ ಮತ್ತು ಸಮಯ:
28-09-2021, ಮಂಗಳವಾರ, 29-09-2021, ಬುಧವಾರ (10.00 AM to 5.00 PM)
Email: recruitment@grtjewels.com
ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು. ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.
ಇತರೆ ಪ್ರಾಂತ್ಯಗಳವರಿಗೆ ಊಟ ಮತ್ತು ವಸತಿ ಸೌಲಭ್ಯ ಒದಗಿಸಲಾಗುತ್ತದೆ.
ಸ್ಥಳ :
ಕೆಆರ್ ಇನ್, ಕೃಷ್ಣರಾಜಪುರಂ
ನಂ. 16–17, ಎನ್.ಹೆಚ್.-75,
ಹಳೆಯ ಮದ್ರಾಸ್ ರಸ್ತೆ, ಕೆ.ಆರ್. ಪುರಂ, ಬೆಂಗಳೂರು – 560 036.
ಸಂಪರ್ಕ ಸಂಖ್ಯೆಗಳು : 96869 05786, 96867 99888

ಪ್ರವಾಸ ನೆಚ್ಚಿಕೊಂಡವರ ಬದುಕು ಪ್ರಯಾಸ

• ಕೆ.ನರಸಿಂಹಮೂರ್ತಿ

ಮೈಸೂರು: 'ಪ್ರವಾಸಿ ಗೈಡ್ ಆಗಿರುವ ನನ್ನ ತಮ್ಮ 2019ರ ಡಿಸೆಂಬರ್‌ನಲ್ಲಿ ಅಪಘಾತವಾಗಿ ಮುಂಗೈ ಕಳೆದುಕೊಂಡ. ಇದ್ದ ಹಣವೆಲ್ಲವೂ ಒಂದೆರಡು ತಿಂಗಳಲ್ಲೇ ಖರ್ಚಾಯಿತು. ದಿಢೀರನೆ ಎದುರಾದ ಲಾಕ್‌ಡೌನ್‌ನಲ್ಲಿ ಕೆಲಸವೂ ಇಲ್ಲದ ಆತನಿಗೆ ನನ್ನ ತಾಯಿ ತಮ್ಮ ವೃದ್ಧಾಪ್ಯ ವೇತನ ಕೊಟ್ಟರು. ನನ್ನ ದುಡಿಮೆಯ ಕೊಂಚ ಹಣವನ್ನೂ ಕೊಟ್ಟೆ. ಶಾಲೆ ತೆರೆಯದ ಕಾರಣ ಮಕ್ಕಳ ಶುಲ್ಕ ಪಾವತಿಸುವ ಕಷ್ಟದಿಂದ ಆತ ಬಚಾವಾದ. ನನ್ನ ಪತ್ನಿ ಶಿಕ್ಷಕಿಯಾಗಿರುವುದರಿಂದ ನಮ್ಮ ಜೀವನ ಹೇಗೋ ನಡೆಯಿತು...'

– ಬಾಗಲಕೋಟೆ ಜಿಲ್ಲೆಯ ಬಾದಾಮಿ–ಪಟ್ಟದಕಲ್ಲು ಪ್ರವಾಸಿ ಗೈಡ್ ಚಂದ್ರಗುಂಡ ಕಟಗೇರಿ, ಲಾಕ್‌ಡೌನ್ ಅವಧಿಯಲ್ಲಿ ತಮ್ಮ ಕುಟುಂಬದ ಕಷ್ಟಗಳನ್ನು ಸಂಕಟದಿಂದಲೇ ಬಿಡಿಸಿಟ್ಟರು.

'ಅಸಂಘಟಿತರಾಗಿರುವ ನಮಗೆ ಗೈಡ್ ಕೆಲಸ ಬಿಟ್ಟರೆ ಬೇರೆ ಉದ್ಯೋಗ ವಿಲ್ಲ. ಲಾಕ್‌ಡೌನ್‌ನಲ್ಲಿ ಎಲ್ಲರಿಗೂ ನೆರವಾದ ಸರ್ಕಾರ ನಮ್ಮನ್ನು ಮರೆತಿತ್ತು. ಸುಧಾಮೂರ್ತಿ ₹ 10 ಸಾವಿರ ಕೊಟ್ಟು ನೆರವಾದರು. 15 ದಿನಗಳ ಹಿಂದೆ ಪ್ರವಾಸೋದ್ಯಮ ಇಲಾಖೆಯಿಂದ ₹ 5 ಸಾವಿರ ಬಂತು. ತಾಂತ್ರಿಕ ಕಾರಣಗಳಿಂದ ಕೆಲವರಿಗೆ ಆ ಹಣವೂ ಬಂದಿಲ್ಲ. ಒಂದೂವರೆ ವರ್ಷದಿಂದ ನಮ್ಮ ಪಾಡು ಕೇಳೋರೇ ಇರಲಿಲ್ಲ' ಎಂದು ಮೌನಕ್ಕೆ ಜಾರಿದರು.

2020ರ ಮಾರ್ಚ್‌ನಿಂದ 2021ರ ಏಪ್ರಿಲ್‌ವರೆಗೆ ಅವರಿಗೆ ಕೇವಲ 36 ದಿನ ಗೈಡ್ ಕೆಲಸ ಸಿಕ್ಕಿದೆ. ಲಾಕ್‌ಡೌನ್‌ಗೂ ಮೊದಲು 250 ದಿನ ಕೆಲಸವಿರುತ್ತಿತ್ತು. ಮೊದಲ ಅಲೆಯಲ್ಲಿ 4 ತಿಂಗಳು, 2ನೇ ಅಲೆಯಲ್ಲಿ ಎರಡು ತಿಂಗಳು ಸ್ಮಾರಕಗಳು ಮುಚ್ಚಿದ್ದವು. ಬಳಿಕ ತೆರೆದರೂ ಪ್ರವಾಸಿಗರು ನಿರೀಕ್ಷೆಯಂತೆ ಬರುತ್ತಿಲ್ಲ.

ರಾಜ್ಯದ ವಿವಿಧ ಪ್ರವಾಸಿ ಸ್ಥಳಗಳಲ್ಲಿರುವ ಬಹುತೇಕ ಗೈಡ್‌ಗಳನ್ನು ಲಾಕ್‌ಡೌನ್ ಇಂಥದ್ದೇ ಶೋಚನೀಯ ಸ್ಥಿತಿಗೆ ತಳ್ಳಿದೆ. ಲಾಕ್‌ಡೌನ್ ತೆರವಾದ ಬಳಿಕವೂ ಸನ್ನಿವೇಶ ಸುಧಾರಿಸಿಲ್ಲ.

'ಪ್ರವಾಸಿಗರಿಗೆ ವಸತಿಗೃಹಗಳು ಇನ್ನೂ ತೆರೆದಿಲ್ಲ. ವಿಮಾನಗಳಿಲ್ಲ. ಹೀಗಾಗಿ ವಿದೇಶಿ ಪ್ರವಾಸಿಗರೂ ಬರುತ್ತಿಲ್ಲ. ಸ್ಮಾರಕಗಳ ಪ್ರವೇಶ ಶುಲ್ಕವೂ ಹೆಚ್ಚಾಗಿದೆ. 9 ತಿಂಗಳಿಂದ ವಿವಿಧ ರಾಜ್ಯಗಳ ಪ್ರವಾಸಿಗರೂ ಬಂದಿಲ್ಲ. ಕೆಲಸವಿಲ್ಲದೆ ನಾನು ಉದ್ಯೋಗ ಖಾತ್ರಿ ಕೂಲಿಯಾಗಿದ್ದೆ' ಎಂದು ಹಂಪಿಯ ಗೈಡ್ ಬಿ.ನಾಗರಾಜ್ ಹೇಳಿದರೆ, 'ಬದುಕು ನಡೆಸಲು ಮನೆ ಮುಂದೆಯೇ ಮೊಟ್ಟೆ ವ್ಯಾಪಾರ' ಮಾಡಿದೆ ಎಂದು ಚಿತ್ರದುರ್ಗದ ಗೈಡ್ ಬಿ.ಮೊಹಿದ್ದೀನ್ ವ್ಯಥೆಪಟ್ಟರು. ಕೆಲವರು ಗೈಡ್ ಕೆಲಸ ಬಿಟ್ಟಿರುವುದರಿಂದ, ಪ್ರವಾಸಿಗರು ಬಂದಾಗ ಹೋಟೆಲ್ ಮತ್ತು ಟ್ರಾವೆಲ್ ಏಜೆಂಟರು ಗೈಡ್‌ಗಳಿಗಾಗಿ ಪರದಾಡುತ್ತಾರೆ. ಪ್ರವಾಸೋದ್ಯಮವೇ ಬಹುತೇಕರ ಬದುಕಾಗಿ ರುವ ಮೈಸೂರಿನಲ್ಲಿ ಟೂರಿಸ್ಟ್ ಏಜೆನ್ಸಿಗಳಿಗೆ ದೊಡ್ಡ ಪೆಟ್ಟು ಬಿದ್ದಿದೆ. ಅವರನ್ನೇ ನೆಚ್ಚಿಕೊಂಡಿದ್ದ ನೂರಾರು ಕಾರು ಚಾಲಕರ ಬದುಕು ಕೂಡ ಅತಂತ್ರವಾಗಿದೆ. ಹೋಟೆಲ್‌ಗಳೂ ಮುಚ್ಚಿದ್ದರಿಂದ ಅಲ್ಲಿನ ಕೆಲಸಗಾರರೂ ತೊಂದರೆ ಅನುಭವಿಸಿದ್ದಾರೆ.

ಟೂರಿಸ್ಟ್ ಏಜೆನ್ಸಿಯೊಂದರಲ್ಲಿ ವಾಹನ ಚಾಲಕರಾಗಿದ್ದ ನಗರದ ನಿವಾಸಿ ನಾಗೇಶ್ ಸ್ವಂತ ಏಜೆನ್ಸಿ ಶುರು ಮಾಡಬೇಕೆಂಬ ಹಂಬಲದಿಂದ ಬ್ಯಾಂಕಿನಿಂದ ಸಾಲ ಪಡೆದು ಕಾರನ್ನು ಖರೀದಿಸಿದ್ದರು. ಲಾಕ್‌ಡೌನ್‌ಗೂ ಮುಂಚೆ, ಉಳಿತಾಯದ ಹಣದಿಂದ ಇನ್ನೊಂದು ಕಾರನ್ನು ಖರೀದಿಸಿದ್ದರು. ಆದರೆ, ಪ್ರವಾಸಿ ಟ್ಯಾಕ್ಸಿ ಕೇಳುವವರೇ ಇಲ್ಲದಂತಾದಾಗ, ಕಾರಿನ ನಿರ್ವಹಣೆ ಮಾಡಲಾಗದೆ ಮಾರಾಟ ಮಾಡಬೇಕಾಯಿತು.

'ಈಗಲೂ ಪ್ರವಾಸಿಗರು ಮೈಸೂರಿಗೆ ಬರುತ್ತಿಲ್ಲ. ಆಗೊಂದು ಈಗೊಂದು ಟೂರ್ ಕಾಲ್ ಬರುತ್ತಿದೆ. ಲಾಕ್‌ಡೌನ್ ನಂತರ ಪರಿಸ್ಥಿತಿ ಸುಧಾರಿಸಬಹುದು ಎಂದುಕೊಂಡಿದ್ದೆ. ಆದರೆ, ಮೂರನೇ ಅಲೆಯ ಭಯ ಜನರನ್ನು ಕಾಡುತ್ತಿದೆ. ಸ್ಥಳೀಯ ಪ್ರವಾಸಿಗರೇ ಗತಿ ಎಂಬಂತಾಗಿದೆ' ಎಂದು ವಿಷಾದಿಸಿದರು.

'ಶನಿವಾರ–ಭಾನುವಾರವೇ ನಮಗೆ ಅನ್ನ ಸಿಗೋದು. ಆದರೆ, ವಾರಾಂತ್ಯ ಕರ್ಫ್ಯೂ ಅದಕ್ಕೂ ಕಲ್ಲು ಹಾಕಿತು' ಎಂದು ಮೈಸೂರು ಅರಮನೆಯಲ್ಲಿ ಪ್ರವಾಸಿಗರ ಫೋಟೋ ತೆಗೆಯುವ ಜಟ್ಟಿ ರಾಜೀವ್, ಚಾಮರಾಜನಗರದ ಭರಚುಕ್ಕಿ ಜಲಪಾತದಲ್ಲಿ ಫೋಟೋ ತೆಗೆಯುವ ಶಂಕರ್ ವಿಷಾದಿಸಿದರು. 'ಪ್ರವಾಸಿಗರು ಈಗೀಗ ಬರುತ್ತಿದ್ದಾರೆ. ಆದರೆ, ಅವರ ಬಳಿ ಮೊಬೈಲ್ ಫೋನ್‌ಗಳಿರುವುದರಿಂದ ನಮ್ಮ ಫೋಟೋ ಬೇಡ ಎನ್ನುವವರೇ ಹೆಚ್ಚು' ಎಂದರು.

ಬದುಕು ಬೀದಿಗೆ ತಂದ ಕೋವಿಡ್

ಮುಚ್ಚಿದ ಅಂಗಡಿ, ಮುಚ್ಚದ ಬದುಕು

ಪ್ರವಾಸಿ ತಾಣಗಳ ರಸ್ತೆ ಬದಿ ವ್ಯಾಪಾರಿಗಳೂ ಲಾಕ್‌ಡೌನ್‌ನಿಂದ ಬಸವಳಿದಿದ್ದಾರೆ. ಪೂಜೆ ಸಾಮಗ್ರಿ, ಮಕ್ಕಳ ಆಟಿಕೆಗಳು, ಎಳನೀರು, ಐಸ್‌ಕ್ರೀಂ, ಜ್ಯೂಸ್, ಹಚ್ಚಿದ ಹಣ್ಣುಗಳನ್ನು ಮಾರಾಟ ಮಾಡುತ್ತಾ ದಿನದೂಡುತ್ತಿದ್ದ ಬಹುತೇಕರು ದಿನಗೂಲಿ ಕೆಲಸ ಮಾಡಿದ್ದಾರೆ. ಈಗಲೂ ಪ್ರವಾಸಿಗರು ಬಾರದೇ ಇರುವುದರಿಂದ ಅಂಗಡಿ ಬದುಕನ್ನು ನೆಚ್ಚಿಕೊಳ್ಳುವ ಭರವಸೆ ಹಲವರಿಗೆ ಇಲ್ಲ.

'ಅಂಗಡಿ ಮುಚ್ಚಿದಂತೆ, ಬದುಕನ್ನು ಮುಚ್ಚೋಕೆ ಆಗದ ಪರಿಸ್ಥಿತಿಯಲ್ಲಿ ಏನೇನೋ ಕೆಲಸ ಮಾಡಿದೆವು' ಎಂದು ಅರಮನೆ ಸಮೀಪದ ವ್ಯಾಪಾರಿ ರಹಮತ್ ಹೇಳಿದರು.

ರಾಜ್ಯಕ್ಕೆ ಭೇಟಿ ನೀಡಿದ ಪ್ರವಾಸಿಗರು

ವರ್ಷ	ದೇಶಿಯ ಪ್ರವಾಸಿಗರು	ವಿದೇಶಿ ಪ್ರವಾಸಿಗರು	ಒಟ್ಟು ಪ್ರವಾಸಿಗರು (ಕೋಟಿಗಳಲ್ಲಿ)
2017	17.99	0.49	18.48
2018	21.43	0.54	21.97
2019	22.79	0.60	23.39
2020	7.74	0.16	7.90

ಮುಖ್ಯಾಂಶಗಳು

- ಪ್ರವಾಸೋದ್ಯಮ ನೆಚ್ಚಿಕೊಂಡವರ ಪರದಾಟ
- ಉದ್ಯೋಗಖಾತ್ರಿ ಕೂಲಿ ಮಾಡಿದ ಟೂರಿಸ್ಟ್ ಗೈಡ್
- ಪ್ರವಾಸಿಗರ ನಿರೀಕ್ಷೆಯಲ್ಲಿ ಉದ್ಯಮ

ಮೈಸೂರು ಅರಮನೆಗೆ ಬರುವ ಪ್ರವಾಸಿಗರ ಫೋಟೋ ತೆಗೆದು ಬದುಕು ನಡೆಸುವವರು..

ನನಗೆ ವ್ಯಾಪಾರವೇ ಗೊತ್ತಿರಲಿಲ್ಲ. ಟೂರಿಸ್ಟ್ ಗೈಡ್ ಕೆಲಸವಿಲ್ಲದೆ ಮನೆ ಮುಂದೆ ಮೊಟ್ಟೆ ವ್ಯಾಪಾರ ಮಾಡಿ ಬದುಕು ನಡೆಸಿದೆ
ಬಿ.ಮೊಹಿದ್ದೀನ್, ಚಿತ್ರದುರ್ಗ

ಉಳಿತಾಯದ ಹಣವನ್ನೆಲ್ಲ ಹಾಕಿ ಖರೀದಿಸಿದ ಕಾರನ್ನು, ಪ್ರವಾಸಿಗರು ಬಾರದ ಕಾರಣ ಮಾರಾಟ ಮಾಡಬೇಕಾಯಿತು.
ನಾಗೇಶ್, ಕಾರು ಚಾಲಕ, ಮೈಸೂರು

ಗೈಡ್ ಕೆಲಸವಿಲ್ಲದೆ ನಾನು ಉದ್ಯೋಗಖಾತ್ರಿ ಕೂಲಿ ಕೆಲಸ ಮಾಡಿದೆ. ಕೆಲವರು ಬಾಳೆತೋಟದ ಕೂಲಿ ಕೆಲಸಕ್ಕೆ ಹೋದರು.
ಬಿ.ನಾಗರಾಜ್, ಹಂಪಿ

ಲಾಕ್‌ಡೌನ್ ಬಳಿಕವೂ ಪ್ರವಾಸಿಗರಿಲ್ಲದೆ ಲಾಡ್ಜ್ ನಡೆಸುವುದು ಕಷ್ಟಕರವಾಗಿದೆ. ಎಲ್ಲ ಸಿಬ್ಬಂದಿಗೆ ಸಂಬಳ ಕೊಡಲೂ ಆಗದ ಪರಿಸ್ಥಿತಿ ಇದೆ
ಎಂ.ಎಸ್.ಜಯಪ್ರಕಾಶ್, ಲಾಡ್ಜ್ ಮಾಲೀಕ, ಮೈಸೂರು

ಅಂಕಿ-ಅಂಶಗಳು

1.76 ಕೋಟಿ — 2019ರಲ್ಲಿ ಮೈಸೂರಿಗೆ ಭೇಟಿ ನೀಡಿದ ಒಟ್ಟು ಪ್ರವಾಸಿಗರು	**1.40** ಕೋಟಿ — 2019ರಲ್ಲಿ ವಿಜಯನಗರ ಜಿಲ್ಲೆಗೆ ಭೇಟಿ ನೀಡಿದ ಒಟ್ಟು ಪ್ರವಾಸಿಗರು
69,913 — 2019ರಲ್ಲಿ ಭೇಟಿ ನೀಡಿದ ವಿದೇಶಿ ಪ್ರವಾಸಿಗರು	**73,048** — ವಿದೇಶಿ ಪ್ರವಾಸಿಗರು
54.6 ಲಕ್ಷ — 2020ರಲ್ಲಿ ಭೇಟಿ ನೀಡಿದ ಒಟ್ಟು ಪ್ರವಾಸಿಗರು	**45.13** ಲಕ್ಷ — 2020ರಲ್ಲಿ ಭೇಟಿ ನೀಡಿದ ಪ್ರವಾಸಿಗರು
31,042 — 2020ರಲ್ಲಿ ಭೇಟಿ ನೀಡಿದ ವಿದೇಶಿ ಪ್ರವಾಸಿಗರು	**20,912** — ವಿದೇಶಿ ಪ್ರವಾಸಿಗರು

ಲಾಡ್ಜ್: ಅರ್ಧ ಬಾಡಿಗೆಯೂ ಭಾರ!

ಲಾಡ್ಜ್‌ಗಳನ್ನು ಬಾಡಿಗೆ ಆಧಾರದಲ್ಲಿ ನಡೆಸುವವರಿಗೆ ಕಷ್ಟದ ದಿನಗಳು ಇನ್ನೂ ಮುಗಿದಿಲ್ಲ. ಲಾಕ್‌ಡೌನ್ ಕಾರಣಕ್ಕೆ ಹಲವೆಡೆ ಲಾಡ್ಜ್‌ಗಳ ಮಾಲೀಕರು ಉದಾರ ಭಾವದಿಂದ ಒಪ್ಪಂದದ ಅರ್ಧ ಬಾಡಿಗೆಯನ್ನಷ್ಟೇ ಪಡೆಯಲು ಒಪ್ಪಿದ್ದಾರೆ. ಆದರೆ, ಆ ಮೊತ್ತವನ್ನು ಕೊಡಲೂ ಆಗದ ಪರಿಸ್ಥಿತಿಯಲ್ಲಿ ಹಲವರಿದ್ದಾರೆ.

'ಅರ್ಧದಷ್ಟು ಸಿಬ್ಬಂದಿ, ವಿದ್ಯುತ್ ಶುಲ್ಕ ಪಾವತಿಸಲೂ ಆಗದ ಪರಿಸ್ಥಿತಿಯಲ್ಲಿ ಲಾಡ್ಜ್ ನಡೆಸುವುದು ಕಷ್ಟ. ಲಾಡ್ಜ್ ಮಾಲೀಕರು ನಿಭಾಯಿಸಬಹುದು. ಬಾಡಿಗೆ ಆಧಾರದಲ್ಲಿ ನಡೆಸುವವರ ಕಷ್ಟ ತೀರಲು ಒಂದೂವರೆ ವರ್ಷ ಬೇಕಾಗಬಹುದು' ಎನ್ನುತ್ತಾರೆ ಮೈಸೂರಿನ ಲಾಡ್ಜ್ ಮಾಲೀಕ ಎಂ.ಎಸ್. ಜಯಪ್ರಕಾಶ್.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald--Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ
ಸೆಲೆಬ್ರಿಟಿ LIVE
ಮಧ್ಯಾಹ್ನ 11ರಿಂದ 12
ಮುಖಾಮುಖಿ
ಹಿರಿಯ ಚಲನಚಿತ್ರ ನಿರ್ದೇಶಕ **ಎಸ್.ವಿ.ರಾಜೇಂದ್ರಸಿಂಗ್ ಬಾಬು** ಅವರ ಜೊತೆಗೆ



2ಎ ಮೀಸಲಾತಿ: ಕಾನೂನು ಚೌಕಟ್ಟಿನಲ್ಲಿ ಕ್ರಮ – ಸಿಎಂ ಭರವಸೆ

ಪ್ರಜಾವಾಣಿ ವಾರ್ತೆ

ಗದಗ: '2ಎ ಮೀಸಲಾತಿಗೆ ಆಗ್ರಹಿಸಿ ಪಂಚಮಸಾಲಿ ಸಮುದಾಯದವರು ಹೋರಾಟ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಕಾನೂನು ಚೌಕಟ್ಟಿನಲ್ಲಿ ಏನು ಮಾಡಬಹುದು ಎಂಬುದನ್ನು ನಿರ್ಧರಿಸಲಿದೆ. ಹಿಂದುಳಿದ ವರ್ಗಗಳ ಆಯೋಗದ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಗದುಗಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ವಿಚಾರವಾಗಿ ಸರ್ಕಾರ ಈವರೆಗೆ ತೆಗೆದುಕೊಂಡಿರುವ ಕ್ರಮ ಹಾಗೂ ಮುಂದೆ ತೆಗೆದುಕೊಳ್ಳಲಿರುವ ಕ್ರಮಗಳ ವಿಚಾರವಾಗಿ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಜತೆಗೆ ಮಾತನಾಡಿ ಅವರಲ್ಲಿ ವಿಶ್ವಾಸ ಮೂಡಿಸಲಾಗಿದೆ. ಹಾಗಾಗಿ, ಅ. 1ರಂದು ಸತ್ಯಾಗ್ರಹ ನಡೆಸುವ ನಿರ್ಧಾರ ಕೈಬಿಡುತ್ತಾರೆ ಎಂಬ ವಿಶ್ವಾಸ ಇದೆ ಎಂದರು.



ಬಸವರಾಜ ಬೊಮ್ಮಾಯಿ

ಸತ್ಯಾಗ್ರಹ ನಡೆಸದಂತೆ ಮನವಿ– ಚರ್ಚಿಸಿ ತೀರ್ಮಾನ– ಸ್ವಾಮೀಜಿ: ಇದಕ್ಕೂ ಮುನ್ನ ನಗರದ ತೋಂಟದಾರ್ಯ ಕಲ್ಯಾಣ ಕೇಂದ್ರದಲ್ಲಿ ಭಾನುವಾರ ನಡೆದ ಪಂಚಮಸಾಲಿ 2ಎ ಮೀಸಲಾತಿ ಹಕ್ಕೊತ್ತಾಯಿಸಿ ಪ್ರತಿಜ್ಞಾ ಪಂಚಾಯತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ, 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡಿಸುವ ವಿಷಯದಲ್ಲಿ ಸರ್ಕಾರ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತೇನೆ. ಯಾವುದೇ ಕಾರಣಕ್ಕೂ ಸತ್ಯಾಗ್ರಹಕ್ಕೆ ಮುಂದಾಗಬಾರದು' ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿಗೆ ಮನವಿ ಮಾಡಿದರು.

'ಮೀಸಲಾತಿ ಕುರಿತು ಈಗಿನ ಸಿಎಂ ಬಸವರಾಜ ಬೊಮ್ಮಾಯಿ ಅವರೊಂದಿಗೆ ಅನೇಕ ಸಲ ಚರ್ಚೆ ನಡೆಸಲಾಗಿದ್ದು, ಅವರಿಗೂ ಈ ಎಲ್ಲ ವಿಷಯಗಳ ಸಂಪೂರ್ಣ ಅರಿವಿದೆ. ಅನ್ಯ ಜಾತಿಯವರಿಗೆ ಅನ್ಯಾಯವಾಗದಂತೆ ಸಮಾಜಕ್ಕೆ ನ್ಯಾಯ ಕೊಡಿಸುವ ಕಾರ್ಯ ಮಾಡುತ್ತೇನೆ' ಎಂದರು.

ಸಾನ್ನಿಧ್ಯ ವಹಿಸಿದ್ದ ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ, 'ಸರ್ಕಾರ ಕೇಳಿದ್ದ ಆರು ತಿಂಗಳ ಗಡುವು ಸೆ.15ಕ್ಕೆ ಪೂರ್ಣಗೊಂಡಿದ್ದು, ಅಕ್ಟೋಬರ್ 1ರಿಂದ ಮತ್ತೆ ಸತ್ಯಾಗ್ರಹ ನಡೆಸಲು ಚಿಂತಿಸಲಾಗಿದೆ. ಆದರೆ, ಸತ್ಯಾಗ್ರಹ ಮಾಡಬಾರದು ಎಂದು ಸರ್ಕಾರದ ಭಾಗವಾಗಿರುವ ಸಮಾಜದ ಮುಖಂಡ ಸಿ.ಸಿ. ಪಾಟೀಲ ಮನವಿ ಮಾಡಿಕೊಂಡಿದ್ದರಿಂದ ಈ ಕುರಿತು ಹಿರಿಯರೊಂದಿಗೆ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.

ಧಾರವಾಡದ ಆಲೂರು ವೆಂಕಟರಾವ್ ಸಭಾಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ (ಕುಳಿತವರಲ್ಲಿ ಎಡದಿಂದ) ಕವಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಕಾದಂಬರಿಕಾರ ಕುಂ.ವೀರಭದ್ರಪ್ಪ ಹಾಗೂ ಲೇಖಕಿ ವೈದೇಹಿ ಅವರಿಗೆ ಕ್ರಮವಾಗಿ ಡಾ. ಬೆಟಗೇರಿ ಕೃಷ್ಣಶರ್ಮ ಕಾವ್ಯ, ಕಾದಂಬರಿ ಹಾಗೂ ಕಥಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಮೆಹಬೂಬಿ, ವಿದ್ಯಾವತಿ ಭಜಂತ್ರಿ, ಸತೀಶ ಕುಲಕರ್ಣಿ, ಪ್ರೊ. ರಾಘವೇಂದ್ರ ಪಾಟೀಲ, ಡಾ. ಹೇಮಾ ಪಟ್ಟಣಶೆಟ್ಟಿ, ಡಾ. ಗುರುಲಿಂಗ ಕಾಪಸೆ, ಸರಜೂ ಕಾಟ್ಕರ್, ಅನ್ನಪೂರ್ಣಾ, ಚಂದ್ರಶೇಖರ ವಸ್ತ್ರದ, ಆಶಾ ಕಡಪಟ್ಟಿ, ಶಿರೀಷ ಜೋಶಿ, ಡಾ. ಸಿ.ಕೆ.ನಾವಲಗಿ ಇದ್ದಾರೆ.

ರೈತರ ಹೆಸರಿನಲ್ಲಿ ರಾಜಕಾರಣ: ಕಟೀಲ್

ಬೆಳಗಾವಿ: 'ರೈತರ ಹೆಸರಿನಲ್ಲಿ ರಾಜಕಾರಣ ನಡೆಯುತ್ತಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಆರೋಪಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ನಮ್ಮ ಸರ್ಕಾರ ರೈತರ ಪರವಾಗಿದೆ. ಈ ವಿಷಯದಲ್ಲಿ ವಿರೋಧಪಕ್ಷದವರು ರಾಜಕಾರಣ ಮಾಡುವುದು ಸರಿಯಲ್ಲ' ಎಂದರು.

ಕಲಬುರ್ಗಿ, ಬೀದರ್‌ನಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ನಗರ ಸೇರಿದಂತೆ ಜಿಲ್ಲೆಯ ಸೇಡಂ, ಚಿತ್ತಾಪುರ ಮತ್ತು ಯಡ್ರಾಮಿ ತಾಲ್ಲೂಕಿನಲ್ಲಿ ಶನಿವಾರ ರಾತ್ರಿ ಆರಂಭವಾದ ಮಳೆಯು ಭಾನುವಾರ ಬೆಳಿಗ್ಗೆವರೆಗೆ ಸುರಿಯಿತು.

ಚಿಂಚೋಳಿ ತಾಲ್ಲೂಕಿನ ಕುಂಚಾವರಂನ ಸುತ್ತಮುತ್ತ ಅತಿ ಹೆಚ್ಚು 50 ಮಿ.ಮೀ. ಮಳೆ ಮತ್ತು ಯಡ್ರಾಮಿಯಲ್ಲಿ ಅತಿ ಕಡಿಮೆ 4.4 ಮಿ.ಮೀ. ಮಳೆಯಾಯಿತು.

ಸೇಡಂನಿಂದ ಊಡಗಿ ಗ್ರಾಮದಿಂದ ಹಂಗನಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಊಡಗಿ–ಹಂಗನಳ್ಳಿ ರಸ್ತೆ ಸಂಪರ್ಕ ಕಡಿತವಾಗಿದೆ.

ಬೀದರ್ ಜಿಲ್ಲೆಯ ವಿವಿಧೆಡೆ ಭಾನುವಾರ ಸಾಧಾರಣ ಮಳೆಯಾಯಿತು. ಚಿಟಗುಪ್ಪ ತಾಲ್ಲೂಕಿನಲ್ಲಿ ಹೊಲಗಳಲ್ಲಿ ನೀರು ನುಗ್ಗಿದೆ. ಬೀದರ್ ನಗರ, ಮಾಳೆಗಾಂವ, ಜನವಾಡ, ಮರಕಲ್, ಭಾಲ್ಕಿ, ಔರಾದ್ ಹಾಗೂ ಬಸವಕಲ್ಯಾಣದಲ್ಲಿ ಸಾಧಾರಣ ಮಳೆಯಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.62	4,899	7,805
ಹಾರಂಗಿ	2,859	2,858.09	750	1,450
ಕಬಿನಿ	2,284	2,282.4	100	700
ಹೇಮಾವತಿ	2,922	2,914.84	2,081	5,172
ಲಿಂಗನಮಕ್ಕಿ	1,819	1,815.90	2,559	-
ಸೂಪಾ (ಮೀ)	564	556.92	2,054	5,618
ಮಾಣಿ	594.36	587.72	802	-
ತುಂಗಭದ್ರಾ	1,633	1,632.87	10,168	15,418
ಮಲಪ್ರಭಾ	2,079.50	2,079	74	1,694
ಘಟಪ್ರಭಾ	2,175	2,175	1,482	1,482
ಭದ್ರಾ	186	185.10	2,769	3,371
ಆಲಮಟ್ಟಿ (ಮೀ)	519.60	519.60	8,780	8,780
ನಾರಾಯಣಪುರ (ಮೀ)	492.25	492.22	8,200	9,500

* ನೆಲಮಟ್ಟದಿಂದ

ನಿಧನ ವಾರ್ತೆ

ಐಪಿಎಸ್ ಅಧಿಕಾರಿ ಡಾ. ಕೆ.ವಿ. ಜಗದೀಶ್

ಬೆಂಗಳೂರು: ಐಪಿಎಸ್ ಅಧಿಕಾರಿ ಡಾ. ಕೆ.ವಿ. ಜಗದೀಶ್ (44) ಅವರು ಅನಾರೋಗ್ಯದಿಂದಾಗಿ ನಗರದ ಎಚ್‌ಸಿಜಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಕೋಲಾರದ ಜಗದೀಶ್, ಎಂಬಿಬಿಎಸ್ ಪದವೀಧರರು. 2005ರಲ್ಲಿ ಕರ್ನಾಟಕ ಪೊಲೀಸ್ ಸೇವೆಗೆ ಸೇರಿದ್ದರು. 2012ರಲ್ಲಿ ಐಪಿಎಸ್ ಶ್ರೇಣಿಗೆ ಅರ್ಹತೆ ಪಡೆದಿದ್ದರು. ಬೆಂಗಳೂರು ಸಂಚಾರ ವಿಭಾಗದ ಡಿಸಿಪಿ ಸೇರಿದಂತೆ ಹಲವು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಹಲವು ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅವರ ಆರೋಗ್ಯ ತೀವ್ರ ಹದಗೆಟ್ಟಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಎಚ್‌ಸಿಜಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಜಗದೀಶ್ ಅವರ ಅಂತ್ಯಕ್ರಿಯೆಯನ್ನು ಹುಟ್ಟೂರಾದ ಕೋಲಾರದಲ್ಲಿ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಡಾ. ಬಸವರಾಜ ಜವಳಿ

ಧಾರವಾಡ: ಕಲ್ಯಾಣನಗರ ನಿವಾಸಿ, ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ನಿವೃತ್ತ ಪ್ರಾಧ್ಯಾಪಕ ಡಾ. ಬಸವರಾಜ ಚನ್ನವೀರಪ್ಪ ಜವಳಿ (90) ಭಾನುವಾರ ನಿಧನರಾದರು.

ಅವರಿಗೆ ಪುತ್ರ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ.

ಮೂಲತಃ ಹಾವೇರಿ ಜಿಲ್ಲೆ ಹಾವಣಗಿ ಗ್ರಾಮದವರಾದ ಇವರು, 'ಹರಿಹರನ ಸ್ತ್ರೀಪಾತ್ರ ದರ್ಶನಗಳು' ವಿಷಯವಾಗಿ ಮಹಾಪ್ರಬಂಧ ಮಂಡಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸುವರ್ಣ ಪದಕದೊಂದಿಗೆ ಡಾಕ್ಟರೇಟ್ ಪದವಿ ಪಡೆದಿದ್ದರು. ವಿಶೇಷವಾಗಿ ಶರಣ ಸಾಹಿತ್ಯದಲ್ಲಿ ಆಳವಾದ ಅಧ್ಯಯನ ಮಾಡಿದ್ದ ಇವರು, ವಚನ ಸಾಹಿತ್ಯದ ಮೇರು ಚಿಂತಕರಾಗಿದ್ದರು. ಶ್ರೇಷ್ಠ ವಾಗ್ಮಿಯಾಗಿದ್ದ ಇವರು ವಚನ ಸಾಹಿತ್ಯದಲ್ಲಿ ಪ್ರಬುದ್ಧ ಪ್ರಬಂಧಗಳನ್ನು ಮಂಡಿಸಿ ಪ್ರಶಂಸೆಗೆ ಪಾತ್ರರಾಗಿದ್ದರು.

28 ಸಾಹಿತ್ಯ ಕೃತಿಗಳು: ಕನ್ನಡ ವಾಙ್ಮಯ ವಿಹಾರದಲ್ಲಿ ಹರಿಹರ ಕವಿಯ ಮಹೋನ್ನತವಿಚಾರಗಳು, ಪಂಪಮಹಾಕವಿ ಚಿತ್ರಿಸಿದ ಭೀಷ್ಮರು, ಮುತ್ತಿನಹಾರ, ಹರಿಹರ ಕವಿಯ ನಂಬಿಯಣ್ಣನ ರಗಳೆ, ಹಂಪೆಯ ಹರಿಹರ ದೇವರ ರಗಳೆ ಭಾಗ-1 ಮತ್ತು ಭಾಗ-2, ಬಿಡಿ ಲೇಖನಗಳು ಮತ್ತಿತರ ಕೃತಿಗಳು, ಅನುಭಾವ ಸಾಹಿತ್ಯದಲ್ಲಿ ಗಿರಿಜಾ ಕಲ್ಯಾಣ, ದಾಸೋಹ, ಬಸವಣ್ಣನವರ ಯೋಜನೆಗಳು, ಮಹಾದೇವಿಯಕ್ಕ, ಪ್ರಭುಲಿಂಗ ಲೀಲೆ, ಕೈವಲ್ಯಪದ್ಧತಿ ಹಾಗೂ ಅನುವಾದ ಸೇರಿದಂತೆ ಒಟ್ಟು 28 ಸಾಹಿತ್ಯ ಕೃತಿಗಳನ್ನು ಡಾ. ಜವಳಿ ಪ್ರಕಟಿಸಿದ್ದಾರೆ.

ಅಂತ್ಯಕ್ರಿಯೆ ಸೆ.27 ರಂದು ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎ.ಶ್ರೀಕರ

ರಿಶಿತ್ ಶ್ರೀವಾಸ್ತವ

ಪಿ. ನಿಶ್ಚಿತ್

ಎಂ. ಶ್ರೀಹರ್ಷ ಭಟ್



ಭಾವೇಶ್ ಗುರ್ನಾನಿ

ಕಟಿಕೇಲ ಪುನೀತ್

ಗೌರವ್

ಆರ್. ಶಿವ ಸುಧಾನ್

ಕಾಮೆಡ್- ಕೆ: ರಾಜ್ಯದ ವೀರೇಶ್ ಮೊದಲಿಗ

ಒಂದನೇ ಪುಟದಿಂದ

ಮೇ ತಿಂಗಳಲ್ಲಿ ನಡೆಯಬೇಕಾಗಿದ್ದ ಕಾಮೆಡ್-ಕೆ ಪರೀಕ್ಷೆಯನ್ನು ಕೋವಿಡ್ ಎರಡನೇ ಅಲೆ, ಲಾಕ್‌ಡೌನ್ ಕಾರಣಗಳಿಗೆ ಮೂರು ಬಾರಿ ಮುಂದೂಡಲಾಗಿತ್ತು. ಅಂತಿಮವಾಗಿ ಸೆ. 14ರಂದು ಪರೀಕ್ಷೆ ನಡೆಸಲಾಗಿತ್ತು.

ದೇಶದಾದ್ಯಂತ 157 ನಗರಗಳಲ್ಲಿ 224 ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಪರೀಕ್ಷೆ ನಡೆದಿತ್ತು. 180 ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಮತ್ತು 30ಕ್ಕೂ ಅಧಿಕ ಖಾಸಗಿ ವಿಶ್ವವಿದ್ಯಾಲಯಗಳು ಎಂಜಿನಿಯರಿಂಗ್ ಪ್ರವೇಶಕ್ಕೆ ಕಾಮೆಡ್-ಕೆ ಪರೀಕ್ಷಾ ಫಲಿತಾಂಶ ಪರಿಗಣಿಸುತ್ತವೆ.

ದೀಪಕ್ ಚೌಧರಿ

ಭಾರತ ಬಂದ್: ರೈತರ ರ‍್ಯಾಲಿ

ಒಂದನೇ ಪುಟದಿಂದ

'ಸರ್ಕಾರ ಬಂದ್ ವಿಫಲಗೊಳಿಸಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ. ಖಾಲಿ ಬಸ್‌ಗಳನ್ನು ಸಹ ಓಡಿಸಬಹುದು. ಆದರೂ, ನಮ್ಮ ಹೋರಾಟ ನಿಲ್ಲುವುದಿಲ್ಲ' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಆದರೆ, ಹೋಟೆಲ್‌ಗಳ ಸಂಘ, ಆಟೋ ರಿಕ್ಷಾ ಚಾಲಕರ ಸಂಘ, ಓಲಾ–ಉಬರ್ ಚಾಲಕರು ಮತ್ತು ಮಾಲೀಕರ ಸಂಘ, ಸಾರಿಗೆ ನೌಕರರ ಕೂಟ ಸೇರಿದಂತೆ ಹಲವು ಸಂಘಟನೆಗಳು ನೈತಿಕ ಬೆಂಬಲ ಮಾತ್ರ ಘೋಷಿಸಿದ್ದು, ಬಂದ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಹೇಳಿವೆ. ಬಿಎಂಟಿಸಿ ಸೇರಿದಂತೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳು ಎಂದಿನಂತೆ ಸಂಚರಿಸಲಿವೆ.

ರಾಜ್ಯದಾದ್ಯಂತ ಬಿಗಿ ಭದ್ರತೆ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮತ್ತು ಕಮಿಷನರ್‌ಗಳಿಗೆ ಸೂಚಿಸಿದ್ದಾರೆ.

ಒಳನೋಟ ಆಶಯದಿಂದ ದೂರ

ಬೆಂಗಳೂರು: 'ಮಕ್ಕಳ ಹಿತ ಮರೆಯಿತೇ?' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಸೆ.26) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಮೂಲ ಉದ್ದೇಶ ಮರೆಯಬಾರದು'

ಸರ್ಕಾರದ ಮಟ್ಟದಲ್ಲಿ ಹೊಸ ಯೋಜನೆ ಜಾರಿ ಆಗುವುದು ದೊಡ್ಡ ವಿಷಯವಲ್ಲ. ಆದರೆ, ಆ ಯೋಜನೆ ಎಷ್ಟರ ಮಟ್ಟಿಗೆ ಅನುಷ್ಠಾನ ಆಗಿದೆ ಎನ್ನುವುದು ಮುಖ್ಯ. ಶೋಷಣೆಗೆ ಒಳಗಾದ ಮಕ್ಕಳನ್ನು ಸಮಾಜದಲ್ಲಿ ಮುನ್ನೆಲೆಗೆ ತರಲು ಮಕ್ಕಳ ಸ್ಥಾಯಿ ಸಮಿತಿಗಳು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕು. ಮಕ್ಕಳ ಹಕ್ಕುಗಳ ಬಗ್ಗೆ ತಿಳಿದಿರುವ ಹಾಗೂ ಮಕ್ಕಳ ಮೇಲೆ ಕಾಳಜಿ ಹೊಂದಿರುವ ಅಧಿಕಾರಿಗಳು ಮಕ್ಕಳ ಕಲ್ಯಾಣ ಸಮಿತಿಗೆ ಅಗತ್ಯ.

ಕಿರಣ್ ಮೌರ್ಯ, ಮೈಸೂರು

'ಮಕ್ಕಳ ಹಕ್ಕುಗಳು ನಿರ್ಲಕ್ಷ್ಯ'

ಹಲವು ಬಗೆಯ ಶೋಷಣೆಗಳಿಂದ ಸಾವಿರಾರು ಮಕ್ಕಳ ಬದುಕು ಕಮರುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ತನ್ನ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ತೊಡಗಿಕೊಂಡಿಲ್ಲ. ಇದರಿಂದ ಸಹಸ್ರಾರು ಮಕ್ಕಳು ಶಿಕ್ಷಣ ಸೇರಿದಂತೆ ಅನೇಕ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ವಿಶ್ವವಿದ್ಯಾಲಯಗಳ ವಿವಿಧ ವಿಭಾಗಗಳು ಶೋಷಣೆಗೆ ಒಳಗಾದ ಮಕ್ಕಳ ಕುರಿತು ಕ್ಷೇತ್ರ ಅಧ್ಯಯನ ನಡೆಸಿ, ಪರಿಹಾರೋಪಾಯಗಳ ಕುರಿತು ಸರ್ಕಾರಕ್ಕೆ ಅಧ್ಯಯನ ವರದಿ ಸಲ್ಲಿಸಬೇಕು.

ರಾಘವೇಂದ್ರ ಹಾರಣಗೇರಾ, ಯಾದಗಿರಿ

'ಮಕ್ಕಳನ್ನು ಕಡೆಗಣಿಸಿದ ಸರ್ಕಾರ'

ಇತ್ತೀಚಿನ ವರ್ಷಗಳಲ್ಲಿ ಸರ್ಕಾರಗಳು ಮಹಿಳೆಯರು ಹಾಗೂ ಮಕ್ಕಳನ್ನು ಕಡೆಗಣಿಸುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದರಿಂದಾಗಿಯೇ ಲೈಂಗಿಕ ದೌರ್ಜನ್ಯ, ಶೋಷಣೆಗಳಂತಹ ಪ್ರಕರಣಗಳು ಹೆಚ್ಚಾಗುತ್ತಿವೆ. ಶೋಷಿತ ಮಕ್ಕಳ ನೋವಿಗೆ ಸ್ಪಂದಿಸುವ, ಕಾನೂನಿನ ಅರಿವು ಮೂಡಿಸುವ ಮಾರ್ಗದರ್ಶಕರಿಲ್ಲದೆ ಸಂತ್ರಸ್ತರು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಪ್ರಕರಣಗಳು ಮುಚ್ಚಿ ಹೋಗುತ್ತವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಹೆಚ್ಚಿನ ಅನುದಾನವನ್ನು ಹಂಚಿಕೆ ಮಾಡಿ, ಸಮರ್ಪಕ ಬಳಕೆಯಾಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಬೇಕು.

ನಾಗರತ್ನ ಎಚ್., ಬೆಂಗಳೂರು

'ಮಕ್ಕಳಿಗೆ ಮಾನಸಿಕ ಒತ್ತಡ'



ಮಕ್ಕಳ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ದೂರುಗಳನ್ನು ಪಡೆದು ಅಥವಾ ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸುವ ಅಧಿಕಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಇದೆ. ಶಿಕ್ಷಣ ಹಕ್ಕು ಕಾಯ್ದೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ಕಾಯ್ದೆಗಳ ಜಾರಿ ಮತ್ತು ಮೇಲುಸ್ತುವಾರಿ ಮಾಡಬೇಕಿದೆ. ಆದರೆ, ಈ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಕೆಲವು ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗಿ, ಆತ್ಮಹತ್ಯೆಗೆ ಶರಣಾಗುತ್ತಿವೆ. ಮಕ್ಕಳ ಹಕ್ಕುಗಳ ಉಲ್ಲಂಘನೆಯಾದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ಆಯೋಗಕ್ಕೆ ನೀಡಬೇಕು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳೂ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಕಠಿಣ ಕ್ರಮ ಕೈಗೊಳ್ಳಬೇಕು.

ಸುಮಾ ಮಹೇಶ್, ಕೊಪ್ಪಳ

'ಸಂಪೂರ್ಣ ಅಧಿಕಾರ ನೀಡಲಿ'

'ಕಾರ್ಯಕ್ಷೇತ್ರಗಳಲ್ಲಿ ನಿರಂತರವಾಗಿ ಮಕ್ಕಳ ಮೇಲಿನ ಶೋಷಣೆ ಅವ್ಯಾಹತವಾಗಿ ನಡೆಯುತ್ತಿರುವುದು ವಿಷಾದನೀಯ. ನಾಮಕಾವಾಸ್ತೆಗೆ ಮಾತ್ರ ಸೀಮಿತವಾದ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ಹಿತಾಸಕ್ತಿ ಮರೆತು ತಮ್ಮ ಸ್ವಹಿತಾಸಕ್ತಿ ಸಾಧನೆಗೆ ಪೂರಕವಾಗಿ ಶ್ರಮಿಸುತ್ತಿರುವುದು ದುರಂತವೇ ಸರಿ. ಹಾಗಾಗಿ, ಸರ್ಕಾರವು ಮಕ್ಕಳ ಮೇಲಿನ ಶೋಷಣೆ ನಿವಾರಣೆಗೆ ಸಂಬಂಧಿಸಿದಂತೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ತ್ವರಿತ ಕ್ರಮ ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ನೀಡಬೇಕು. ಮಕ್ಕಳ ಕಲ್ಯಾಣ ಮತ್ತು ರಕ್ಷಣಾ ಸಮಿತಿಗಳನ್ನು ಸಮರ್ಪಕವಾಗಿ ಬಲಪಡಿಸಿ, ಮಕ್ಕಳ ಸಮಗ್ರ ಅಭ್ಯುದಯಕ್ಕೆ ಸದಾ ಸ್ಪಂದಿಸಬೇಕು.

ಎಸ್.ಎಚ್. ಸೋಮಶೇಖರ ಮಾಗಳ, ವಿಜಯನಗರ

‘ನಾಯಂಡಹಳ್ಳಿ ಕೆರೆ: ಕಾಮಗಾರಿ 4 ತಿಂಗಳಲ್ಲಿ ಪೂರ್ಣಗೊಳಿಸಿ’

ಪ್ರಜಾವಾಣಿ ವಾರ್ತೆ

ನಾಯಂಡಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಸಚಿವ ಸೋಮಣ್ಣ ಅವರು ಭಾನುವಾರ ಪರಿಶೀಲಿಸಿದರು

ಬೆಂಗಳೂರು: ನಾಯಂಡಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ನಾಲ್ಕು ತಿಂಗಳ ಒಳಗೆ ಪೂರ್ಣಗೊಳಿಸುವಂತೆ ಮೂಲಸೌಕರ್ಯ ಅಭಿವೃದ್ಧಿ ಹಾಗೂ ವಸತಿ ಸಚಿವ ವಿ.ಸೋಮಣ್ಣ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವತಿಯಿಂದ ಗೋವಿಂದ ರಾಜ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಯಂಡಹಳ್ಳಿ ಕೆರೆ ಮತ್ತು ನಿರ್ಮಾಣ ಹಂತದಲ್ಲಿರುವ ಸರ್ಕಾರಿ ಆಸ್ಪತ್ರೆ ಕಟ್ಟಡದ ಕಾಮಗಾರಿಗಳನ್ನು ಅವರು ಭಾನುವಾರ ಪರಿಶೀಲನೆ ನಡೆಸಿದರು.

ನಾಯಂಡಹಳ್ಳಿ ಕೆರೆಯು ಸುಮಾರು 15 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ಈ ಕೆರೆಯನ್ನು ₹ 10 ಕೋಟಿ ವೆಚ್ಚದಲ್ಲಿ ಬಿಬಿಎಂಪಿ ಅಭಿವೃದ್ಧಿಪಡಿಸುತ್ತಿದೆ. ವೃಷಭಾವತಿ ಕಾಲುವೆಯಲ್ಲಿ ಹರಿಯುವ ನೀರನ್ನು ಶುದ್ಧೀಕರಿಸಿ ಕೆರೆಗೆ ಬಿಡುವ ಕಾಮಗಾರಿಯೂ ಇದರಲ್ಲಿ ಸೇರಿದೆ. ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ಇಲ್ಲಿ ಸ್ಥಾಪಿಸಲಾಗುತ್ತದೆ. ಅಲ್ಲದೇ ಯೋಗ ಕೇಂದ್ರ, ವಾಯು ವಿಹಾರ ಪಥ, ಬೋಟಿಂಗ್, ಮಕ್ಕಳ ಆಟದಂಗಳ, ವಯಸ್ಕರಿಗೆ ಹೊರಾಂಗಣ ವ್ಯಾಯಾಮ ಶಾಲೆಗಳು ಇಲ್ಲಿ ನಿರ್ಮಾಣಗೊಳ್ಳಲಿವೆ.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ ತಪಾಸಣೆ: ಪಂತರಪಾಳ್ಯದ (ನಾಯಂಡ ಹಳ್ಳಿ ರೈಲ್ವೆ ನಿಲ್ದಾಣದ ದಾರಿ) ಕೊಳೆಗೇರಿ ಕಟ್ಟಡದ ಪಕ್ಕ ಖಾಲಿ ಇರುವ 4.16 ಎಕರೆ ಪ್ರದೇಶದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಗೊಳ್ಳುತ್ತಿದೆ.

‘ಆಸ್ಪತ್ರೆ ಕಾಮಗಾರಿಯನ್ನು ಎಂಟು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಸೋಮಣ್ಣ ತಿಳಿಸಿದರು.

ಆಸ್ಪತ್ರೆಯ ಆವರಣದ ಸುತ್ತ ನೀರು ನುಗ್ಗದಂತೆ ಚರಂಡಿ ಕಾಮಗಾರಿ ನಡೆಸುವಂತೆ ಹಾಗೂ ಆಸ್ಪತ್ರೆಯ ಮುಂಭಾಗದ ರಸ್ತೆ ಸಮೀಪದ ಟ್ರಾನ್ಸ್‌ಫಾರ್ಮರನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಸಚಿವರು ಅಧಿಕಾರಿಗಳಿಗೆ ಸಲಹೆ ನೀಡಿದರು.

ಬಿಬಿಎಂಪಿ ಮುಖ್ಯ ಎಂಜಿನಿಯರ್ ಮೃತ್ಯುಂಜಯ, ಜಲಮಂಡಳಿಯ ಮುಖ್ಯ ಎಂಜಿನಿಯರ್ ಗಂಗಾಧರ್, ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ.ನಿರ್ಮಲಾ ಬುಗ್ಗಿ, ವಲಯ ಆರೋಗ್ಯಾಧಿಕಾರಿ ಡಾ.ಮನೋರಂಜನ್ ಹೆಗ್ಡೆ, ಡಾ.ಮಂಜುಳ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮುಖ್ಯ ಎಂಜಿನಿಯರ್ ಹುದ್ದೆಗೆ ಶಾಂತರಾಜಣ್ಣ ವರ್ಗ

ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿತೇ ಸರ್ಕಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆಗೊಂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಜಿನಿಯರಿಂಗ್ ಸದಸ್ಯ ಡಾ.ಎಚ್.ಆರ್.ಶಾಂತರಾಜಣ್ಣ ಅವರನ್ನು ಮತ್ತೆ ಅದೇ ಹುದ್ದೆಗೆ ಮರು ವರ್ಗಾವಣೆ ಮಾಡಬೇಕು ಎಂಬ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಧಿಕ್ಕರಿಸಿ ಸರ್ಕಾರವು ಅವರನ್ನು ಪ್ರಾಧಿಕಾರದಲ್ಲಿ ಹೊಸತಾಗಿ ಸೃಷ್ಟಿಸಲಾದ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗ ಮಾಡಿದೆ.

ಬಿಡಿಎ ಶಿವರಾಮ ಕಾರಂತ ಬಡಾವಣೆಯನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿಪಡಿಸುತ್ತಿದೆ. ಈ ಬಡಾವಣೆಯ ಕೆಲಸ ಕಾರ್ಯಗಳು ಪೂರ್ಣಗೊಳ್ಳುವವರೆಗೆ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ವರ್ಗ ಮಾಡಬಾರದು ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಹಾಗೂ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿದ್ದ ಪೀಠ ಆ.19ರಂದು ಆದೇಶ ಮಾಡಿತ್ತು. ಈ ಆದೇಶವನ್ನು ಧಿಕ್ಕರಿಸಿ ರಾಜ್ಯ ಸರ್ಕಾರವು 2021ರ ಆ 31ರಂದು ಶಾಂತರಾಜಣ್ಣ ಅವರನ್ನು ಗೋರೂರಿನ ಹೇಮಾವತಿ ಯೋಜನಾ ವಲಯಕ್ಕೆ ವರ್ಗ ಮಾಡಿ, ಅವರ ಸ್ಥಾನಕ್ಕೆ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗದ ಮುಖ್ಯ ಎಂಜಿನಿಯರ್ ವಿ.ಗೋವಿಂದರಾಜು ಅವರನ್ನು ನೇಮಿಸಿತ್ತು. ಇದಕ್ಕೆ ಸುಪ್ರೀಂ ಕೋರ್ಟ್‌ನ ಪೀಠವು ಅಸಮಾಧಾನ ವ್ಯಕ್ತಪಡಿಸಿತ್ತು.

‘ನಮ್ಮ ಆದೇಶವನ್ನು ಧಿಕ್ಕರಿಸಿ ಶಾಂತರಾಜಣ್ಣ ಅವರನ್ನು ಬೇರೆ ಇಲಾಖೆಗೆ ವರ್ಗ ಮಾಡಲಾಗಿದೆ. ಅವರನ್ನು ಬಿಡಿಎ ಎಂಜಿನಿಯರಿಂಗ್ ಸದಸ್ಯ ಹುದ್ದೆಗೆ ಮರು ವರ್ಗ ಮಾಡಬೇಕು’ ಎಂದು ಸುಪ್ರೀಂ ಕೋರ್ಟ್‌ನ ಪೀಠವು 2021ರ ಸೆ. 7ರಂದು ರಾಜ್ಯ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡಿತ್ತು. ಅವರನ್ನು ಅದೇ ಹುದ್ದೆಗೆ ಮರು ವರ್ಗ ಮಾಡುವ ಬದಲು ಸರ್ಕಾರ ಬಿಡಿಎನಲ್ಲಿ ಮುಖ್ಯ ಎಂಜಿನಿಯರ್ ವೃಂದ ಹೊಸ ಹುದ್ದೆಯನ್ನು ಸೃಷ್ಟಿಸಿತ್ತು.

ಈ ಕುರಿತು ಪ್ರತಿಕ್ರಿಯಿಸಿದ ನಿವೃತ್ತ ಮುಖ್ಯ ಎಂಜಿನಿಯರ್ ಒಬ್ಬರು, ‘ಸರ್ಕಾರದ ಈ ಕ್ರಮ ಸುಪ್ರೀಂ ಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆ. ರಾಜಕಾರಣಿಗಳಿಂದ ಎಷ್ಟೇ ಒತ್ತಡವಿದ್ದರೂ ಅಧಿಕಾರಿಗಳು ಇಂತಹ ಆದೇಶ ಜಾರಿಗೊಳಿಸುವ ಮುನ್ನ ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ತಿಳಿದುಕೊಳ್ಳಬೇಕಿತ್ತು. ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿ ಯೋಜನೆಯನ್ನು ರದ್ದುಪಡಿಸಲು ಪ್ರಭಾವಿಗಳು ಏನೇ ಪ್ರಯತ್ನ ಪಟ್ಟರೂ ಸುಪ್ರೀಂ ಕೋರ್ಟ್ ಅದಕ್ಕೆ ಸೊಪ್ಪು ಹಾಕಿಲ್ಲ. ಸರ್ಕಾರ ಪದೇ ಪದೇ ತನ್ನ ಆದೇಶ ಉಲ್ಲಂಘಿಸಿದರೆ ಸುಪ್ರೀಂ ಕೋರ್ಟ್ ಸುಮ್ಮನಿರುವ ಸಾಧ್ಯತೆ ಕಡಿಮೆ’ ಎಂದರು.

‘ಬಿಬಿಎಂಪಿ ಎಂಜಿನಿಯರ್ ಆಗಿದ್ದ ಪಿ. ಧನಂಜಯ ಅವರು ಬಡ್ತಿ ನೀಡದ್ದನ್ನು ಪ್ರಶ್ನಿಸಿ 1995ರಲ್ಲಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಈ ಕುರಿತು ಆದೇಶ ಹೊರಡಿಸಿದ್ದ ಸುಪ್ರೀಂ ಕೋರ್ಟ್, 3 ತಿಂಗಳ ಒಳಗೆ ಈ ಅಧಿಕಾರಿಗೆ ಬಡ್ತಿ ನೀಡುವಂತೆ ಆದೇಶಿಸಿತ್ತು. ಇದನ್ನು ಸರ್ಕಾರ ಪಾಲಿಸಿಲ್ಲ ಎಂದು ಧನಂಜಯ ಅವರು ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು. ಆಗ ಸುಪ್ರೀಂ ಕೋರ್ಟ್, ನಗರಾಭಿವೃದ್ಧಿ ಇಲಾಖೆಯ ಅಂದಿನ ಪ್ರಧಾನ ಕಾರ್ಯದರ್ಶಿ ಎಚ್. ವಾಸುದೇವನ್ ಅವರಿಗೆ ಒಂದು ದಿನ ಜೈಲು ಶಿಕ್ಷೆ ವಿಧಿಸಿತ್ತು’ ಎಂದು ಅವರು ನೆನಪಿಸಿಕೊಂಡರು.

‘ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಅಥವಾ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದರ್ಜೆಯ ಅನೇಕ ಅಧಿಕಾರಿಗಳು ಈಗಾಗಲೇ ನ್ಯಾಯಾಂಗ ನಿಂದನೆ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಕೋರ್ಟ್ ಆದೇಶಗಳನ್ನು ತಪ್ಪಾಗಿ ಅರ್ಥೈಸುವುದನ್ನು ತಪ್ಪಿಸಲು ಹಾಗೂ ನ್ಯಾಯಾಲಯಗಳ ಆದೇಶಗಳ ಪಾಲನೆಯ ಬಗ್ಗೆ ಮೇಲ್ವಿಚಾರಣೆ ವಹಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸುವಂತೆ ಸರ್ಕಾರ 2020ರ ಡಿ 17ರಂದು ಆದೇಶ ಮಾಡಿದೆ. ಆದರೂ ಪದೇ ಪದೇ ನ್ಯಾಯಾಲಯದ ಆದೇಶ ಉಲ್ಲಂಘನೆಗಳನ್ನು ನಡೆಯುತ್ತಲೇ ಇವೆ’ ಎಂದು ಇನ್ನೊಬ್ಬ ಅಧಿಕಾರಿ ಗಮನ ಸೆಳೆದರು.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 27ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

‘ಇಸ್ಕಾನ್ ಬಳಿಯ ಮಂತ್ರಿ ವಸತಿ ಸಮುಚ್ಚಯ, ತಲಘಟ್ಟಪುರ, ರಘುವನಹಳ್ಳಿ, ಗುಬ್ಬಾಳ, ಕುವೆಂಪುನಗರ, ವಿವಿ ನಗರ, ವಿವಿ ಬಡಾವಣೆ, ಬಾಲಾಜಿ ಲೇಔಟ್, ರಾಯಲ್ ಫಾರ್ಮ್, ಎಚ್‌ಎಸ್‌ಆರ್ ಬಡಾವಣೆಯ 7ನೇ ಸೆಕ್ಟರ್ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ’ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಐಎಸ್ ಮುಖಂಡನ ಹತ್ಯೆ: ಪಾಕ್ ಭದ್ರತಾಪಡೆ ಹೇಳಿಕೆ

ಕರಾಚಿ (ಪಿಟಿಐ): ಬಲೂಚಿಸ್ತಾನದ ಮಸ್ತುಂಗ್ ಜಿಲ್ಲೆಯಲ್ಲಿ ಭಾನುವಾರ ನಡೆದ ಕಾರ್ಯಾಚರಣೆಯಲ್ಲಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆಯ ಉನ್ನತ ನಾಯಕ ಮುಮ್ತಾಜ್ ಅಹ್ಮದ್ ಎಂಬಾತನನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನದ ಭಯೋತ್ಪಾದನಾ ನಿಗ್ರಹ ಪಡೆ ಅಧಿಕಾರಿ ತಿಳಿಸಿದ್ದಾರೆ.

ಈತನ ಸುಳಿವು ನೀಡಿದವರಿಗೆ 2 ಲಕ್ಷ ಪಾಕಿಸ್ತಾನಿ ರೂಪಾಯಿ ಬಹುಮಾನ ಘೋಷಿಲಾಗಿತ್ತು. ಈತ 2018ರಲ್ಲಿ ಚುನಾವಣಾ ರ್‍ಯಾಲಿಯೊಂದರ ಮೇಲೆ ನಡೆದ ಆತ್ಮಹತ್ಯಾ ದಾಳಿ ಸೂತ್ರಧಾರಿ ಎಂದು ಹೇಳಲಾಗಿತ್ತು. ಈ ದಾಳಿಯಲ್ಲಿ 128 ಜನರು ಮೃತಪಟ್ಟು, 200ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

‘ವಿಶೇಷ ಮಕ್ಕಳ’ನ್ನು ಕಾಯಿಸಿದ ಸಿ.ಎಂ!

ಬೆಳಗಾವಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಶೇಷ, ಅಂಗವಿಕಲ ಮಕ್ಕಳು ಮತ್ತು ಅವರ ಪೋಷಕರನ್ನು ಎರಡು ತಾಸಿಗೂ ಹೆಚ್ಚು ಸಮಯ ಕಾಯಿಸಿದರು.

ಇಲ್ಲಿನ ಮಹಾತ್ಮಪುಲೆ ಉದ್ಯಾನದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ವಿಶೇಷ ಮಕ್ಕಳಿಗೆಂದು ಅಭಿವೃದ್ಧಿಪಡಿಸಿರುವ ಪ್ರತ್ಯೇಕ ಉದ್ಯಾನದ ಉದ್ಘಾಟನೆಯನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು. ಸಂಘಟಕರು ಕೆಲವು ವಿಶೇಷ ಮಕ್ಕಳು ಮತ್ತು ಪೋಷಕರನ್ನು ಆಹ್ವಾನಿಸಿದ್ದರು. ಆದರೆ, ತಡವಾಗಿ ಬಂದ ಮುಖ್ಯಮಂತ್ರಿ ಕೆಲವೇ ನಿಮಿಷಗಳಲ್ಲಿ ಉದ್ಘಾಟನೆ ನೆರವೇರಿಸಿದರು. ಕೆಲ ಮಕ್ಕಳ ತಲೆನೇವರಿಸಿ, ಕೈಕೊಟ್ಟು ಮಾತನಾಡಿದರು. ತರಾತುರಿಯಲ್ಲಿ ತೆರಳಿದರು.

ಸಾಧಕರಿಗೆ ಗೌರವ

ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ‘ಐಎಎಸ್ ಬಾಬಾ’ ಸಂಸ್ಥೆಯ ಅಭ್ಯರ್ಥಿಗಳಾದ ನಾಗರಗೋಜೆ ಶುಭಂ, ಅನಿರುದ್ಧ ಜೆ., ಮಾಲಾಶ್ರೀ ಎಂ.ವಿ, ಬಿಂದುಮಣಿ ಹಾಗೂ ಅಮೃತ ಎಚ್.ವಿ ಅವರನ್ನು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್ ಕುಮಾರ್ ಎಸ್. ಗೌರವಿಸಿದರು

ಪಾತಾಳಕ್ಕಿಳಿದ ಧಾರಣೆಯಿಂದ ರೈತ ಕಂಗಾಲು

50 ಪ್ಯಾಕೆಟ್ ಈರುಳ್ಳಿ ಕೆರೆಗೆ ಸುರಿದ ರೈತ

ಪ್ರಜಾವಾಣಿ ವಾರ್ತೆ



ಹೊಸದುರ್ಗ ತಾಲ್ಲೂಕಿನ ಬಾಗೂರು ಗ್ರಾಮದ ರೈತ ಮಾರುತಿ ಅವರು ತಾವು ಬೆಳೆದಿದ್ದ ಈರುಳ್ಳಿಯನ್ನು ಭಾನುವಾರ ಕೆರೆಗೆ ಸುರಿದರು

ಬಾಗೂರು(ಹೊಸದುರ್ಗ): ಮಾರುಕಟ್ಟೆಯಲ್ಲಿ ಈರುಳ್ಳಿ ಧಾರಣೆ ಪಾತಾಳಕ್ಕಿಳಿದಿರುವುದರಿಂದ ಕಂಗೆಟ್ಟ ತಾಲ್ಲೂಕಿನ ಬಾಗೂರು ಗ್ರಾಮದ ರೈತ ಮಾರುತಿ 60 ಕೆ.ಜಿ. ತೂಕದ 50 ಪ್ಯಾಕೆಟ್ ಈರುಳ್ಳಿಯನ್ನು ಭಾನುವಾರ ಕೆರೆಗೆ ಸುರಿದ್ದಾರೆ.

40 ವರ್ಷಗಳಿಂದಲೂ ಈರುಳ್ಳಿ ಬೆಳೆಯುತ್ತಿದ್ದು, ಎರಡು ವರ್ಷ ಉತ್ತಮ ಆದಾಯ ಗಳಿಸಿದ್ದರು. ಈ ಬಾರಿಯೂ ಉತ್ತಮ ಧಾರಣೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಎರಡೂವರೆ ಎಕರೆ ಎರೆ ಜಮೀನಿನಲ್ಲಿ ₹1.20 ಲಕ್ಷ ಖರ್ಚು ಮಾಡಿ ಈರುಳ್ಳಿ ಬೆಳೆದಿದ್ದರು. ಬೆಳೆ ಉತ್ತಮವಾಗಿಯೇ ಬಂದಿತ್ತು.

ಈ ಬಾರಿ ಸುಮಾರು ಒಂದೂವರೆ ತಿಂಗಳ ಕಾಲ ಮೋಡಕವಿದ ವಾತಾವರಣ ಇದ್ದಿದ್ದರಿಂದ ಬೆಳೆಯು ನುಲ್ಲೆ ರೋಗ, ಮಜ್ಜಿಗೆ ರೋಗ ಹಾಗೂ ಕೊಳೆ ರೋಗ ಬಾಧೆಗೆ ತುತ್ತಾಗಿತ್ತು. ಸಾವಿರಾರು ರೂಪಾಯಿ ಖರ್ಚು ಮಾಡಿ ಔಷಧ ಸಿಂಪಡಿಸಿ ಬೆಳೆ ಉಳಿಸಿಕೊಂಡಿದ್ದರು. ಕಟಾವಿಗೆ ಬಂದಿದ್ದ ಈರುಳ್ಳಿಯನ್ನು ಕಾರ್ಮಿಕರಿಗೆ ಕೂಲಿ ಕೊಟ್ಟು ಕೀಳಿಸಿದ್ದರು. ಕಿತ್ತಾಗ ಈರುಳ್ಳಿ ಚೆನ್ನಾಗಿಯೇ ಕಾಣಿಸುತ್ತಿತ್ತು.

ಕೀಳಿಸಿದ್ದ ಈರುಳ್ಳಿಯಲ್ಲಿ 2 ಟ್ರ್ಯಾಕ್ಟರ್ ಲೋಡ್ ಮಾತ್ರ ಮನೆಯ ಹತ್ತಿರ ಏರಿಸಿಕೊಂಡು ಬಂದಿದ್ದರು. ಖಾಲಿ ಚೀಲ ತಂದು ಕಾರ್ಮಿಕರ ಸಹಾಯದಿಂದ ಕೊಯ್ಯಿಸಿ 60 ಕೆ.ಜಿ. ತೂಕದ 100 ಪ್ಯಾಕೆಟ್ ಸಿದ್ಧಪಡಿಸಿದ್ದರು. ಆದರೆ, ಮಾರುಕಟ್ಟೆಯಲ್ಲಿ ದರ ಕುಸಿತವಾಗಿತ್ತು.

> **ಈ ಬಾರಿ ತಾಲ್ಲೂಕಿನ ಈರುಳ್ಳಿ ಬೆಳೆಗಾರರು ರೋಗಬಾಧೆ, ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ತುರ್ತಾಗಿ ಸರ್ಕಾರ ಪರಿಹಾರ ನೀಡಬೇಕು**
>
> **ಮಾರುತಿ,** ಈರುಳ್ಳಿ ಬೆಳೆಗಾರ, ಬಾಗೂರು

‘ಮಾರುಕಟ್ಟೆಯಲ್ಲಿ ಒಂದು ಪಾಕೆಟ್ ಗುಣಮಟ್ಟದ ಈರುಳ್ಳಿಗೆ ₹300ರಿಂದ ₹500ರವರೆಗೆ ಸಿಗುತ್ತದೆ. ಈ ದರಕ್ಕೆ ಈರುಳ್ಳಿ ಮಾರಾಟ ಮಾಡಿದರೆ ಬೆಳೆ ಬೆಳೆಯಲು ಖರ್ಚು ಮಾಡಿರುವ ಹಣವೂ ಸಿಗುವುದಿಲ್ಲ. ಮಾರುಕಟ್ಟೆಗೆ ಹೋಗಿ ಮಾರಾಟ ಮಾಡುವ ಹೊತ್ತಿಗೆ 1 ಪ್ಯಾಕೆಟ್ ಈರುಳ್ಳಿಗೆ ₹ 500 ಹೆಚ್ಚು ಖರ್ಚಾಗುತ್ತದೆ. ಇಂದಲ್ಲ ನಾಳೆ ಉತ್ತಮ ದರ ಸಿಗಬಹುದು ಎಂದು ಕಾಯುತ್ತಿದ್ದೆ. ಆದರೆ ಬೆಲೆ ಸಿಗಲಿಲ್ಲ’ ಎಂದು ರೈತ ಮಾರುತಿ ಅಳಲು ತೋಡಿಕೊಂಡರು.

ಮಾರುಕಟ್ಟೆಗೆ ಕೊಂಡೊಯ್ಯಲು ಸಿದ್ಧ ಇಟ್ಟಿದ್ದ 100 ಪ್ಯಾಕೆಟ್ ಈರುಳ್ಳಿಯಲ್ಲಿ ಒಂದು ವಾರದ ವೇಳೆಗೆ 50 ಪ್ಯಾಕೆಟ್ ಕೊಳೆತು ನಾರುತ್ತಿತ್ತು. ಗಬ್ಬು ವಾಸನೆ ತಾಳಲಾರದೇ ಮನನೊಂದು ಕೆರೆಯ ಅಂಗಳಕ್ಕೆ ಸುರಿಯುತ್ತಿದ್ದೇನೆ. ಇನ್ನೊಂದು ವಾರಕ್ಕೆ ಮನೆ ಬಳಿ ಇರುವ 50 ಪ್ಯಾಕೆಟ್ ಈರುಳ್ಳಿ ಏನಾಗುತ್ತೋ ಗೊತ್ತಿಲ್ಲ. ಈ ವರ್ಷ ಒಂದು ಪ್ಯಾಕೆಟ್ ಈರುಳ್ಳಿಯನ್ನೂ ಮಾರಾಟ ಮಾಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಮಾರುಕಟ್ಟೆಯಲ್ಲಿ ಹೂ ಚೆಲ್ಲಿದ ರೈತರು

ಚಿಕ್ಕಬಳ್ಳಾಪುರ: ಬೆಲೆ ಇಲ್ಲದೆ ಕಂಗಾಲಾಗಿರುವ ಬೆಳೆಗಾರರು ಮಾರಾಟಕ್ಕೆ ತಂದ ಹೂಗಳನ್ನು ಮಾರುಕಟ್ಟೆಯಲ್ಲಿಯೇ ಎಸೆಯುತ್ತಿದ್ದಾರೆ. ತೀವ್ರ ಬೆಲೆ ಕುಸಿತದಿಂದ ಗುಲಾಬಿ, ಸೇವಂತಿಗೆ ಮತ್ತು ಚೆಂಡು ಹೂ ಬೆಳೆಗಾರರು ತತ್ತರಿಸಿದ್ದಾರೆ. ಒಂದು ಕೆ.ಜಿ ಹೂ ಬೆಲೆ ಕನಿಷ್ಠ ₹ 5ಕ್ಕೆ ಇಳಿದಿದೆ.

ನಿತ್ಯ ಬಾರಿ ಪ್ರಮಾಣದಲ್ಲಿ ಮಾರುಕಟ್ಟೆಗೆ ಹೂ ಬರುತ್ತಿದೆ. ಆದರೆ ಖರೀದಿಗೆ ವ್ಯಾಪಾರಿಗಳು ಮುಂದಾಗುತ್ತಿಲ್ಲ. ಕೆಲವು ರೈತರು ಗೊಬ್ಬರದ ಗುಂಡಿಗೆ ಹೂಗಳನ್ನು ಎಸೆಯುತ್ತಿದ್ದಾರೆ. ಚಿಕ್ಕಬಳ್ಳಾಪುರದ ಕೆ.ವಿ.ಕ್ಯಾಂಪಸ್ ಬಳಿಯ ಹೂವಿನ ತಾತ್ಕಾಲಿಕ ಮಾರುಕಟ್ಟೆಗೆ ಕಾಲಿಟ್ಟರೆ ರೈತರು ರಾಶಿ ರಾಶಿ ಹೂಗಳನ್ನು ಎಸೆದಿರುವುದು ಕಂಡು ಬರುತ್ತದೆ.

ಜೆಡಿಎಸ್‌ನವರು ಅಧಿಕಾರಕ್ಕೆ ಬರುವ ಗಿರಾಕಿಗಳಲ್ಲ: ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆಡಿಎಸ್‌ನವರು ಅಧಿಕಾರಕ್ಕೆ ಬರುವ ಗಿರಾಕಿಗಳಲ್ಲ. 30 ಸೀಟ್‌ನಲ್ಲೇ ಸಿಕ್ಕ ಸಿಕ್ಕವರ ಜೊತೆ ಹೋಗುವವರು, ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದಿಲ್ಲ’ ಎಂದು ಜೆಡಿಎಸ್ ವಿರುದ್ಧ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ

ಹೆಬ್ಬಾಳ ವಿಧಾನಸಭೆ ಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ದಿನಸಿ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾವು (ಕಾಂಗ್ರೆಸ್) ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತೇವೆ. ಏಳು ಕೆಜಿಯಲ್ಲ. ಹತ್ತು ಕೆಜಿ ಅಕ್ಕಿ ಉಚಿತವಾಗಿ ಕೊಡುತ್ತೇವೆ. ಮತ್ತೆ ಇಂದಿರಾ ಕ್ಯಾಂಟೀನ್ ಆರಂಭಿಸುತ್ತೇವೆ’ ಎಂದರು.

‘ನಾನು ಏಳು ಕೆಜಿ ಅಕ್ಕಿ ಉಚಿತವಾಗಿ ಕೊಟ್ಟಿದ್ದೆ. ಕುಮಾರಸ್ವಾಮಿ ಕೊಟ್ಟಿದ್ರಾ, ಯಡಿಯೂರಪ್ಪ ಕೊಟ್ಟಿದ್ರಾ, ಈಗ ಬೊಮ್ಮಾಯಿ ಕೊಡುತ್ತಿದ್ದಾರಾ? ಈಗ ಕಡಿಮೆ ಅಕ್ಕಿ ಕೊಡುತ್ತಿದ್ದಾರೆ. ಇವರೇನು ಇವರಪ್ಪನ ಮನೆಯಿಂದ ಕೊಡುತ್ತಾರಾ. ಬಡವರಿಗೆ ಅಕ್ಕಿ ಕೊಡಲು ಯಾಕೆ ಹೊಟ್ಟೆ ಉರಿ. ನಾನೇನು ನಮ್ಮಪ್ಪನ ಮನೆಯಿಂದ ಕೊಟಿದ್ದೀನಾ? ಯಡಿಯೂರಪ್ಪ ರಾಜಾಹುಲಿಯಂತೆ. ಅತ್ಯುತ್ತಮ ಶಾಸಕನಂತೆ. ಯಾಕೆ ಇಂದಿರಾ ಕ್ಯಾಂಟೀನ್ ಮುಚ್ಚಿದ್ದಕ್ಕಾ? ಯಡಿಯೂರಪ್ಪ ಎರಡು ವರ್ಷ ಮುಖ್ಯಮಂತ್ರಿ ಆಗಿದ್ದರು. ಲೂಟಿ ಹೊಡೆಯುವುದು ಬಿಟ್ಟರೆ ಬೇರೆ ಏನೂ ಮಾಡಿಲ್ಲ’ ಎಂದು ಅವರು ಕಿಡಿಕಾರಿದರು.

‘ಸಿದ್ದರಾಮಯ್ಯ ಪರಾವಲಂಬಿ ಸಸ್ಯ’



‘ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ’ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಜೆಡಿಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಯಾರೋ ಕಟ್ಟಿದ ಹುತ್ತಕ್ಕೆ ಹೊಕ್ಕು ರಾಜಕೀಯದ ಮರುಹುಟ್ಟು ಪಡೆದು ಉಂಡ ಮನೆಗೆ ಕನ್ನ ಕೊರೆಯುವ ಗುಣ ಯಾರದ್ದು ಎಂಬುದನ್ನು ಜನ ಬಲ್ಲರು. ಪರಾವಲಂಬಿ ರಾಜಕಾರಣ ಅವರ ನೈಜಗುಣ. ನೇರ ರಾಜಕಾರಣ ಅವರ ರಕ್ತದಲ್ಲೇ ಇಲ್ಲ. ಜೆಡಿಎಸ್ ಅನ್ನ-ಗೊಬ್ಬರದಿಂದ ಬೆಳೆದ ಸಿದ್ದರಾಮಯ್ಯ, ಈಗ ಅದೇ ಬಲದಿಂದ ಕಾಂಗ್ರೆಸ್ ಪಕ್ಷವನ್ನೇ ನುಂಗುತ್ತಿದ್ದಾರೆ. ಆ ಪಕ್ಷದ ದಿಗ್ಗಜ ನಾಯಕರನ್ನೇ ಬಲಿ ತೆಗೆದುಕೊಳ್ಳುತ್ತಿದ್ದಾರೆ’ ಎಂದಿದ್ದಾರೆ.

'ಜೆಡಿಎಸ್ ಅವರಿವರ ಜತೆ ಹೋಗುವ ಪಕ್ಷ ಎಂದು ಸಿದ್ದರಾಮಯ್ಯ ಹೇಳಿರುವುದು ಅವರ ರಾಜಕೀಯ ಪ್ರಜ್ಞೆಯ ದಿವಾಳಿತನವಷ್ಟೆ. 2018ರಲ್ಲಿ ದೇವೇಗೌಡರ ಮನೆ ಬಾಗಿಲಿಗೆ ಬಂದವರು ಯಾರು’ ನನ್ನನ್ನು ಮುಖ್ಯಮಂತ್ರಿ ಮಾಡಿ ಕೊನೆಗೆ ಕೈಕೊಟ್ಟು ಆ ಸರ್ಕಾರದ ಪತನಕ್ಕೆ ಕಾರಣಪುರುಷರು ಯಾರು? ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ’ ಎಂದಿದ್ದಾರೆ.

‘ಎಚ್.ಡಿ.ದೇವೇಗೌಡರನ್ನು ಪ್ರಧಾನಿ ಮಾಡಿ, ಅವರಿಗೆ ಕೈಕೊಟ್ಟವರು ಯಾರು ಎಂಬುದು ಜನರಿಗೆ ಗೊತ್ತಿದೆ. ಸಿದ್ದರಾಮಯ್ಯನವರೇ ಸುಮ್ಮನೆ ನಮ್ಮನ್ನು ಕೆಣಕಬೇಡಿ. ಜೆಡಿಎಸ್ ಚಿಕ್ಕ ಪಕ್ಷವಿರಬಹುದು, ಅದರ ಶಕ್ತಿಯನ್ನು ಕಡೆಗಣಿಸಬೇಡಿ. ಕರ್ನಾಟಕ ರಾಜಕಾರಣದಲ್ಲಿ ಪರಾವಲಂಬಿ ಸಸ್ಯ ನೀವು. ಪಕ್ಷಗಳನ್ನು ಒಡೆಯುವ ನಿಮ್ಮ ‘ಸಿದ್ದಕಲೆ ರಾಜ್ಯಕ್ಕೆ ಹೊಸತೇನಲ್ಲ‘ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಜಾತಿ ಸಮೀಕ್ಷೆ ಹೇಳಿಕೆ ಪ್ರಚಾರಕ್ಕೆ ಸೀಮಿತ’

ರಾಮನಗರ: ‘ಜಾತಿ ಸಮೀಕ್ಷೆ ಬಗ್ಗೆ ಸದನದಲ್ಲಿ ಮಾತನಾಡುವುದನ್ನು ಬಿಟ್ಟು ಬೀದಿಯಲ್ಲಿ ಮಾತನಾಡುವುದು ಅವರ ಇಬ್ಬಗೆಯ ನೀತಿಯನ್ನು ತೋರಿಸುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ಬಿಡದಿಯಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಹತ್ತು ದಿನಗಳ ಕಾಲ ಸದನ ನಡೆದಿತ್ತು. ಸದನದಲ್ಲಿ ನಿಯಮ 69ರಲ್ಲಿ ಈ ವಿಚಾರವನ್ನು ಚರ್ಚೆಗೆ ತರಬಹುದಿತ್ತು. ಈ ಮೂಲಕ ರಾಜ್ಯದ ಜನತೆ ಮುಂದೆ ಸತ್ಯ ತೆರೆದಿಡಬಹುದಿತ್ತು. ಆದರೆ ಅವರಿಗೆ ಅದರ ಅವಶ್ಯಕತೆ ಇಲ್ಲ. ಜಾತಿ ಸಮೀಕ್ಷೆ ಕೇವಲ ಪ್ರಚಾರಕ್ಕೆ ಬೇಕಿದೆ’ ಎಂದರು.

‘ಸಿದ್ಧಕಲೆ’ಗೆ ಕೊನೆ ಹಾಡಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇವಲ ಚುನಾವಣೆಯಲ್ಲಿ ಮತ ಪಡೆಯುವ ದುರುದ್ದೇಶದಿಂದ ನೀವು ಜನರು ತಿನ್ನುವ ಅನ್ನದಲ್ಲೂ ರಾಜಕೀಯ ಮಾಡುತ್ತಿದ್ದೀರಿ. ಸುಳ್ಳಿನ ಶೂರ ಸಿದ್ದರಾಮಯ್ಯವರೇ, ಇನ್ನಾದರೂ ನಿಮ್ಮ ಸುಳ್ಳಿನ ‘ಸಿದ್ಧಕಲೆ’ಗೆ ಕೊನೆ ಹಾಡಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ಅಕ್ಕಿಭಾಗ್ಯದ ಅಸಲಿಯತ್ತು ಏನು ಎಂಬುದನ್ನು ಈಗಾಗಲೇ ಸದನದಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟಿದ್ದೇನೆ. ಅದಾದ ಮೇಲೂ ನಿಮ್ಮ ‘ಸುಳ್ಳಿನ ಜಪ’ ಮುಂದುವರಿದಿದೆ. ಸತ್ಯ ಹೇಳಲು ಹಿಂಜರಿಕೆ- ಅಧೈರ್ಯ ಏಕೆ. ಸುಳ್ಳಿನ ಮೇಲಿರುವಷ್ಟು ನಿಷ್ಠೆ ಸತ್ಯದ ಮೇಲೆ ಯಾಕಿಲ್ಲ. 5 ಕೆಜಿ ಅಕ್ಕಿ ಅಸಲಿಯತ್ತು ಬಗ್ಗೆ ಹೇಳಲು ಅಂಜಿಕೆ ಏಕೆ’ ಎಂದು ಪ್ರಶ್ನಿಸಿದ್ದಾರೆ.

‘ಸಮ್ಮಿಶ್ರ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದೆ. ಅದಕ್ಕೆ ಮುನ್ನ ಬಜೆಟ್ ಮಂಡಿಸಿ ಚುನಾವಣೆಗೆ ಹೋದ ತಾವು ಎಷ್ಟು ಕೆಜಿ ಅಕ್ಕಿಗೆ ಹಣ ಇಟ್ಟಿದ್ದಿರಿ. ಐದು ಕೆಜಿಗೋ ಅಥವಾ ಏಳು ಕೆಜಿಗೋ. ಸತ್ಯವನ್ನು ಕಕ್ಕಲು ಕಷ್ಟವೇಕೆ. ನಾಲಗೆ ತಡವರಿಸುತ್ತಿದೆಯೇ’ ಎಂದು ತಿರುಗೇಟು ನೀಡಿದ್ದಾರೆ.

‘ಸುಳ್ಳಿನ ಸರಮಾಲೆ ಪೋಣಿಸುವ ಎಚ್‌ಡಿಕೆ’

ದೇವನಹಳ್ಳಿ: ‘ನಾನು ಮುಖ್ಯಮಂತ್ರಿಯಾಗಿದ್ದಾಗ 7ಕೆ.ಜಿ ಅಕ್ಕಿ ಕೊಟ್ಟಿದ್ದೇನೆ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದು 2018ರಲ್ಲಿ ಜೆಡಿಎಸ್ ಸರ್ಕಾರದಿಂದ ಅಲ್ಲ. ಕಾಂಗ್ರೆಸ್‌ನ 80 ಶಾಸಕರ ಬೆಂಬಲದಿಂದ. ಅವರು ಸುಳ್ಳಿನ ಸರಮಾಲೆ ಪೋಣಿಸುತ್ತಿದ್ದಾರೆ. ಸುಳ್ಳು ಬಿಟ್ಟು ಬೇರೇನೂ ಹೇಳೋದಿಲ್ಲ’ ಎಂದು ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಭಾನುವಾರ ಕಾಂಗ್ರೆಸ್ ಆಯೋಜಿಸಿದ್ದ’ಗಾಂಧಿ ನಡಿಗೆ’ ಕಾರ್ಯಕ್ರಮ ನಂತರ, ಸಿದ್ದರಾಮಯ್ಯ ಬಡವರಿಗೆ ಅಕ್ಕಿ ಕೊಡಲಿಲ್ಲ ಎಂಬ ಕುಮಾರಸ್ವಾಮಿ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಅವರು, ’2013ರಿಂದ 2018ರವರೆಗೂ ಮೊದಲ ಒಂದು ವರ್ಷ ಕೆಜಿಗೆ ₹1ರಂತೆ ನಂತರ, ಎರಡು ವರ್ಷ ಉಚಿತವಾಗಿ ಅಕ್ಕಿ ಕೊಟ್ಟೆ. ಮತ್ತೆ ಎರಡು ವರ್ಷ ತಲಾ 7ಕೆ.ಜಿಯಂತೆ ಅಕ್ಕಿ ಕೊಟ್ಟಿದ್ದೇನೆ’ ಎಂದರು.

ಟೈರ್ ಸ್ಫೋಟ: ಅಜ್ಜ–ಮೊಮ್ಮಗ ಸಾವು

ಬೆಂಗಳೂರು: ದಾಬಸ್‌ಪೇಟೆ ಬಳಿಯ ಮೇಲ್ಸೇತುವೆಯಲ್ಲಿ ಭಾನುವಾರ ಟಾಟಾ ಸುಮೊ ವಾಹನದ ಟೈರ್ ಸ್ಫೋಟಗೊಂಡು ಅಪಘಾತ ಸಂಭವಿಸಿದ್ದು, ಮೊಹಮ್ಮದ್ ಸಾಬ್ (65) ಹಾಗೂ ಅವರ ಮೊಮ್ಮಗ ಯೂಸೂಫ್ (7) ಮೃತಪಟ್ಟಿದ್ದಾರೆ.

ಟಾಟಾ ಸುಮೊದಲ್ಲಿದ್ದ 13 ಮಂದಿ ತೀವ್ರ ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಮೊಹಮ್ಮದ್ ಸಾಬ್ ಅವರು ಕುಟುಂಬಸ್ಥರು ಹಾಗೂ ಪರಿಚಯಸ್ಥರ ಜೊತೆ ಕಾರ್ಯಕ್ರಮ ನಿಮಿತ್ತ ಬೆಂಗಳೂರಿನಿಂದ ಕೊಪ್ಪಳಕ್ಕೆ ತೆರಳುತ್ತಿದ್ದರು. ನೆಲಮಂಗಲ ಸಂಚಾರ ಠಾಣೆ ವ್ಯಾಪ್ತಿಗೆ ಬರುವ ದಾಬಸ್‌ಪೇಟೆಯ ಮೇಲ್ಸೇತುವೆ ಬಳಿ ವಾಹನದ ಟೈರ್ ಏಕಾಏಕಿ ಸ್ಫೋಟಗೊಂಡು, ವಾಹನ ಉರುಳಿಬಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಂಡ್ಯ: 290 ಕ್ವಿಂಟಲ್ ಅನ್ನಭಾಗ್ಯ ಅಕ್ಕಿ ಜಪ್ತಿ

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಉಮ್ಮಡಹಳ್ಳಿ ಗೇಟ್ ಬಳಿ ನಿಂತಿದ್ದ ಲಾರಿಯಲ್ಲಿ ಶನಿವಾರ ರಾತ್ರಿ 250 ಕ್ವಿಂಟಲ್ ಅನ್ನಬಾಗ್ಯ ಅಕ್ಕಿ ಪತ್ತೆಯಾಗಿದೆ. ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಭಾನುವಾರ ಬೆಳಿಗ್ಗೆ ಲಾರಿ ಹಾಗೂ ಅಕ್ಕಿ ವಶಕ್ಕೆ ಪಡೆದಿದ್ದಾರೆ.

ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಕ್ಕಿ ಚೀಲ ತುಂಬಿದ 12 ಚಕ್ರದ ಲಾರಿ ನಿಂತಿದ್ದ ಬಗ್ಗೆ ಸ್ಥಳೀಯರು ಪೊಲೀಸರಿಗೆ ಶನಿವಾರ ರಾತ್ರಿ ಮಾಹಿತಿ ನೀಡಿದ್ದರು. ಮಾಹಿತಿ ಆಧರಿಸಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳ ತಂಡದೊಂದಿಗೆ ಬಂದ ಪೊಲೀಸರು ಲಾರಿ ಜಪ್ತಿ ಮಾಡಿದ್ದಾರೆ. ಬೆಂಗಳೂರು ನಗರ ಜಿಲ್ಲೆಗೆ ಪಡಿತರ ಅಕ್ಕಿ ಕೊಂಡೊಯ್ಯಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಸ್ಥಳಕ್ಕೆ ಭೇಟಿ ನೀಡಿದಾಗ ಲಾರಿಯ ಮೊದಲನೇ ಸಾಲಿನಲ್ಲಿದ್ದ ಸುಮಾರು 15 ಅಕ್ಕಿ ಚೀಲ ಕಣ್ಮರೆಯಾಗಿರುವುದನ್ನು ಪೊಲೀಸರು ಪತ್ತೆಹಚ್ಚಿದ್ದು ಅದರ ಬಗ್ಗೆಯೂ ತನಿಖೆ ನಡೆಯುತ್ತಿದೆ. ಆಹಾರ ಮತ್ತು ನಾಗರಿಕ ಇಲಾಖೆ ಉಪ ನಿರ್ದೇಶಕಿ ಸೌಮ್ಯ ದೂರು ನೀಡಿದ್ದು ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ರೈಸ್‌ಮಿಲ್ ಮೇಲೆ ದಾಳಿ: ಘಟನೆಯ ನಂತರ ಭಾನುವಾರ ಆಹಾರ ಇಲಾಖೆ ಅಧಿಕಾರಿಗಳು ಹಲವು ರೈಸ್‌ಮಿಲ್‌ಗಳ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಗಾಣಧಾಳು ಗ್ರಾಮದ ಪರಮೇಶ್ವರ ರೈಸ್‌ಮಿಲ್‌ನಲ್ಲಿ 40 ಕ್ವಿಂಟಲ್ ಅನ್ನಭಾಗ್ಯ ಅಕ್ಕಿ ಪತ್ತೆಯಾಗಿದೆ. ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು ಮಿಲ್ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ.



ಕೋವಿಡ್: ಸಕ್ರಿಯ ಪ್ರಕರಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, 13,213 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಹೊಸದಾಗಿ 775 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಾದವರ ಒಟ್ಟು ಸಂಖ್ಯೆ 29.73 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.40 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.54 ರಷ್ಟು ವರದಿಯಾಗಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿಯಲ್ಲಿದೆ. ಚಿಕ್ಕಬಳ್ಳಾಪುರ, ಹಾವೇರಿ, ಕಲಬುರ್ಗಿ, ಕೊಪ್ಪಳ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 99, ಮೈಸೂರಿನಲ್ಲಿ 81 ಹಾಗೂ ಕೊಡಗಿನಲ್ಲಿ 55 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 255 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 860 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.22 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 9 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 7 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 3, ಬೆಳಗಾವಿ, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು ಹಾಗೂ ಶಿವಮೊಗ್ಗದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣದರವು ಶೇ 1.16 ರಷ್ಟು ವರದಿಯಾಗಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37,726ಕ್ಕೆ ಏರಿಕೆಯಾಗಿದೆ.



ಡೆಂಗಿ: ಪ್ರಕರಣ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಜ್ವರಕ್ಕೆ ಒಳಪಡುವವರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಕಳೆದ ಒಂದು ವಾರದ ಅವಧಿಯಲ್ಲಿ 291 ಡೆಂಗಿ ಪ್ರಕರಣಗಳು ದೃಢಪಟ್ಟಿವೆ.

ಈ ವರ್ಷ ಮೊದಲ ಆರು ತಿಂಗಳ ಅವಧಿಯಲ್ಲಿ ಡೆಂಗಿ ನಿಯಂತ್ರಣದಲ್ಲಿತ್ತು. ಮುಂಗಾರು ಮಳೆ ಚುರುಕುಗೊಂಡ ಬಳಿಕ ಈ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 3,386ಕ್ಕೆ ಏರಿಕೆಯಾಗಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಈ ವರ್ಷ ರಾಜ್ಯದಲ್ಲಿ ಯಾವುದೇ ಡೆಂಗಿ ಮರಣ ಪ್ರಕರಣ ವರದಿಯಾಗಿಲ್ಲ.

ಈ ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ ಅತೀ ಹೆಚ್ಚು ಪ್ರಕರಣಗಳು ದೃಢಪಟ್ಟಿದ್ದು, 575 ಮಂದಿ ಡೆಂಗಿ ಜ್ವರ ಎದುರಿಸಿದ್ದಾರೆ.

27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ: ರಾಜ್ಯದಲ್ಲಿ ಈವರೆಗೆ 1,117 ಚಿಕೂನ್‌ಗುನ್ಯಾ ಪ್ರಕರಣಗಳು ದೃಢಪಟ್ಟಿವೆ. ಉತ್ತರ ಕನ್ನಡ, ರಾಯಚೂರು ಹಾಗೂ ದಕ್ಷಿಣ ಕನ್ನಡ ಬಿಟ್ಟು ಉಳಿದ ಎಲ್ಲ ಜಿಲ್ಲೆಗಳಲ್ಲಿಯೂ ಪ್ರಕರಣಗಳು ಖಚಿತಪಟ್ಟಿವೆ. ವಾರದಲ್ಲಿ 110 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ.

ಕಡಿಮೆ ದರದ ನಿವೇಶನ: ಕೇಂದ್ರಕ್ಕೆ ಮನವಿ

ಸಹಕಾರಿ ವಸತಿ ಮಹಾಮಂಡಳಿ ಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಎಸ್‌.ಟಿ. ಸೋಮಶೇಖರ್

ನವದೆಹಲಿ: ಬಡ ಜನರು ಕಡಿಮೆ ದರದಲ್ಲಿ ನಿವೇಶನ ಖರೀದಿಸಲು ಅನುಕೂಲವಾಗುವಂತೆ ಸುಲಭ ನೀತಿ ರೂಪಿಸಲು ಕೇಂದ್ರ ಸರ್ಕಾರ ಗಮನಹರಿಸಬೇಕು ಎಂದು ಸಹಕಾರ ಸಚಿವ, ರಾಷ್ಟ್ರೀಯ ಸಹಕಾರಿ ವಸತಿ ಮಹಾಮಂಡಳಿ ನಿರ್ದೇಶಕ ಎಸ್‌.ಟಿ. ಸೋಮಶೇಖರ್ ಮನವಿ ಮಾಡಿದರು.

ಭಾನುವಾರ ಇಲ್ಲಿ ನಡೆದ ರಾಷ್ಟ್ರೀಯ ಸಹಕಾರಿ ವಸತಿ ಮಹಾಮಂಡಳಿ ವಾರ್ಷಿಕ ಸಭೆಯಲ್ಲಿ ಅವರು ಮಾತನಾಡಿದರು.

ಬಡವರಿಗೆ ನಿವೇಶನ ಹಂಚಿಕೆ ಮಾಡಲು ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲವು ಅಡಚಣೆಗಳಿವೆ. ಅವುಗಳನ್ನು ನಿವಾರಿಸುವಂತೆ ಕೇಂದ್ರದ ಸಹಕಾರ ಸಚಿವ ಅಮಿತ್ ಶಾ ಅವರಿಗೆ ಮನವರಿಕೆ ಮಾಡುವ ಅಗತ್ಯವಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಸಹಕಾರಿ ವಸತಿ ಮಹಾಮಂಡಳಿಯ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಜನವರಿಯಲ್ಲಿ ಬೆಂಗಳೂರಿನಲ್ಲಿ ಆಯೋಜಿಸುವಂತೆ ಮನವಿ ಮಾಡಿದ ಅವರು, ರಾಜ್ಯದ ವತಿಯಿಂದ ಆತಿಥ್ಯ ವಹಿಸಲು ಸಿದ್ಧ ಎಂದು ಹೇಳಿದರು.

ಈ ಮನವಿಯ ಕುರಿತು ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮಹಾಮಂಡಳಿ ರಾಷ್ಟ್ರೀಯ ಅಧ್ಯಕ್ಷ ಬಿಜಯಕುಮಾರ್ ಸಿಂಗ್ ಭರವಸೆ ನೀಡಿದರು.

ಶಿಕ್ಷಣ

ಕಲಿಕೆ ಯಾವಾಗಲೂ ನಿಮ್ಮ ಹಿಂದೆಯೇ ಬರುವ ಸಂಪತ್ತು

ಅರೆಕಾಲಿಕ ವೃತ್ತಿಗಳ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಅಗಾಧವಾಗಿ ಹೆಚ್ಚಾಗಿದೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಅರೆಕಾಲಿಕ ಉದ್ಯೋಗಕ್ಕೂ ಸೇರಿಕೊಂಡರೆ ಭವಿಷ್ಯದ ದೃಷ್ಟಿಯಿಂದ ಅನುಕೂಲ.

ಜ್ಞಾನಾರ್ಜನೆಯ ಜೊತೆ ಸಂಪಾದನೆ

ಅರೆಕಾಲಿಕ ವೃತ್ತಿಗಳಲ್ಲಿ ವಿಪುಲ ಅವಕಾಶ

ಪ್ರದೀಪ್ ವೆಂಕಟರಾಮ್

ಕಳೆದ ವರ್ಷ ಕೋವಿಡ್ ಪಿಡುಗಿನ ಮಧ್ಯದಲ್ಲಿ, ಹೆಸರಾಂತ ಇ-ಕಾಮರ್ಸ್ ಕಂಪನಿ ತನ್ನ ಇಡೀ ಜಾಲತಾಣವನ್ನು ಇಂಗ್ಲಿಷ್‌ನಿಂದ ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳಿಗೆ ಅನುವಾದ ಮಾಡುವ ಯೋಜನೆಯನ್ನು ಅತ್ಯಂತ ತ್ವರಿತವಾಗಿ ಪೂರ್ಣಗೊಳಿಸಬೇಕಿತ್ತು. ಹಾಗಾಗಿ, ನಾನು ಅನಿಲ್ ಸೇರಿದಂತೆ ಅನೇಕ ವಿದ್ಯಾರ್ಥಿಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ, ನಾಲ್ಕು ತಿಂಗಳುಗಳವರೆಗೆ ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದ ಅನಿಲ್ ಎರಡು ಲಕ್ಷ ಸಂಪಾದಿಸಿದ. ಇಂತಹ ಅರೆಕಾಲಿಕ ವೃತ್ತಿಯ ಅವಕಾಶಗಳು ಹೆಚ್ಚಾಗಿದ್ದು, ಕಳೆದ ಕೆಲವು ವರ್ಷಗಳಲ್ಲಿ, ವಿಶೇಷವಾಗಿ ಭಾಷೆ ಮತ್ತು ವಿಷಯಾಭಿವೃದ್ಧಿ ವಲಯದಲ್ಲಿ ಆಮೂಲಾಗ್ರ ಬದಲಾವಣೆಯಾಗಿದೆ.

ಅರೆಕಾಲಿಕ ಕೆಲಸವನ್ನು ಏಕೆ ಮಾಡಬೇಕು?

ಸಾಮಾನ್ಯವಾಗಿ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಪಂಚದ ಹೊರಗಿನ ಜೀವನವನ್ನು ಮರೆತು ಬದುಕುವುದು ಸಹಜ. ಆದರೆ, ಒಂದು ಕ್ಷಣ ಯೋಚಿಸಿ; ಅರೆಕಾಲಿಕ ಉದ್ಯೋಗಗಳು ನಿಮ್ಮನ್ನು ವೃತ್ತಿಪರ ಜೀವನಕ್ಕಾಗಿ ಸಿದ್ಧಪಡಿಸುವುದರ ಜೊತೆಗೆ ನಿಮ್ಮ ವ್ಯಕ್ತಿತ್ವದ ಮೌಲ್ಯವನ್ನು ವೃದ್ಧಿಸಿ ಒಂದು ಹೊಸ ಜಗತ್ತನ್ನೇ ನಿಮಗೆ ಪರಿಚಯಿಸುತ್ತವೆ. ಪ್ರಮುಖವಾಗಿ, ಶಿಕ್ಷಣವೂ ಒಂದು ವ್ಯಾಪಾರವಾಗಿರುವ ಈ ಕಾಲಘಟ್ಟದಲ್ಲಿ, ಶಿಕ್ಷಣದ ನಿರ್ವಹಣೆ ದುಬಾರಿಯಾಗಿರುವುದರಿಂದ, ನಿಮ್ಮ ಅರೆಕಾಲಿಕ ಆದಾಯವು ಕುಟುಂಬದ ಹಣಕಾಸಿನ ಹೊರೆಯನ್ನು ಕಡಿಮೆ ಮಾಡುತ್ತದೆ.

ಯಾವ ರೀತಿಯ ಉದ್ಯೋಗಗಳು?

ಆಯ್ಕೆಯಲ್ಲಿ ವಿಪುಲತೆ ಮತ್ತು ವೈವಿಧ್ಯತೆಯಿರುವ ಕಾರಣದಿಂದ ವಿದ್ಯಾಭ್ಯಾಸದ ನಂತರ ನಿಮ್ಮ ವೃತ್ತಿಯೋಜನೆಗೆ ಅನುಗುಣವಾಗಿ ಅರೆಕಾಲಿಕ ಕೆಲಸವನ್ನು ಆರಿಸಿಕೊಳ್ಳಬಹುದು.

ಜಾಲತಾಣಗಳು, ಬ್ಲಾಗ್‌ಗಳು, ವಿಡಿಯೊಗಳಿಗಾಗಿ ವಿಷಯಾಭಿವೃದ್ಧಿ: ಭಾಷೆ ಮತ್ತು ಬರವಣಿಗೆಯಲ್ಲಿ ಪರಿಣತಿಯಿದ್ದರೆ ಮನೆಯಿಂದಲೇ ಮಾಡಬಹುದಾದ ಅನೇಕ ಅವಕಾಶಗಳಿವೆ. ಮೂಲ ವಿಷಯದ ಬರವಣಿಗೆ, ಅಸ್ತಿತ್ವದಲ್ಲಿರುವ ವಿಷಯವನ್ನು ಡಿಜಿಟಲೀಕರಣಗೊಳಿಸುವ ಕಾರ್ಯಗಳು ಲಾಭದಾಯಕ ಮತ್ತು ತೃಪ್ತಿಕರ.

ಭಾಷೆಯ ಸೇವೆಗಳು: ಹೆಚ್ಚಿನ ಬೇಡಿಕೆಯಿರುವ ಮತ್ತೊಂದು ಸಂಬಂಧಿತ ಕ್ಷೇತ್ರವೆಂದರೆ ಅನುವಾದ, ಟ್ರಾನ್ಸ್‌ಸ್ಕ್ರಿಪ್ಷನ್, ವಾಯ್ಸ್‌ಓವರ್, ಉಪಶೀರ್ಷಿಕೆಗಳು ಇತ್ಯಾದಿ.

ದತ್ತಾಂಶ ನಿರ್ವಹಣೆ: ಉತ್ಪನ್ನಗಳನ್ನು ಮಾರಾಟ ಮಾಡಲು ಕಂಪನಿಗಳು ಗ್ರಾಹಕರ ದತ್ತಾಂಶವನ್ನು ವ್ಯಾಪಕವಾಗಿ ಬಳಸುತ್ತವೆ. ಹಾಗಾಗಿ, ಕೆಲವು ದಶಕಗಳಿಂದಲೂ ದತ್ತಾಂಶದ ರಚನೆ, ಸಂಗ್ರಹಣೆ, ಪರಿಷ್ಕರಣೆ ಮತ್ತು ನಿರ್ವಹಣೆ ಕ್ಷೇತ್ರಗಳಲ್ಲಿಯೂ ವಿದ್ಯಾರ್ಥಿಗಳನ್ನು ನಿಯೋಜಿಸಲಾಗುತ್ತದೆ.

ಗ್ರಾಹಕ ಸಂಬಂಧಿತ ಸಂಶೋಧನೆ ಮತ್ತು ಸೇವೆಗಳು: ಗ್ರಾಹಕರ ಮಾಹಿತಿ, ಒಲವು, ಅಭಿಪ್ರಾಯ, ಪ್ರತಿಕ್ರಿಯೆ ಮತ್ತು ಆದ್ಯತೆಯ ಅಧ್ಯಯನ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಮಾರುಕಟ್ಟೆಯ ಚಟುವಟಿಕೆಗಳು: ಹೊಸ ಉತ್ಪನ್ನಗಳ ಬಿಡುಗಡೆ ಮತ್ತು ಪ್ರಚಾರ, ವಸ್ತು ಪ್ರದರ್ಶನ, ಸಮ್ಮೇಳನ ಇತ್ಯಾದಿಗಳಂತಹ ಮಾರುಕಟ್ಟೆಯ ಚಟುವಟಿಕೆಗಳಿಗೆ ಅಲ್ಪಾವಧಿಯಲ್ಲಿ ಸಾಕಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕಾರ್ಯಗಳಲ್ಲಿಯೂ ವಿದ್ಯಾರ್ಥಿಗಳನ್ನು ನಿಯೋಜಿಸಲಾಗುತ್ತದೆ. ಟಿಕೆಟಿಂಗ್, ಅತಿಥಿಗಳ ಸ್ವಾಗತ, ಮೇಲ್ವಿಚಾರಣೆ ಮತ್ತು ನಿರ್ವಹಣೆಯಂತಹ ಅನೇಕ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ನಿಯೋಜನೆ ಉಪಯುಕ್ತ.

ಆತಿಥ್ಯದ ಸೇವೆಗಳು: ರೆಸ್ಟೋರೆಂಟ್‌ಗಳು ಮತ್ತು ಕೆಫೆಗಳು ಎಂದಿನಿಂದಲೂ ವಿದ್ಯಾರ್ಥಿಗಳಿಗೆ ಅರೆಕಾಲಿಕ ಉದ್ಯೋಗಗಳನ್ನು ನೀಡುವ ಸಾಂಪ್ರದಾಯಿಕ ಮೂಲವಾಗಿವೆ. ಈಗ ಬದಲಾಗುತ್ತಿರುವ ಜೀವನ ಶೈಲಿಯಿಂದ ಈ ಕ್ಷೇತ್ರಗಳ ಅಭಿವೃದ್ಧಿಯಾಗಿ ವಿದ್ಯಾರ್ಥಿಗಳಿಗೆ ಅವಕಾಶಗಳು ಇನ್ನೂ ಹೆಚ್ಚಾಗಿವೆ.

ಮಾಧ್ಯಮ: ಮುದ್ರಣ, ಎಲೆಕ್ಟ್ರಾನಿಕ್ಸ್ ಮತ್ತು ಆನ್‌ಲೈನ್ ಮಾಧ್ಯಮಗಳ ಪ್ರಸರಣೆ ನಿರಂತರವಾಗಿ ಹೆಚ್ಚಾಗುತ್ತಿರುವುದರಿಂದ ಈ ಕ್ಷೇತ್ರದಲ್ಲಿನ ಅವಕಾಶಗಳೂ ಸಹ ವಿಪುಲವಾಗಿದೆ.

ಬೋಧನೆ: ಜ್ಞಾನ ಮತ್ತು ಕೌಶಲಗಳನ್ನು ಚುರುಕುಗೊಳಿಸುವುದರ ಜೊತೆಗೆ ಯುವ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದು ಆರ್ಥಿಕವಾಗಿಯೂ ಲಾಭದಾಯಕ.

ಇಂತಹ ಅರೆಕಾಲಿಕ ಉದ್ಯೋಗಗಳಿಂದ ತಿಂಗಳಿಗೆ 10 ಸಾವಿರದಿಂದ 40 ಸಾವಿರ ರೂಪಾಯಿವರೆಗೆ ಸಂಪಾದಿಸಬಹುದು. ಹಾಗಾಗಿ, ಕಾಲೇಜು ಮತ್ತು ಹಾಸ್ಟೆಲ್ ಶುಲ್ಕಗಳು, ಪುಸ್ತಕಗಳು, ಹೆಚ್ಚುವರಿ ಕೋರ್ಸ್‌ಗಳು ಸೇರಿದಂತೆ ಅನೇಕ ಖರ್ಚು- ವೆಚ್ಚಗಳಿಗೆ ಈ ಆದಾಯ ನೆರವಾಗಬಲ್ಲದು.

ಉಜ್ವಲ ಭವಿಷ್ಯದ ಕನಸುಗಳನ್ನು ಕಾಣುತ್ತಿರುವ ವಿದ್ಯಾರ್ಥಿಗಳು ಈ ಅವಕಾಶಗಳ ಸದುಪಯೋಗದಿಂದ ಸ್ವಾವಲಂಬಿಗಳಾಗಿ ಆತ್ಮವಿಶ್ವಾಸದಿಂದ ಶೈಕ್ಷಣಿಕ ಮತ್ತು ವೃತ್ತಿಜೀವನದಲ್ಲಿ ಪ್ರಗತಿಯನ್ನು ಸಾಧಿಸಬಹುದು.

(ಲೇಖಕರು: ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ವಿದ್ಯಾರ್ಥಿ ವೇತನ ಕೈಪಿಡಿ

ಶ್ಯಾಫ್ಲರ್ ಇಂಡಿಯಾ ಸೋಷಿಯಲ್ ಇನ್ನೊವೇಟರ್ ಫೆಲೋಶಿಪ್ ಪ್ರೋಗ್ರಾಮ್ 2021

ವಿವರ: ಸಮಾಜದಲ್ಲಿನ ಸಮಸ್ಯೆಗಳಿಗೆ ವಿಭಿನ್ನ ಪರಿಹಾರಗಳನ್ನು ನೀಡಿ, ಅದರಿಂದ ಸಮಾಜದಲ್ಲಿ ಒಂದು ಒಳ್ಳೆಯ ಬದಲಾವಣೆಗೆ ನಾಂದಿ ಹಾಡಬಲ್ಲ 18ರಿಂದ 30 ವರ್ಷದ ಒಳಗಿನವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: ಸೆಪ್ಟೆಂಬರ್ 1ರ ಅನ್ವಯ 18ರಿಂದ 30 ವರ್ಷದ ಒಳಗಿನವರು ಅರ್ಜಿ ಸಲ್ಲಿಸಬಹುದಾಗಿದೆ. ಭಾರತದ ನಿವಾಸಿಯಾಗಿರುವುದು ಕಡ್ಡಾಯ.

ಆರ್ಥಿಕ ಸಹಾಯ: ₹ 15 ಲಕ್ಷ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಅಕ್ಟೋಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/SIA1

ಕೃಪೆ: buddy4study.com

ಹಠ ಸಾಧನೆಯೇ ಗೆಲುವಿನ ಗುಟ್ಟು

ರುತ್ ಡಿಸಿಲ್ವ -ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಸಂದರ್ಶನ: ಸಂಧ್ಯಾ ಹೆಗಡೆ

'ಕಬ್ಬಿಣದ ಕಡಲೆ' ಎನ್ನುವ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಅಂತಿಮ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಗಳಿಸಿರುವ ಮಂಗಳೂರು ಮಲ್ಲಿಕಟ್ಟೆಯ ರುತ್ ಕ್ಲಾರ್ ಡಿಸಿಲ್ವ ಅವರು ಸಾಧನೆಯ ಹಠವಿದ್ದರೆ, ಕಠಿಣವೆಂಬ ಭಾವವನ್ನು ಸುಲಭಕ್ಕಿಳಿಸಬಹುದು ಎಂಬುದನ್ನು ನಿರೂಪಿಸಿದ್ದಾರೆ.

ರೋಸಿ ಮರಿಯಾ ಮತ್ತು ರಫರ್ಟ್ ಡಿಸಿಲ್ವ ದಂಪತಿ ಪುತ್ರಿ ರುತ್, ನಂದಗೋಪಾಲ ಅವರ ಬಳಿ, ಸಿಎ ಓಲ್ಡ್ ಕೋರ್ಸ್ ಪರೀಕ್ಷೆ ಬರೆಯಲು ಮಾರ್ಗದರ್ಶನ ಪಡೆದಿದ್ದರು. ಮೂರನೇ ಬಾರಿ ಬರೆದ ಪರೀಕ್ಷೆ ಅವರ ಜೀವನದ ಮೈಲುಗಲ್ಲಾಗಿದ್ದು, ಅವರು ತಮ್ಮ ಸಾಧನೆಯನ್ನು ಇಲ್ಲಿ ಹಂಚಿಕೊಂಡಿದ್ದಾರೆ.

- **ಸಿಎ ಮಾಡುವ ಯೋಚನೆ ಬಂದಿದ್ದು ಹೇಗೆ?**

ನನ್ನೆದುರು ಸಿಎ ಮತ್ತು ಕಾನೂನು ಪದವಿ ಎರಡು ಆಯ್ಕೆಗಳಿದ್ದವು. ಎಲ್ಲರೂ ಸಿಎ ಪರೀಕ್ಷೆ ತುಂಬಾ ಕಠಿಣ ಎನ್ನುತ್ತಿದ್ದರು. 'ಕಠಿಣ'ವನ್ನೇ ಗೆಲ್ಲಬೇಕೆಂಬ ಛಲ ನನ್ನದು. ಹೀಗಾಗಿ, ಪಿಯುಸಿಯಲ್ಲಿರುವಾಗಲೇ ಸಿಎ ಪರೀಕ್ಷೆ ಬರೆಯಲು ನಿರ್ಧರಿಸಿ, ಬಿ.ಕಾಂ ಪ್ರಥಮ ವರ್ಷದಿಂದ ಸಿದ್ಧತೆ ಆರಂಭಿಸಿದೆ. ಸಿಎ ಪರೀಕ್ಷೆ ಪಠ್ಯಕ್ರಮ ಅಧ್ಯಯನ ಮಾಡಿದರೆ, ಬಿ.ಕಾಂ ಪದವಿ ಪರೀಕ್ಷೆಗೆ ವಿಶೇಷ ತಯಾರಿ ಬೇಕಾಗುವುದಿಲ್ಲ.

- **ಅಧ್ಯಯನದ ಆರಂಭಿಕ ಹಂತ ಹೇಗಿರಬೇಕು?**

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ಆದರೂ ಸರಿ, ಮೊದಲು ಮನಸ್ಸನ್ನು ಅಣಿಗೊಳಿಸಿಕೊಳ್ಳಬೇಕು. ನನ್ನ ಮನಸ್ಸಿಗೆ ನಾನೇ ವಿಶ್ವಾಸ ತುಂಬಿ, ಇದು ನನ್ನಿಂದ ಸಾಧ್ಯ ಎಂಬುದನ್ನು ಮನದಟ್ಟು ಮಾಡಿಕೊಂಡರೆ, ಅಲ್ಲಿಂದ ಯಶಸ್ಸಿನ ಮೊದಲ ಮೆಟ್ಟಿಲು ಆರಂಭವಾಗುತ್ತದೆ.

- **ಮೊದಲ ಎರಡು ಬಾರಿ ಸಿಎ ಪರೀಕ್ಷೆಯಲ್ಲಿ ಹಿನ್ನಡೆ ಆದಾಗ ಏನನ್ನಿಸಿತು?**

ನಾನು ಅದನ್ನು ಹಿನ್ನಡೆ ಎಂದು ಭಾವಿಸಲೇ ಇಲ್ಲ. ಇನ್ನಷ್ಟು ಅಭ್ಯಾಸ ಮಾಡಬೇಕು. ಸಾಧನೆಯೇ ನನ್ನ ಗುರಿಯಾಗಬೇಕು ಎಂದು ನಿರ್ಧರಿಸಿದೆ. ವೈಫಲ್ಯ ನನ್ನನ್ನು ಇನ್ನಷ್ಟು ಸದೃಢಳನ್ನಾಗಿಸಿತು.

- **ಅಧ್ಯಯನ ಕ್ರಮ ಹೇಗಿತ್ತು?**

ಎಲ್ಲ ಟಾಪಿಕ್‌ಗಳನ್ನು ಮೊದಲು ಅರ್ಥೈಸಿಕೊಳ್ಳುತ್ತಿದ್ದೆ. ಕಾನ್ಸೆಪ್ಟ್‌ಗಳನ್ನು ಗ್ರಹಿಸಿಕೊಂಡು, ನಿರಂತರ ಅಭ್ಯಾಸ ಮಾಡುತ್ತಿದ್ದೆ. ಪರೀಕ್ಷೆಗೆ ಆರು ತಿಂಗಳು ಇರುವಾಗ ದಿನಕ್ಕೆ 8-10 ತಾಸು ಅಭ್ಯಾಸದಲ್ಲಿ ತೊಡಗುತ್ತಿದ್ದೆ. ಇದಕ್ಕಾಗಿ ಪ್ರತ್ಯೇಕ ವೇಳಾಪಟ್ಟಿ ಸಿದ್ಧಪಡಿಸಿದ್ದೆ. ಯೂಟ್ಯೂಬ್ ವಿಡಿಯೊಗಳು ಕೂಡ ನೆರವಿಗೆ ಬಂದವು.

- **ಬ್ಯಾಹ್ಯ ಆಕರ್ಷಣೆಗಳು, ಸ್ನೇಹಿತೆಯರೆಲ್ಲ ಮೋಜು ಮಾಡುವಾಗ ಮನಸ್ಸು ಅತ್ತ ಹೊರಳುವುದು ಸಹಜ ಅಲ್ಲವೆ?**

ಇಲ್ಲ, ನಾನು ಎಲ್ಲವನ್ನೂ ತ್ಯಾಗ ಮಾಡಿರಲಿಲ್ಲ. ಕೆಲವೊಮ್ಮೆ ಸ್ನೇಹಿತೆಯರ ಜೊತೆ ಸುತ್ತಾಟಕ್ಕೆ ಹೋಗುತ್ತಿದ್ದೆ. ಆದರೆ, ಸಾಧನೆಯಲ್ಲಿ ಸಿಗುವ ಖುಷಿ ಮೋಜಿನಲ್ಲಿ ಸಿಗದು. ಹೀಗಾಗಿ, ನಾನು ಅವುಗಳಿಗೆ ಆಕರ್ಷಿತಳಾಗಲಿಲ್ಲ. ಕೊನೆಯ ಆರು ತಿಂಗಳು ವಾಟ್ಸ್‌ಆ್ಯಪ್ ಸೇರಿದಂತೆ ಹರಟೆಯ ಎಲ್ಲ ಸಾಮಾಜಿಕ ಜಾಲತಾಣಗಳು ನನ್ನ ಮೊಬೈಲ್‌ನಿಂದ ಡಿಲೀಟ್ ಆಗಿದ್ದವು.

- **ಪರೀಕ್ಷೆಯ ಕೊನೆಯ ಒಂದು ವಾರ ಹೇಗಿರಬೇಕು ?**

ಪೂರ್ವ ಅಧ್ಯಯನ ಇದ್ದರೆ, ಕೊನೆಯ ಕ್ಷಣದಲ್ಲಿ ಆತ್ಮವಿಶ್ವಾಸ ಕುಗ್ಗುವುದಿಲ್ಲ. ಓದಿದ ವಿಷಯಗಳನ್ನು ಮನನ ಮಾಡಿಕೊಳ್ಳಬೇಕು. ನಿದ್ದೆ, ಆಹಾರದ ಬಗ್ಗೆ ಹೆಚ್ಚು ಗಮನಕೊಡಬೇಕು. ಕೊನೆ ಕ್ಷಣದಲ್ಲಿ ಎಲ್ಲವನ್ನೂ ಓದಿಕೊಳ್ಳುವ ಮನಸ್ಥಿತಿ ಪರೀಕ್ಷೆ ಬರೆಯುವ ಯಾರಲ್ಲೂ ಇರಬಾರದು. ಮೊದಲ ಬಾರಿ ಪರೀಕ್ಷೆಗೆ ಹೋಗುವಾಗ ನಾನು ಆತಂಕಕ್ಕೆ ಒಳಗಾಗಿದ್ದೆ. ಅನುಭವದಿಂದ ಪಾಠ ಕಲಿಯಬೇಕು. ನಾನು ಸಮರ್ಥವಾಗಿ ಪರೀಕ್ಷೆ ಎದುರಿಸಬಲ್ಲೆ ಎಂಬ ವಿಶ್ವಾಸ ಬೆಳೆಸಿಕೊಂಡು, ಮನಸ್ಸನ್ನು ಸನ್ನದ್ಧಗೊಳಿಸಬೇಕು.

- **ನಿರಂತರ ಓದು, ಮಾನಸಿಕ ಒತ್ತಡಕ್ಕೆ ಕೌನ್ಸೆಲಿಂಗ್ ಬೇಕಾಗಬಹುದೆ?**

ಕೌನ್ಸೆಲಿಂಗ್ ಅನ್ನುವುದಕ್ಕಿಂತ ಗೊಂದಲ ಆದಾಗ, ಹೇಳಿಕೊಳ್ಳಲು, ಹಂಚಿಕೊಳ್ಳಲು ಒಬ್ಬರು ಅನುಭವಿ ಇದ್ದರೆ ಉತ್ತಮ. 10 ಜನರ ಬಳಿ ಕೇಳುವುದಕ್ಕಿಂತ ಒಬ್ಬರ ಬಳಿ ನಿರಂತರ ಸಂಪರ್ಕ ಇಟ್ಟುಕೊಂಡು, ಚರ್ಚಿಸಿದರೆ, ಗೊಂದಲಗಳು ಬಗೆಹರಿಯುತ್ತವೆ. ಹಲವರ ಬಳಿ ಚರ್ಚಿಸಿದರೆ, ವಿಷಯ ಇನ್ನಷ್ಟು ಜಡಕಾಗುವ ಸಾಧ್ಯತೆ ಇರುತ್ತದೆ.

- **ವಾಣಿಜ್ಯ ಬದುಕಿನ ಅವಿಭಾಜ್ಯ ಆಗಿದ್ದರೂ, ಬಹಳಷ್ಟು ಜನರಿಗೆ ಆದಾಯ ತೆರಿಗೆಯಂತಹ ಸಾಮಾನ್ಯ ಕಾಯ್ದೆಯ ಜ್ಞಾನವೂ ಇರುವುದಿಲ್ಲ. ಈ ಬಗ್ಗೆ ಜಾಗೃತಿ ಮೂಡಿಸುವ ಕನಸು ಇದೆಯಾ?**

ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗಿನ ಪಠ್ಯದಲ್ಲಿ ಬೇರೆ ಎಲ್ಲ ವಿಷಯಗಳ ಪ್ರಾಥಮಿಕ ಜ್ಞಾನ ಸಿಗುತ್ತದೆ. ಆದರೆ, ವಾಣಿಜ್ಯ ವಿಷಯಕ್ಕೆ ಅಷ್ಟು ಒತ್ತು ಇಲ್ಲದ ಕಾರಣ, ಜನರಿಗೆ ಈ ಸಾಮಾನ್ಯ ಕಾಯ್ದೆಗಳ ಜ್ಞಾನ ಇರುವುದಿಲ್ಲ. ನನಗೆ ಅವಕಾಶ ಸಿಕ್ಕರೆ, ಭವಿಷ್ಯದಲ್ಲಿ ವಾಣಿಜ್ಯ ವಿಷಯದ ಬಗ್ಗೆ ಜಾಗೃತಿ ಮೂಡಿಸುವ ಹಂಬಲ ಇದೆ. ಭವಿಷ್ಯದಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆಯುವ ಕನಸು ಕೂಡ ಇದೆ.

ಕೆಎಎಸ್‌ಗೆ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **ನಾನು ಬಿಕಾಂ ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದು, ಕೆಎಎಸ್ ಮಾಡಬೇಕು ಎಂದುಕೊಂಡಿದ್ದೇನೆ. ತಯಾರಿ ಹೇಗೆ ಮತ್ತು ಯಾವ ಪುಸ್ತಕಗಳನ್ನು ಓದಬೇಕು ಎಂಬ ಮಾಹಿತಿ ನೀಡಬಹುದೇ?**

ಪ್ರಕಾಶ್, ಬಳ್ಳಾರಿ

ಸರ್ಕಾರಿ ವಲಯದ ಅನೇಕ ಉನ್ನತ ಹುದ್ದೆಗಳಿಗೆ ಕೆಎಎಸ್ ಏಕರೂಪದ ಪರೀಕ್ಷೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆ ಸೇರಿದಂತೆ ಮೂರು ಹಂತದ ಪರೀಕ್ಷೆಯಿರುತ್ತದೆ. ಒಬ್ಬ ದಕ್ಷ ಆಡಳಿತಾಧಿಕಾರಿಗೆ ಇರಬೇಕಾದ ಪರಿಪೂರ್ಣ ಜ್ಞಾನ, ನಾಯಕತ್ವದ ಸಾಮರ್ಥ್ಯ, ಮನೋಧೋರಣೆ, ನೈತಿಕತೆ, ಪಾರದರ್ಶಕತೆ, ಸಮಯದ ನಿರ್ವಹಣೆ, ಶಿಸ್ತು, ಬದ್ಧತೆ, ಸಂವಹನಾ ಸಾಮರ್ಥ್ಯ, ತಾರ್ಕಿಕ ಯೋಚನಾ ಸಾಮರ್ಥ್ಯ, ಪ್ರೇರಣಾ ಕೌಶಲ ಇತ್ಯಾದಿಗಳನ್ನು ಕೂಲಂಕಶವಾಗಿ ಪರೀಕ್ಷಿಸಲಾಗುತ್ತದೆ.

ಮುಖ್ಯ ಪರೀಕ್ಷೆಯಲ್ಲಿ ಕಡ್ಡಾಯವಾದ ಮತ್ತು ಐಚ್ಛಿಕ ವಿಷಯಗಳಿರುತ್ತವೆ. ಪ್ರಶ್ನೆಗಳು ಪದವಿಯ ಮಟ್ಟದ್ದಾಗಿರುತ್ತವೆ ಮತ್ತು ವಿವರಣಾತ್ಮಕ ಮಾದರಿಯಲ್ಲಿರುವುದರಿಂದ ಬರವಣಿಗೆ ಉತ್ಕೃಷ್ಟವಾದ ಗುಣಮಟ್ಟದ್ದಾಗಿರಬೇಕು.

ಈ ಎಲ್ಲಾ ಪರೀಕ್ಷೆಗಳ ಮಾದರಿ, ಪಠ್ಯಕ್ರಮ, ವಿಷಯದ ಅನುಸಾರ ಶಿಫಾರಸು ಮಾಡಿರುವ ಪುಸ್ತಕಗಳನ್ನು ತಿಳಿದುಕೊಂಡು ನಿಮ್ಮ ವೃತ್ತಿ ಯೋಜನೆಯ ಅನುಗುಣವಾಗಿ ಕಾರ್ಯತಂತ್ರವನ್ನು ರೂಪಿಸಬೇಕು.

ಈ ಸಲಹೆಗಳ ಅನುಸಾರ ಸಿದ್ಧತೆಯಿರಲಿ:

1. ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಿ ಮಾಡಬಹುದು.
2. ಪರಿಶ್ರಮ, ಬದ್ಧತೆ, ಆತ್ಮ ವಿಶ್ವಾಸ ಮತ್ತು ಸಮಯದ ನಿರ್ವಹಣೆ ಅತ್ಯಗತ್ಯ.
3. ಗೂಗಲ್ ಮತ್ತು ಯೂಟ್ಯೂಬ್‌ನಲ್ಲಿ ತಯಾರಿ ಕುರಿತ ಮಾಹಿತಿ ಮತ್ತು ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ.
4. ಕೆಎಎಸ್ ಪರೀಕ್ಷೆಯಲ್ಲಿ ಯಶಸ್ವಿಯಾಗಲು ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಮತ್ತು ಆಳವಾದ ಓದು, ಪುನರಾವರ್ತನೆ ಮತ್ತು ಬರವಣಿಗೆ ಇರಬೇಕು.
5. ಸಾಮಾಜಿಕ ಜಾಲತಾಣದಿಂದ ದೂರವಿದ್ದರೆ ಏಕಾಗ್ರತೆ ಸುಲಭ. ಹೆಚ್ಚಿನ ವಿವರಗಳಿಗಾಗಿ ಗಮನಿಸಿ: https://testbook.com/kpsc-kas/syllabus

- **ಅಪರಾಧ ಶಾಸ್ತ್ರ ಮತ್ತು ವಿಧಿ ವಿಜ್ಞಾನ ಶಾಸ್ತ್ರದಲ್ಲಿ ಪದವಿ ಮುಗಿಸಿದ್ದೇನೆ. ರಾಜ್ಯ ಅಥವಾ ಕೇಂದ್ರ ಸರ್ಕಾರದ ಯಾವ ಇಲಾಖೆಗಳಲ್ಲಿ ಕೆಲಸಕ್ಕೆ ಅರ್ಜಿ ಸಲ್ಲಿಸಬಹುದು. ದಯವಿಟ್ಟು ಮಾಹಿತಿ ನೀಡಿ.**

ರಮೇಶ್ ಆರ್.ಕೆ., ಹಾವೇರಿ.

ಅಪರಾಧ ಶಾಸ್ತ್ರಮತ್ತು ವಿಧಿ ವಿಜ್ಞಾನ ಶಾಸ್ತ್ರದ ಪದವಿಯ ನಂತರ ನೀವು ವೃತ್ತಿಯನ್ನು ಅರಸಬಹುದಾದ ಸರ್ಕಾರಿ ಕ್ಷೇತ್ರಗಳೆಂದರೆ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ವಿಧಿ ವಿಜ್ಞಾನ ಲ್ಯಾಬೊರೇಟರಿಗಳು, ಸಿಐಡಿ, ಸಿಬಿಐ, ಐಬಿ, ಪೊಲೀಸ್ ಇಲಾಖೆ, ನಾರ್ಕೋಟಿಕ್ಸ್ ಇಲಾಖೆ ಇತ್ಯಾದಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ.

ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 65

886. ವಿಕ್ರಮಶಿಲ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ ಅರಸ ಯಾರು?

ಎ) ಗೋಪಾಲ ಬಿ) ಧರ್ಮಪಾಲ
ಸಿ) ದೇವಪಾಲ ಡಿ) ಮಹಿಪಾಲ

887. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಗುಪ್ತರ ಕಾಲಾವಧಿಯಲ್ಲಿ ಪುಷ್ಯಗುಪ್ತನು ಸುದರ್ಶನ ಕೆರೆಯ ಉತ್ಖನನ ಮಾಡಿಸಿದನು.
2. ಸ್ಕಂದಗುಪ್ತನು ಸುದರ್ಶನ ಕೆರೆಯ ದುರಸ್ತಿಯನ್ನು ಮಾಡಿಸಿದನು.

ಸರಿಯಾದ ಹೇಳಿಕೆ ಆಯ್ಕೆಮಾಡಿ

ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

888. ಈ ಕೆಳಗಿನ ಯಾವವು ಹರ್ಷವರ್ಧನನಿಗೆ ಸಂಬಂಧಿಸಿದ್ದಾಗಿವೆ?

1. ಶಿಲಾದಿತ್ಯ 2. ರತ್ನಾವಳಿ
3. ಬಾಣಭಟ್ಟ 4. ಹುಯೇನ್ ತ್ಸಾಂಗ್

ಸರಿಯಾದ ಉತ್ತರ ಆಯ್ಕೆಮಾಡಿ

ಎ) 1, 2 ಮತ್ತು 3 ಬಿ) 2, 3 ಮತ್ತು 4
ಸಿ) 1, 3 ಮತ್ತು 4 ಡಿ) 1, 2, 3 ಮತ್ತು 4

889. ಗಾಂಧಾರ ಕಲೆಗೆ ಪ್ರಮುಖವಾಗಿ ಈ ಕೆಳಗಿನ ಯಾರು ಕಾರಣರು?

ಎ) ಹೀನಾಯಾನ ಪಂಥದವರು
ಬಿ) ಮಹಾಯಾನ ಪಂಥದವರು
ಸಿ) ಜೈನಧರ್ಮದವರು
ಡಿ) ಜೊರಾಷ್ಟ್ರೀಯನ್ ಧರ್ಮದವರು

890. ಈ ಕೆಳಗಿನ ಯಾವವು ಗಂಗರ ರಾಜಧಾನಿ/ ಉಪರಾಜಧಾನಿಗಳಾಗಿದ್ದವು?

1. ಕೋಲಾರ 2. ತಲಕಾಡು
3. ಮಾಕುಂದ 4. ಮಾನ್ಯಪುರ

ಸರಿಯಾದ ಉತ್ತರ ಆಯ್ಕೆಮಾಡಿ

ಎ) 1 ಮತ್ತು 2 ಬಿ) 2 ಮಾತ್ರ
ಸಿ) 2, 3 ಮತ್ತು 4 ಡಿ) 1, 2 ,3 ಮತ್ತು 4

891. 12ನೇ ಶತಮಾನದಲ್ಲಿ ಭಾಸ್ಕರಚಾರ್ಯನು ಬರೆದ ಕೃತಿ 'ಲೀಲಾವತಿ', ಈ ಕೆಳಗಿನ ಯಾವ ವಿಷಯಕ್ಕೆ ಸಂಬಂಧಿಸಿದೆ?

ಎ) ನೃತ್ಯ ಬಿ) ನಾಟಕ
ಸಿ) ಗಣಿತ ಡಿ) ವೈದ್ಯಕೀಯ

892. ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಹಾಗೂ ಅವರ ದೇಶಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ತಪ್ಪಾಗಿ ಜೋಡಣೆಯಾಗಿದೆ?

ಎ) ನಿಕೋಲೋ ಕೊಂಟಿ- ಇಟಲಿ
ಬಿ) ನಿಕೇಟಿನ್- ರಷ್ಯಾ
ಸಿ) ಬಾರ್ಬೋಸಾ- ಪೋರ್ಚುಗಲ್
ಡಿ) ಡೊಮಿಂಗೋ ಪಯಸ್- ಫ್ರಾನ್ಸ್

893. ರಾಜ್ಯದ ವೆಚ್ಚದಲ್ಲಿ ಹಜ್ ಯಾತ್ರೆಯ ವ್ಯವಸ್ಥೆ ಮಾಡಿದ ಮೊದಲ ಭಾರತೀಯ ದೊರೆ

ಎ) ಅಲ್ಲಾ-ಉದ್ದೀನ್ ಖಿಲ್ಜಿ
ಬಿ) ಫಿರೋಜ್ ತುಘಲಕ್
ಸಿ) ಅಕ್ಬರ್ ಡಿ) ಔರಂಗಜೇಬ್

894. ಭಾರತದ ಯಾವ ಅರಸನಿಗೆ 'ಆಲಂಗೀರ್'ಎಂಬ ಬಿರುದು ಇತ್ತು?

ಎ) ಅಕ್ಬರ್ ಬಿ) ಶೇರ್ ಶಾ ಸೂರಿ
ಸಿ) ಔರಂಗಜೇಬ್ ಡಿ) ಹುಮಾಯೂನ್

895. ಔರಂಗಜೇಬ್‌ನ ನಂತರ ಅಧಿಕಾರಕ್ಕೆ ಬಂದ ಈ ಕೆಳಗಿನ ಮೊಘಲ್ ರಾಜರನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

1. ಬಹದ್ದೂರ ಷಾ 2. ಜಹಂದರ್ ಷಾ
3. ಫಾರೂಕ್ ಸಿಯಾರ್ 4. ಮುಹಮ್ಮದ್ ಷಾ

ಸರಿಯಾದ ಉತ್ತರ ಆಯ್ಕೆಮಾಡಿ

ಎ) 1-2-3-4 ಬಿ) 4-1-2-3
ಸಿ) 3-2-4-1 ಡಿ) 4-3-1-2

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 64ರ ಉತ್ತರಗಳು: 871. ಬಿ, 872. ಸಿ, 873. ಸಿ, 874. ಎ, 875. ಎ, 876. ಡಿ, 877. ಎ, 878. ಡಿ, 879. ಎ, 880. ಡಿ, 881. ಬಿ, 882. ಡಿ, 883. ಡಿ, 884. ಡಿ, 885. ಬಿ

NITTE EDUCATION TRUST | NITTE MEENAKSHI INSTITUTE OF TECHNOLOGY

NITTE MEENAKSHI INSTITUTE OF TECHNOLOGY · KNOWLEDGE • CHARACTER • UNITY

An Autonomous Institution | Affiliated to Visvesvaraya Technological University, Belagavi
Approved by UGC/AICTE/Government of Karnataka

RANKED 168 BY nirf Ministry of Education Govt of India
RANKED 3 ARIIA ATAL RANKING OF INSTITUTIONS ON INNOVATION ACHIEVEMENTS Ministry of Education, Govt of India AMONG TOP PRIVATE ENGINEERING INSTITUTIONS IN INDIA, IN 2020
NAAC Accredited A+ Grade
Approved by UGC under Section 2(f) and 12(B)
NBA NATIONAL BOARD OF ACCREDITATION Programs are Accredited by NBA (Tier 1)
PLATINUM GRADE AICTE-CII Survey of Colleges with Industry Linkages
TEQIP-II World Bank Funded

CET CODE: E-105
COMED-K CODE: E-086

PROGRAMS OFFERED

DIPLOMA: AERONAUTICAL ENGINEERING; COMPUTER SCIENCE & ENGINEERING; ELECTRONICS & COMMUNICATION ENGINEERING; ELECTRICAL & ELECTRONICS ENGINEERING; MECHANICAL ENGINEERING; CIVIL ENGINEERING
AUTOMOTIVE MASTER TRAINER PROGRAMS: AUTO ELECTRICAL/ ELECTRONICS; AIR CONDITIONING

UNDERGRADUATE – B.E: AERONAUTICAL ENGINEERING; ARTIFICIAL INTELLIGENCE & DATA SCIENCE; ARTIFICIAL INTELLIGENCE & MACHINE LEARNING; COMPUTER SCIENCE & ENGINEERING; INFORMATION SCIENCE & ENGINEERING; ELECTRONICS & COMMUNICATION ENGINEERING; ELECTRICAL & ELECTRONICS ENGINEERING; MECHANICAL ENGINEERING; CIVIL ENGINEERING

POST GRADUATE – M. Tech: AEROSPACE ENGINEERING; DEFENCE TECHNOLOGY IN COLLABORATION WITH DRDO, MINISTRY OF DEFENCE, GOVT. OF INDIA; COMPUTER SCIENCE & ENGINEERING; DATA SCIENCE ENGINEERING; VLSI DESIGN & EMBEDDED SYSTEMS; RENEWABLE ENERGY; MACHINE DESIGN; STRUCTURAL ENGINEERING
M.B.A
M.C.A
RESEARCH: M.Sc (ENGINEERING BY RESEARCH); Ph.D (ENGINEERING | SCIENCES | MANAGEMENT)

PLACEMENT HIGHLIGHTS 2020
900+ STUDENTS REGISTERED
125+ COMPANIES VISITED
1000+ PLACEMENT OFFERS
25+ INTERNATIONAL OFFERS
27 LPA HIGHEST PACKAGE (GLOBAL)
30 LPA HIGHEST PACKAGE (NATIONAL)
4.7 LPA AVERAGE PACKAGE
25+ MoUs SIGNED WITH INDUSTRIES/LABS

State-of-the-art Hostel facilities in the campus | Transport facilities across Bengaluru City, Doddaballapur and Chikkaballapur

Post Box No: 6429, Govindapura, Gollahalli, Yelahanka, Bengaluru - 560 064
TOLL FREE No: 1800 102 4984 Landline: 080-22167929 | Mobile: +91-8147354955 / 51
E-mail: admissions@nmit.ac.in / enquiry@nitte.edu.in | Web: www.nmit.ac.in

ADMISSIONS OPEN FOR 2021-22

ಸುಭಾಷಿತ

ಒಬ್ಬ ಚಾಂಪಿಯನ್ ಅನ್ನು ವ್ಯಾಖ್ಯಾನಿಸಲು ಅವರ ಗೆಲುವನ್ನು ಗಣನೆಗೆ ತೆಗೆದುಕೊಳ್ಳಬಾರದು. ವಿಫಲರಾದಾಗ ಹೇಗೆ ಚೇತರಿಸಿಕೊಳ್ಳುತ್ತಾರೆ ಎಂಬುದನ್ನು ಆಧರಿಸಬೇಕು.

–ಸೆರೆನಾ ವಿಲಿಯಮ್ಸ್

ಅಕ್ರಮ ಧಾರ್ಮಿಕ ಕಟ್ಟಡಗಳ ರಕ್ಷಣೆಯ ಹಿಂದೆ ಸಾರ್ವಜನಿಕ ಹಿತ ಅಡಗಿಲ್ಲ

ಅನಧಿಕೃತವಾಗಿ ನಿರ್ಮಿಸಲಾದ ದೇವಾಲಯ, ಮಸೀದಿ, ಚರ್ಚ್, ಗುರುದ್ವಾರ ಮತ್ತು ಇತರ ಧಾರ್ಮಿಕ ಕಟ್ಟಡಗಳನ್ನು ರಕ್ಷಿಸಲು ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ಮಸೂದೆಯ ಮೂಲಕ ಕರ್ನಾಟಕ ಸರ್ಕಾರ ಮುಂದಾಗಿದೆ. ರಸ್ತೆ, ಉದ್ಯಾನ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ನಿರ್ಮಾಣ ಆಗಿರುವ ಧಾರ್ಮಿಕ ಕಟ್ಟಡಗಳಿಗೆ ಕಾಯ್ದೆಯೊಂದರ ರಕ್ಷಣೆ ನೀಡಲಾಗಿದೆ. ಕೋಮು ಸಾಮರಸ್ಯವನ್ನು ಕಾಯ್ದುಕೊಳ್ಳುವುದು ಮತ್ತು ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಆಗುವುದನ್ನು ತಡೆಯುವುದು ಈ ಮಸೂದೆಯ ಉದ್ದೇಶವಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಆದರೆ, ದೇಶದಾದ್ಯಂತ ಅನಧಿಕೃತವಾಗಿ ನಿರ್ಮಾಣವಾದ ಧಾರ್ಮಿಕ ಕಟ್ಟಡಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದೆ. ಈ ನಿರ್ದೇಶನವು ರಾಜ್ಯದ ಧಾರ್ಮಿಕ ಕಟ್ಟಡಗಳಿಗೆ ಅನ್ವಯ ಆಗುವುದನ್ನು ತಪ್ಪಿಸುವುದು ಕಾಯ್ದೆಯ ನಿಜವಾದ ಗುರಿ. ರಾಜ್ಯದಲ್ಲಿ ಇಂತಹ ಅಕ್ರಮ ಕಟ್ಟಡಗಳ ಸಂಖ್ಯೆ 6,300 ಇವೆ ಎಂದು ಗುರುತಿಸಲಾಗಿದೆ. ಸುಪ್ರೀಂ ಕೋರ್ಟ್ 2009ರಲ್ಲಿಯೇ ನಿರ್ದೇಶನ ನೀಡಿದ್ದರೂ ಕಟ್ಟಡಗಳ ತೆರವು ಕಾರ್ಯಾಚರಣೆಯು ಆಮೆನಡಿಗೆಯಲ್ಲಿ ಸಾಗಿತ್ತು. ಕರ್ನಾಟಕ ಹೈಕೋರ್ಟ್ ಈ ವಿಚಾರದಲ್ಲಿ ರಾಜ್ಯ ಸರ್ಕಾರದ ತಲೆಗೆ ಇತ್ತೀಚೆಗೆ ಮೊಟಕಿದ ಬಳಿಕ ಸರ್ಕಾರದ ಮುಖ್ಯ ಕಾರ್ಯದರ್ಶಿಯು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತೆರವು ಕಾರ್ಯಾಚರಣೆ ಚುರುಕುಗೊಳಿಸಲು ಸೂಚಿಸಿದ್ದರು. ಅದರಂತೆ, ರಾಜ್ಯದ ವಿವಿಧ ಭಾಗಗಳಲ್ಲಿ ಅಕ್ರಮ ಧಾರ್ಮಿಕ ಕಟ್ಟಡಗಳ ತೆರವು ಕಾರ್ಯ ನಡೆದಿದೆ. ಆದರೆ, ನಂಜನಗೂಡು ತಾಲ್ಲೂಕಿನ ಉಚ್ಚಗಣಿಯ ಮಹದೇವಮ್ಮ ದೇವಾಲಯ ತೆರವು ಕಾರ್ಯಾಚರಣೆಯು ವಿವಾದಕ್ಕೆ ಕಾರಣವಾಯಿತು. ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರು ದೇವಾಲಯ ತೆರವಿಗೆ ಆಕ್ಷೇಪ ವ್ಯಕ್ತಪಡಿಸಿದರು. 'ದೇವಾಲಯ ರಕ್ಷಣೆ' ಅಭಿಯಾನವನ್ನೇ ನಡೆಸುವುದಾಗಿ ಬೆದರಿಸಿದರು. 'ಹಿಂದೂ ವಿರೋಧಿ ಆಗಿದ್ದರು ಎಂಬ ಕಾರಣಕ್ಕೆ ಮಹಾತ್ಮ ಗಾಂಧಿ ಅವರನ್ನೇ ಹತ್ಯೆ ಮಾಡಲಾಗಿದೆ. ಹಾಗಿರುವಾಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರನ್ನು ನೋಡಿಕೊಳ್ಳುವುದು ಕಷ್ಟವೇನಲ್ಲ' ಎಂಬಂತಹ ಹೇಳಿಕೆಯನ್ನೂ ಹಿಂದೂ ಮಹಾಸಭಾದ ಪದಾಧಿಕಾರಿಗಳಲ್ಲಿ ಒಬ್ಬರು ಹೇಳಿದ್ದರು.

ಒತ್ತಡಕ್ಕೆ ಒಳಗಾಗಿ ರೂಪಿಸಿದಂತಿರುವ ಈ ಮಸೂದೆಯು ಹಲವು ವಿಚಾರಗಳಲ್ಲಿ ಪ್ರತಿಗಾಮಿಯಾಗಿದೆ

ಇಂತಹ ಸಂಘಟನೆಗಳು ಮತ್ತು ವ್ಯಕ್ತಿಗಳ ಒತ್ತಡದಿಂದಾಗಿಯೇ ಸರ್ಕಾರವು ಮಸೂದೆ ರೂಪಿಸಿತೇ ಎಂಬ ಅನುಮಾನ ಮೂಡದಿರದು. ಜತೆಗೆ, ಉಚ್ಚಗಣಿಯ ದೇವಾಲಯದ ತೆರವನ್ನು ವಿರೋಧ ಪಕ್ಷಗಳು ರಾಜಕೀಯವಾಗಿ ಬಳಸಿಕೊಂಡವು. ಹಿಂದುತ್ವವನ್ನು ಬಲವಾಗಿ ಪ್ರತಿಪಾದಿಸುವ ಬಿಜೆಪಿ ನೇತೃತ್ವದ ಸರ್ಕಾರ ಇರುವಾಗಲೇ ದೇವಾಲಯ ತೆರವು ಮಾಡಿದ್ದು ಮತ್ತು ಅದೊಂದು ವಿವಾದವಾಗಿ ಬೆಳೆದದ್ದು ಆಡಳಿತ ಪಕ್ಷವನ್ನು ಹಣಿಯಲು ವಿರೋಧ ಪಕ್ಷಗಳಿಗೆ ಅಸ್ತ್ರವಾಗಿ ಒದಗಿಬಂತು. ಮಸೂದೆ ರಚನೆಯ ಹಿಂದೆ, ಈ ಅಸ್ತ್ರದಿಂದ ತಪ್ಪಿಸಿಕೊಳ್ಳುವ ಪ್ರಯತ್ನವೂ ಇದೆ. ಮಸೂದೆಗೆ ಅಂಗೀಕಾರ ದೊರೆತಿದ್ದರೂ ಅಕ್ರಮ ಧಾರ್ಮಿಕ ಕಟ್ಟಡಗಳ ತೆರವು ವಿಚಾರದಲ್ಲಿ ಸರ್ಕಾರಕ್ಕೆ ಗೊಂದಲ ಇದ್ದಂತಿದೆ. 'ಅಕ್ರಮವಾದ ಯಾವುದೇ ಧಾರ್ಮಿಕ ಕಟ್ಟಡವನ್ನು ಈ ಮಸೂದೆಯನ್ನು ಬಳಸಿಕೊಂಡು ಸಕ್ರಮಗೊಳಿಸುವುದಿಲ್ಲ. ಅಕ್ರಮ ಕಟ್ಟಡಗಳಿಗೆ ತಾತ್ಕಾಲಿಕ ರಕ್ಷಣೆಯನ್ನಷ್ಟೇ ಮಸೂದೆ ನೀಡಲಿದೆ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಮಸೂದೆ ಮಂಡನೆ ವೇಳೆ ಹೇಳಿದ್ದಾರೆ. ಸಕ್ರಮಗೊಳಿಸದೆಯೇ ರಕ್ಷಣೆ ನೀಡುವುದು ಹೇಗೆ? ತಾತ್ಕಾಲಿಕ ರಕ್ಷಣೆ ಅಂದರೆ ಅದರ ಅರ್ಥ ಏನು? ವ್ಯಾಪ್ತಿ ಏನು? ಇಂತಹ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರ ಇದ್ದಂತಿಲ್ಲ.

ಈ ಮಸೂದೆಯು ಹಲವು ವಿಚಾರಗಳಲ್ಲಿ ಪ್ರತಿಗಾಮಿಯಾಗಿದೆ ಎಂದು ಹೇಳದೇ ವಿಧಿ ಇಲ್ಲ. ಅಕ್ರಮ ಧಾರ್ಮಿಕ ಕಟ್ಟಡಗಳ ತೆರವಿಗೆ ತಡೆ ಒಡ್ಡುವ ಮೂಲಕ ಸರ್ಕಾರಿ ಸ್ವಾಮ್ಯದ ಮತ್ತು ಸಾರ್ವಜನಿಕ ಬಳಕೆಯ ಸ್ಥಳಗಳ ಒತ್ತುವರಿ ತೆರವಿಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ ಎಂಬ ಭಾವನೆ ಮೂಡುವಂತೆ ಮಾಡುತ್ತದೆ. ಅರಣ್ಯ, ಕೆರೆ, ರಸ್ತೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿನ ಒತ್ತುವರಿ ತೆರವಿನ ವಿಚಾರದಲ್ಲಿ ಸರ್ಕಾರದ ಕೈ ಕಟ್ಟಿ ಹಾಕಿದಂತಾಗುತ್ತದೆ. ರಾಜ್ಯದ ವಿವಿಧ ಭಾಗಗಳಲ್ಲಿ ರಸ್ತೆಯ ಮಧ್ಯದಲ್ಲಿ ಧಾರ್ಮಿಕ ಕಟ್ಟಡಗಳು ಇವೆ. ಇವು ಸುಗಮ ಸಂಚಾರಕ್ಕೆ ಅಡ್ಡಿ ಮಾತ್ರವಲ್ಲ, ಅಪಘಾತಕ್ಕೂ ಕಾರಣ ಆಗಬಹುದು. ಹಾಗಾಗಿ ಮಸೂದೆಯ ಹಿಂದೆ ಸಾರ್ವಜನಿಕ ಹಿತ ಇದೆ ಎಂಬುದನ್ನು ಒಪ್ಪಲಾಗದು. ಇನ್ನು ಮುಂದೆ ನಿರ್ಮಾಣ ಆಗುವ ಅಕ್ರಮ ಧಾರ್ಮಿಕ ಕಟ್ಟಡಗಳಿಗೆ ಮಸೂದೆ ರಕ್ಷಣೆ ನೀಡುವುದಿಲ್ಲ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಆದರೆ, ಮಸೂದೆಯು ನೀಡುವ ಸಂದೇಶವು ಅದಕ್ಕೆ ವ್ಯತಿರಿಕ್ತವಾಗಿದೆ. ಸಾರ್ವಜನಿಕ ಸ್ಥಳದಲ್ಲಿ ನಿರ್ಮಾಣ ಆಗುವ ಧಾರ್ಮಿಕ ಕಟ್ಟಡವನ್ನು ಸುಲಭದಲ್ಲಿ ತೆರವು ಮಾಡಲು ಸಾಧ್ಯವಿಲ್ಲ ಎಂಬ ಸಂದೇಶ ರವಾನಿಸುತ್ತದೆ. ಅಕ್ರಮವಾಗಿ ಧಾರ್ಮಿಕ ಕಟ್ಟಡ ನಿರ್ಮಿಸಿದರೆ ಮುಂದೆಯೂ ಅದಕ್ಕೆ ಯಾವುದಾದರೂ ರೀತಿಯ ರಕ್ಷಣೆ ದೊರೆಯಬಹುದು ಎಂಬ ವಿಶ್ವಾಸವನ್ನೂ ಮೂಡಿಸುತ್ತದೆ. ಸರ್ಕಾರದ ಈ ನಡೆಯನ್ನು ನ್ಯಾಯಾಂಗ ನಿಂದನೆ ಎಂದು ಸುಪ್ರೀಂ ಕೋರ್ಟ್ ಪರಿಗಣಿಸುವ ಸಾಧ್ಯತೆಯೂ ಇಲ್ಲದೇ ಇಲ್ಲ. 2009ರಲ್ಲಿಯೇ ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶನವು ಅನ್ವಯ ಆಗದಂತೆ ನೋಡಿಕೊಳ್ಳುವುದೇ ಈ ಮಸೂದೆಯ ಉದ್ದೇಶ. ಜನಹಿತವನ್ನು ಗಮನದಲ್ಲಿ ಇರಿಸಿಕೊಂಡು ಸುಪ್ರೀಂ ಕೋರ್ಟ್ ನೀಡಿದ ತೀರ್ಪೊಂದು ಜಾರಿಗೆ ಬರದಂತೆ ಮಾಡುವ ಕಾಯ್ದೆ ತರುವುದು ತೀರಾ ಕೆಟ್ಟ ನಡೆ. ನಾವು ರೂಪಿಸಿಕೊಂಡಿರುವ ಆಡಳಿತ ವ್ಯವಸ್ಥೆಯನ್ನು ಅಗೌರವದಿಂದ ಕಾಣುವಂತಹ ಕ್ರಮವೂ ಹೌದು ಇದು. ಅಕ್ರಮ ಕಟ್ಟಡಗಳನ್ನು ಸಾಧ್ಯವಿದ್ದಲ್ಲಿ ಕ್ರಮಬದ್ಧಗೊಳಿಸುವ ಇಲ್ಲವೇ ಸ್ಥಳಾಂತರ ಮಾಡುವ ಹಲವು ಅವಕಾಶಗಳನ್ನು ಸುಪ್ರೀಂ ಕೋರ್ಟ್ ನೀಡಿತ್ತು. 2009ರಲ್ಲಿಯೇ ನಿರ್ದೇಶನ ಬಂದಿದ್ದರೂ ಯಾವುದನ್ನೂ ಮಾಡದೆ ಸರ್ಕಾರವು ಸುಮ್ಮನಿದ್ದದ್ದು ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ಆಡಳಿತಗಾರರಿಗೆ ಇರುವ ಅಸಡ್ಡೆಯನ್ನು ಮಾತ್ರ ತೋರುತ್ತದೆ.

ದಿನದ ಟ್ವೀಟ್

ಮಾದರಿ ನಡೆ

ಮನಮೋಹನ್ ಸಿಂಗ್ ಅವರು 2005ರಲ್ಲಿ ಜೆಎನ್‌ಯುಗೆ ಭೇಟಿ ನೀಡಿದ್ದಾಗ, ಸಿಂಗ್ ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳನ್ನು ವಿರೋಧಿಸಿ ವಿದ್ಯಾರ್ಥಿ ಸಂಘಟನೆಯು ಅವರ ಎದುರು ಕಪ್ಪುಬಾವುಟ ಪ್ರದರ್ಶಿಸಿತ್ತು. ಆ ವಿದ್ಯಾರ್ಥಿ ಸಂಘಟನೆಯಲ್ಲಿ ನಾನೂ ಇದ್ದೆ. ಈ ಕೃತ್ಯಕ್ಕಾಗಿ ದೆಹಲಿ ಪೊಲೀಸರು ನಮ್ಮ ವಿರುದ್ಧ ಪ್ರಕರಣ ದಾಖಲಿಸಲು ಮುಂದಾದಾಗ, ಅದನ್ನು ಆಕ್ಷೇಪಿಸಿದ್ದ ಅವರು, ಪ್ರತಿಭಟಿಸುವುದು ಅವರ ಪ್ರಜಾಸತ್ತಾತ್ಮಕ ಹಕ್ಕು ಎಂದಿದ್ದರು ಮತ್ತು ಆಗ ನಮ್ಮ ಮೇಲೆ ಯಾವ ದೂರೂ ದಾಖಲಾಗಲಿಲ್ಲ. #HappyBirthdayDrMMSingh

ರಾಜನ್ ಪಾಂಡೆ, ಪತ್ರಕರ್ತ, ರಾಜಕೀಯ ವಿಶ್ಲೇಷಕ

ಕಿಡಿನುಡಿ

ದೇಶದಲ್ಲಿ ಕೋವಿಡ್ ನಿರ್ಬಂಧಗಳು ಮುಂದುವರಿದಿದ್ದರೂ ರಾಜಕೀಯ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತಿವೆ. ಎಲ್ಲೆಡೆ ಮನರಂಜನೆ ಇದೆ. ಮಹಾರಾಷ್ಟ್ರದಲ್ಲಿ ವಿರೋಧ-ಪಕ್ಷವಾದ ಬಿಜೆಪಿಯ ನಡೆಯು ಕೇವಲ ಕಾಮಿಡಿ ಷೋ ಆಗಿದೆ. ಕೇಂದ್ರ ತನಿಖಾ ಸಂಸ್ಥೆಗಳನ್ನು ಅದು ಅಪಹಾಸ್ಯಕ್ಕೆ ಈಡಾಗುವಂತೆ ಮಾಡಿದೆ.



ಸಂಜಯ್ ರಾವುತ್, ಶಿವಸೇನಾ ಮುಖಂಡ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 27-9-1991

• **ಪಿವಿಎನ್ ವಿರುದ್ಧ ಆರೋಪಪಟ್ಟಿ ಸಲ್ಲಿಕೆ**

ನವದೆಹಲಿ, ಸೆ. 26 (ಪಿಟಿಐ, ಯುಎನ್‌ಐ) ಮಾಜಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರ ರಾಜಕೀಯ ಜೀವನದಲ್ಲಿ ಇಂದು ತೀವ್ರ ಆಘಾತಕರ ದಿನ. ಲಕ್ಕೂ ಭಾಯಿ ಪಾಠಕ್ ಅವರಿಗೆ ವಂಚನೆ ಮಾಡಿದ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನಿಗೆ ಸಲ್ಲಿಸಿದ್ದ ಅವರ ಅರ್ಜಿ ಇಂದು ತಿರಸ್ಕೃತವಾಯಿತು. ಸೇಂಟ್ ಕಿಟ್ಸ್ ಬ್ಯಾಂಕ್ ಖಾತೆ ಲೆಕ್ಕ ನಕಲು ಹಗರಣದಲ್ಲಿ ಇವರ ಶಾಮೀಲು ಸಾಬೀತು ಮಾಡಿರುವ ಸಿಬಿಐ ಇಂದು ಆರೋಪಪಟ್ಟಿ ಸಲ್ಲಿಸಿದೆ.

• **ವೈದ್ಯರ ಮೌನ ಮೆರವಣಿಗೆ**

ಬೆಂಗಳೂರು, ಸೆ. 26– ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರನಿರತರಾಗಿರುವ ಕಿರಿಯ ವೈದ್ಯರು ಇಂದು ಮೌನ ಮೆರವಣಿಗೆ ನಡೆಸಿದರು.

ಕಿರಿಯ ವೈದ್ಯರ ಸಂಘದ ಅಧ್ಯಕ್ಷ ಡಾ. ಬಸವರಾಜು ನೇತೃತ್ವದ ನಿಯೋಗ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿತಾದರೂ ಯಾವುದೇ ಪ್ರಯೋಜನವಾಗಲಿಲ್ಲ.

50 ವರ್ಷಗಳ ಹಿಂದೆ

ಸೋಮವಾರ, 27-9-1971

• **ಪರಿಮಳ ಮಂಟಪದಲ್ಲಿ ಭಕ್ತಿಯ ಮಹಾಪೂರ**

ಬೆಂಗಳೂರು, ಸೆ. 26– 'ಭಕ್ತಿಯ ತುಂಗಭದ್ರೆಯ ಮಹಾಪೂರದ' ಪವಿತ್ರತಮ ವಾತಾವರಣ. 'ಪೂಜ್ಯಾಯ ರಾಘವೇಂದ್ರಾಯ' ಶ್ಲೋಕದ ನಿನಾದ. ಬೆಳಗಿನಿಂದ ರಾತ್ರಿಯವರೆಗೆ ಭಕ್ತಾದಿಗಳ ಯಾತ್ರಾಸ್ಥಳ– ಕೋಟೆ ಮೈದಾನದ ವಿಶಾಲವಾದ ಪರಿಮಳ ಮಂಟಪ.

ಪಕ್ಕದಲ್ಲಿದ್ದ ಮಂತ್ರಾಲಯ ಪ್ರದರ್ಶನ ನೋಡಲು ಕರಗದ ಕ್ಯೂ.

ಜಾತಿಮತ ಭೇದವಿಲ್ಲದೆ ಎಲ್ಲ ವರ್ಗದವರನ್ನೂ ಆಕರ್ಷಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳ ತ್ರಿಶತಮಾನೋತ್ಸವದ ದ್ವಿತೀಯ ದಿನದ ಕಾರ್ಯಕ್ರಮ ಜನದಟ್ಟಣೆಯ ಯಾತ್ರಾಸ್ಥಳವಾಗಿ ಪರಿಣಮಿಸಿತು. ವಿಶಾಲವಾದ ಪೆಂಡಾಲ್‌ನಲ್ಲಿ ಸ್ಥಳ ಸಿಕ್ಕದೆ ಹೊರಗೆ ನಿಂತವರ ಸಂಖ್ಯೆ ಅಪಾರವಾಗಿತ್ತು.

ಮತಾಂತರ ನಿಷೇಧ ಕಾಯ್ದೆ ಮೂಲಕ ಧರ್ಮವನ್ನು ಉಳಿಸಿಕೊಳ್ಳುತ್ತೇವೆ ಎನ್ನುವುದು ಹುಸಿ ನಂಬುಗೆ

ಪ್ರೀತಿಯ ಅಪ್ಪುಗೆಗೆ ಕಾಯ್ದೆ ಬೇಡವೇ?

ಅನುಸಂಧಾನ

ರವೀಂದ್ರ ಭಟ್ಟ

ಮೊದಲು ಈ ಮೂರು ಘಟನೆಗಳನ್ನು ನೋಡಿಕೊಂಡು ಬರೋಣ. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಮಿಯಾಪುರ ಗ್ರಾಮದಲ್ಲಿ ಎರಡು ವರ್ಷದ ದಲಿತ ಮಗುವೊಂದು ಆಕಸ್ಮಿಕವಾಗಿ ದೇವಾಲಯ ಪ್ರವೇಶ ಮಾಡಿದ್ದಕ್ಕೆ ಆ ಮಗುವಿನ ಪೋಷಕರಿಗೆ ₹ 25 ಸಾವಿರ ದಂಡ ವಿಧಿಸಲಾಗಿದೆ. ಅಲ್ಲದೆ ದೇವಾಲಯ ಶುದ್ಧ ಮಾಡುವ ಖರ್ಚನ್ನೂ ಭರಿಸಲು ಸೂಚಿಸಲಾಗಿದೆ.

ಅಂದು ಆ ಮಗುವಿನ ಹುಟ್ಟಿದಹಬ್ಬ ಇತ್ತು. ಅದಕ್ಕಾಗಿಯೇ ಮಗುವನ್ನು ದೇವಾಲಯಕ್ಕೆ ಕರೆತರಲಾಗಿತ್ತು. ಆ ಮಗು ದೇವಾಲಯ ಪ್ರವೇಶ ಮಾಡಿದ್ದು 'ಅಪರಾಧ'. ದೇವಾಲಯ 'ಅಶುದ್ಧಿ'ಯಾಯಿತು. ಅದಕ್ಕೆ ದಂಡವೆಂಬ ಬ್ರಹ್ಮಾಸ್ತ್ರ ಪ್ರಯೋಗ. ಇದು ನಡೆದಿದ್ದು ಯಾವುದೋ ಅನಾದಿ ಕಾಲದಲ್ಲಿ ಅಲ್ಲ. 21ನೇ ಶತಮಾನದ ಇದೇ ತಿಂಗಳಿನಲ್ಲಿ.

ಇನ್ನೊಂದು ಘಟನೆ ನಡೆದಿದ್ದು ಇದೇ ವಾರ. ಕರಟಗಿಯಲ್ಲಿ ಲಕ್ಷ್ಮಿ ದೇವಾಲಯವನ್ನು ಪ್ರವೇಶಿಸಿದ ದಲಿತ ಯುವಕನೊಬ್ಬನಿಗೆ ₹ 11 ಸಾವಿರ ದಂಡ ವಿಧಿಸಲಾಗಿದೆ. ಆ ಹಣದಲ್ಲಿ ದೇವಾಲಯ ಶುದ್ಧಿ ಮಾಡಲಾಗಿದೆಯಂತೆ. ಮತ್ತೊಂದು ಘಟನೆ ನಡೆದಿದ್ದು ಕೆಲ ವರ್ಷಗಳ ಹಿಂದೆ. ಆದರೆ ಅಲ್ಲಿನ ಪರಿಸ್ಥಿತಿ ಈಗಲೂ ಸುಧಾರಿಸಿಲ್ಲ.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಒಂದು ಹಳ್ಳಿ. ಆ ಹಳ್ಳಿಯ ಬಡ ಯುವತಿಯನ್ನು ಒಬ್ಬ ಮರುಳು ಮಾಡಿ ಕರೆದುಕೊಂಡು ನಾಪತ್ತೆಯಾದ. ಸುಮಾರು 8 ತಿಂಗಳು ಆಕೆ ಎಲ್ಲಿಗೆ ಹೋದಳು ಎನ್ನುವುದು ಪತ್ತೆಯಾಗಲಿಲ್ಲ. ಮುಂಬೈ ಕೆಂಪುದೀಪದ ಪ್ರದೇಶದಲ್ಲಿ ಪೊಲೀಸರು ನಡೆಸಿದ ದಾಳಿಯಲ್ಲಿ ಅವಳು ಪತ್ತೆಯಾದಳು. ನಂತರ ಆಕೆಯನ್ನು ಊರಿಗೆ ತಂದು ಬಿಡಲಾಯಿತು. ಕಳೆದುಹೋದ ಮಗಳು ಸಿಕ್ಕ ಖುಷಿ ಪೋಷಕರಿಗೆ. ಆದರೆ ಆ ಖುಷಿ ಬಹಳ ದಿನ ಉಳಿಯಲಿಲ್ಲ. ಯಾಕೆಂದರೆ ಆ ಊರಲ್ಲಿ ಒಂದು ಪದ್ಧತಿ ಇದೆ. ಯಾವುದೇ ಯುವತಿ ನಾಪತ್ತೆಯಾಗಿ ಮತ್ತೆ ಊರಿಗೆ ಬಂದರೆ ಊರನ್ನು ಶುದ್ಧ ಮಾಡಬೇಕು. ಆಕೆಯನ್ನು ಶುದ್ಧ ಮಾಡಿದ ಮೇಲೆಯೇ ಮನೆಗೆ ಸೇರಿಸಿಕೊಳ್ಳಬೇಕು. ಅದಕ್ಕೊಂದು ಪಂಚಾಯಿತಿ. ಆ ಪಂಚಾಯಿತಿಯಲ್ಲಿ ಆ ಯುವತಿ ಕುಟುಂಬಕ್ಕೆ ₹ 2 ಸಾವಿರ ದಂಡ ವಿಧಿಸಿ ಊರಿಗೆಲ್ಲಾ ಬಾಡೂಟ ಹಾಕಿಸುವ ಶಿಕ್ಷೆ ನೀಡಲಾಯಿತು. ಬಡತನವನ್ನೇ ಹಾಸಿ ಹೊದ್ದುಕೊಂಡಿದ್ದ ಆ ಕುಟುಂಬ ಇನ್ನೊಂದಿಷ್ಟು ಸಾಲ ಮಾಡಿ ಊರಿಗೆಲ್ಲಾ ಬಾಡೂಟ ಹಾಕಿಸಿ ಶುದ್ಧವಾಯಿತು. ಊರವರ ಮನಸ್ಸು ಶುದ್ಧ ಮಾಡುವುದಕ್ಕೆ ಯಾವ ಗಂಜಳ ತರುವುದು?

ನಮ್ಮ ಹಳ್ಳಿಗಳಲ್ಲಿ ಇಂತಹ ಅಮಾನವೀಯ ಘಟನೆಗಳಿಗೆ ಲೆಕ್ಕವೇ ಇಲ್ಲ. ಅತ್ಯಂತ ಆಧುನಿಕತೆಯ ಸೋಗಿನಲ್ಲಿ ಇರುವ ನಮ್ಮ ಸಮಾಜದ ಮರೆಯಲ್ಲಿ ಈಗಲೂ ಅಸ್ಪೃಶ್ಯತೆ ಎನ್ನುವುದು ಜೀವಂತವಾಗಿದೆ. ಅದು ಚೇಳಿನಂತೆ ಕುಟುಕುತ್ತದೆ. ಹಾವಿನಂತೆ ವಿಷ ಕಾರುತ್ತದೆ. ಆಗಾಗ ಬುಸುಗುಡುತ್ತಲೇ ಇರುತ್ತದೆ. ಮನುಷ್ಯ ಮನುಷ್ಯನನ್ನು ದೂರ ಇಡುವ ಪದ್ಧತಿ ಗಟ್ಟಿಯಾಗಿಯೇ ಉಳಿದುಕೊಂಡಿದೆ.

ದಲಿತರನ್ನು, ಹಿಂದುಳಿದವರನ್ನು, ಅಲ್ಪಸಂಖ್ಯಾತರನ್ನು ಬಾಚಿ ತಬ್ಬಿಕೊಂಡು ಮುಂದುವರಿಯುವ ಮನಸ್ಸು ಇನ್ನೂ ನಮ್ಮ ಸಮಾಜಕ್ಕೆ ಬಂದಿಲ್ಲ. ಈಗಲೂ ಹಳ್ಳಿಗಳಲ್ಲಿ ಕೆರೆಯ ನೀರನ್ನು ಮುಟ್ಟಲು ಬಿಡುವುದಿಲ್ಲ. ದೇವಾಲಯಗಳಿಗೆ ದಲಿತರಿಗೆ ಪ್ರವೇಶವಿಲ್ಲ. ಹೋಟೆಲ್‌ಗಳಲ್ಲಿ ತಟ್ಟೆ- ಲೋಟಗಳನ್ನು ಹೊರಗೆ ಪ್ರತ್ಯೇಕವಾಗಿ ಇಡಲಾಗುತ್ತದೆ. ದಲಿತರಿಗೆ ಕ್ಷೌರ ಮಾಡದೇ ಇರುವ ಸಾವಿರ ಸಾವಿರ ಹಳ್ಳಿಗಳು ಇನ್ನೂ ನಮ್ಮಲ್ಲಿ ಇವೆ. ಆದರೂ ಎಲ್ಲ ಸುಧಾರಣೆ ಯಾಗಿದೆ ಎಂಬ ಹುಸಿ ಸೋಗಿನಲ್ಲಿ ನಾವು ಮುಂದುವರಿಯುತ್ತಿದ್ದೇವೆ. ಸಮ ಸಮಾಜದ ಮಾತುಗಳನ್ನು ಆಡುತ್ತೇವೆ. ನಮ್ಮ ಆತ್ಮವಂಚನೆಗೆ ಮಿತಿಯೇ ಇಲ್ಲ.

ಪರಿಸ್ಥಿತಿ ಹೀಗಿದ್ದರೂ ನಮ್ಮ ವಿಧಾನಮಂಡಲದಲ್ಲಿ ಮತಾಂತರ ನಿಷೇಧ ಕಾಯ್ದೆ ಬಗ್ಗೆ ಚರ್ಚೆಗಳು ನಡೆಯುತ್ತವೆ. ನಮ್ಮ ಗೃಹ ಸಚಿವರು ಮತಾಂತರ ತಡೆಗೆ ಅತ್ಯಂತ ಕಠಿಣ ಕಾನೂನು ತರುವುದಾಗಿ ಹೇಳುತ್ತಾರೆ. ಆಡಳಿತ ಪಕ್ಷದ ಬಹುತೇಕ ನಾಯಕರು ಇದಕ್ಕೆ ಬೆಂಬಲ ಸೂಚಿಸುತ್ತಾರೆ. ಮತಾಂತರ ಎನ್ನುವುದು ಒಂದು ಪಿಡುಗಾಗಿದ್ದು ಅದನ್ನು ಸಂಪೂರ್ಣವಾಗಿ ತೊಲಗಿಸುವುದು ನಮ್ಮ ಗುರಿ ಎಂದು ವೀರಾವೇಶದ ಮಾತನಾಡುತ್ತಾರೆ. ಶಾಸಕರೊಬ್ಬರ ತಾಯಿಯೇ ಮತಾಂತರ ಆಗಿದ್ದಾಳೆ ಎಂದರೆ ಮತಾಂತರದ ಪಿಡುಗು ಎಷ್ಟು ಜೋರಾಗಿದೆ ನೋಡಿ ಎಂದು ಅಬ್ಬರಿಸುತ್ತಾರೆ. ಶಾಸಕರು ಕೂಡಾ ಕಣ್ಣೀರು ಹಾಕುತ್ತಾರೆ. ಅವರ ಕಣ್ಣೀರ ಧಾರೆಯಲ್ಲಿ ಇಡೀ ಸದನ ಮುಳುಗಿ ಹೋಗುತ್ತದೆ. ಆದರೆ ನಮ್ಮ ದಲಿತರು, ಹಿಂದುಳಿದವರು ಶತಮಾನಗಳಿಂದ ಹರಿಸಿದ ಕಣ್ಣೀರ ಕೋಡಿಗೆ ಬೆಲೆಯೇ ಇಲ್ಲದಂತಾಗಿದೆ. ಅವರ ಕಣ್ಣೀರ ಹೊಳೆ ಇವರ ಕಣ್ಣಿಗೆ ಕಾಣುವುದೇ ಇಲ್ಲ.

ಮತಾಂತರ ನಿಷೇಧ ಕಾಯ್ದೆಯ ಮೂಲಕ ಒಂದು ಸಮಾಜವನ್ನು, ಒಂದು ಧರ್ಮವನ್ನು ಉಳಿಸಿಕೊಳ್ಳುತ್ತೇವೆ ಎನ್ನುವುದು ಹುಸಿ ನಂಬುಗೆ. ಬಾಣಗಳಿಂದ, ಅಸ್ತ್ರಗಳಿಂದ, ಕಾಯ್ದೆಗಳಿಂದ, ಕಾನೂನು ಕಟ್ಟಳೆಗಳಿಂದ ಬದಲಾವಣೆ ತರುತ್ತೇನೆ ಎಂದು ಹೊರಟರೆ ಗೆಲುವು ಕಷ್ಟ. ಮೊದಲು ನಾವು ಕಣ್ಣಿಗೆ ಕಟ್ಟಿಕೊಂಡ ಬಟ್ಟೆಯನ್ನು ಬಿಚ್ಚಬೇಕು.

'ನಾನು ಹಿಂದೂವಾಗಿ ಹುಟ್ಟಿದ್ದೆ. ಆದರೆ ಸಾಯುವಾಗ ಹಿಂದೂವಾಗಿ ಸಾಯುವುದಿಲ್ಲ' ಎಂದು ಘೋಷಿಸಿದ ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದರು. ನಮ್ಮ ದೇಶದಲ್ಲಿ ಕೋಟ್ಯಂತರ ಜನ ಅವರನ್ನೇ ಅನುಸರಿಸಿದರು. ಆದರೂ ನಮಗೆ ಅವರ ಆಂತರ್ಯ ಅರ್ಥವಾಗುವುದಿಲ್ಲ ಎಂದರೆ ನಮ್ಮ ಹೃದಯದೊಳಗೆ ಬಿತ್ತಿದ ಬೀಜ ಎಷ್ಟು ಗಟ್ಟಿ ನೋಡಿ. ಆಧುನಿಕ ಕಾಲದಲ್ಲಿಯೂ ನಮ್ಮ ಹೃದಯ ಮಿಡಿಯುತ್ತಿಲ್ಲ.

ಬಲವಂತದ ಮತಾಂತರಕ್ಕೆ ಕಡಿವಾಣ ಬೇಕು ನಿಜ. ಹಿಂದೆಲ್ಲಾ ಕೋವಿಯ ನಳಿಕೆಯನ್ನು ಕತ್ತಿನಪಟ್ಟಿಯ ಮೇಲೆ ಇಟ್ಟು ಮತಾಂತರ ನಡೆಸಲಾಗಿದೆ. ಭಯದ ವಾತಾವರಣ ಸೃಷ್ಟಿಸಿ ಮತಾಂತರ ಮಾಡಿದ್ದೂ ನಿಜ. ಅದನ್ನೇ ಮುಂದಿಟ್ಟು ಈಗ ಕಾನೂನು ಮಾಡಿಬಿಟ್ಟರೆ ಎಲ್ಲವೂ ಸರಿಯಾಗುವುದಿಲ್ಲ. ನಮ್ಮ ಹುಣ್ಣುಗಳಿಗೆ ಮುಲಾಮು ಹುಡುಕಬೇಕಲ್ಲ. ಹುಣ್ಣನ್ನು ಮುಚ್ಚಿ ಬ್ಯಾಂಡೇಜ್ ಮಾಡಿದರೆ ದೇಹ ಕೊಳೆಯುತ್ತದೆಯೇ ವಿನಾ ರೋಗ ವಾಸಿಯಾಗುವುದಿಲ್ಲ. ಪ್ರೀತಿಯನ್ನು, ಅಂತಃಕರಣದ ಸೇವೆಯನ್ನು, ಸಮ ಸಮಾಜದ ಕನಸನ್ನು ಬಲವಂತ ಎಂದು ಹೇಳಲು ಆಗುವುದಿಲ್ಲ. ಅದಕ್ಕೆ ಕಡಿವಾಣ ಹಾಕಲು ಸಾಧ್ಯವೂ ಇಲ್ಲ.

ನಮ್ಮವರನ್ನು ನಮ್ಮಲ್ಲಿಯೇ ಉಳಿಸಿಕೊಳ್ಳಲು ನಿರ್ವ್ಯಾಜ ಪ್ರೀತಿ ಬೇಕು. ಹೃದಯಾಂತರಾಳದ ಸೇವೆ ನೀಡಬೇಕು. ಸಂತೋಷದಿಂದ, ಸಂತೃಪ್ತಿಯಿಂದ ಬದುಕುವ ವಾತಾವರಣವನ್ನು ಸೃಷ್ಟಿಸಬೇಕು. ಮೇಲು ಕೀಳು ಎಂಬ ಅಸಮಾನತೆಯನ್ನು ದೂರ ಮಾಡಬೇಕು. ಈಗ ಎಲ್ಲಿದೆ ಅಸ್ಪೃಶ್ಯತೆ? ಎಲ್ಲರನ್ನೂ ಸಮಾನವಾಗಿಯೇ ನೋಡಲಾಗುತ್ತಿದೆಯಲ್ಲ ಎಂದು ಬಹಿರಂಗವಾಗಿ ಒಪ್ಪಿಕೊಳ್ಳುವ ಮೊದಲು ಅಂತರಂಗದಲ್ಲಿಯೂ ನಾವು ಬದಲಾಗಬೇಕು. ನಮ್ಮ ಮನಸ್ಸಿನ ಆಳವನ್ನು ಹೊಕ್ಕು ನೋಡಿಕೊಳ್ಳಬೇಕು. ಪ್ರಶ್ನೆ ಮಾಡಿಕೊಳ್ಳಬೇಕು. ಯಾವ ಪ್ರಶ್ನೆಗೂ ಆಕ್ಷೇಪಕ್ಕೂ ಅವಕಾಶವಿಲ್ಲದಂತೆ ಸಕಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಅವರನ್ನು ಮನುಷ್ಯರಂತೆ ಕಾಣಬೇಕು.

ಒಂದು ಪ್ರೀತಿಯ ಅಪ್ಪುಗೆಗೆ, ಒಂದು ಸ್ನೇಹದ ಮುಗುಳ್ನಗೆಗೆ, ಒಂದು ವಿಶ್ವಾಸದ ಹಸ್ತಲಾಘವಕ್ಕೆ ಕರಗದ ದಲಿತರಾರೂ ಇಲ್ಲಿ ಇಲ್ಲ. ಅವರು ಕೇಳುತ್ತಿರುವುದೂ ಅದನ್ನೆ. ಒಂದು ಪ್ರೀತಿಯ ಅಪ್ಪುಗೆಯನ್ನು ನೀಡಿದರೆ, ವಿಶ್ವಾಸದ ಸಲುಗೆಯನ್ನು ನೀಡಿದರೆ ಅವರು ಧರ್ಮವನ್ನು ಬಿಟ್ಟು ಇನ್ನೊಂದು ಧರ್ಮಕ್ಕೆ ಹೋಗುವುದಿಲ್ಲ. ಮೊದಲು ಮೇಲಿದ್ದವರು ಬಾಗಬೇಕು, ಕೈ ಚಾಚಬೇಕು, ಬಾಗಿ ತಬ್ಬಿಕೊಳ್ಳಬೇಕು ಅಷ್ಟೆ. ಇಲ್ಲವಾದರೆ ಮುಂದೊಂದು ದಿನ ಪ್ರೀತಿಯ ಅಪ್ಪುಗೆಗೂ ಕಾಯ್ದೆ ತರಬೇಕಾದೀತು.

ಅಸ್ಪೃಶ್ಯತೆಯ ಕೂಪದಲ್ಲಿ ಸಿಲುಕಿದವರು ಕೇಳುತ್ತಿರುವುದು ಕಾಯ್ದೆಯನ್ನಲ್ಲ. ಅವರ ಕೋಪ ತಾಪ ಆಕ್ರಂದನ ಎಲ್ಲ ಇರುವುದು ಪ್ರೀತಿಗಾಗಿ, ಸಮಾನತೆಗಾಗಿ, ಮಾನವೀಯ ಸ್ಪರ್ಶಕ್ಕಾಗಿ ಅಷ್ಟೆ. ಅದನ್ನು ಕಾಯ್ದೆಯಿಂದ ಮಾಡಲಾಗದು.



ಚುರುಮುರಿ

ರಾಜಕೀಯ ಸನ್ಯಾಸ

• ಸುಮಂಗಲಾ

ಬೆಕ್ಕಣ್ಣ ಭಲೇ ಖುಷಿಯಲ್ಲಿತ್ತು. 'ಏ... ನೋಡಿಲ್ಲಿ... ಯೆಡ್ಯೂರಜ್ಜಾರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ಬಂದೈತಿ... ಸಿದ್ರಾಮಣ್ಣ, ದೇಶಪಾಂಡೆ ಅಂಕಲ್ಲು ವಿರೋಧ ಪಕ್ಷದಾಗೆ ಇದ್ರೂ ನಮ್ಮ ಅಜ್ಜಾರ ಸೇವೆ ಒಪ್ಪಿಕೊಂಡು, ಪ್ರಶಸ್ತಿ ಕೊಟ್ಟಾರೆ. ಈಗರೆ ಒಪ್ಪೀಯಿಲ್ಲೋ ಅಜ್ಜಾರು ಖರೇ ಭಯಂಕರ ಜನಸೇವಾ ಮಾಡ್ಯಾರಂತ' ತನಗೇ ಪ್ರಶಸ್ತಿ ಬಂದಂತೆ ಬೀಗುತ್ತ ಉದ್ಗರಿಸಿತು.

'ಸೇವೆ ಒಪ್ಪಿಕೊಳ್ಳೂದು ಅಂತಲ್ಲ... ಪ್ರಶಸ್ತಿಗೆ ಹದಿನೈದು ಮಾನದಂಡ ಇಟ್ಟಿದ್ದರಲ್ಲ, ಅದೆಲ್ಲದರಾಗೆ ತೂಗಿದ್ದು ಇವರೊಬ್ಬರೇ ಅಂತ, ಅದಕ್ಕೇ ಕೊಟ್ಟಾರ. ಯಾರಿಗ್ಗೊತ್ತು, ಇನ್ ಮತ್ತ ಚುನಾವಣೆಗೆ ನಿಲ್ಲೂದು ಬಿಟ್ಟು, ಅತ್ಯುತ್ತಮ ಶಾಸಕ ಪ್ರಶಸ್ತಿ ತಗಂಡು ಮನ್ಯಾಗ ಕುಂದರ್ರಿ ಅಂತ ಕೊಟ್ಟಾರೇನೋ. ಅದ್ಸರಿ, ಅತ್ಯುತ್ತಮ ಮುಖ್ಯಮಂತ್ರಿ ಅಂತ ಪ್ರಶಸ್ತಿ ಕೊಡೂದಿದ್ದರೆ ಯಾರಿಗೆ ಕೊಡಬೌದು?' ಸುಮ್ಮನೇ ಒಂದು ಪ್ರಶ್ನೆ ಒಗೆದೆ.

'ಈಗಿನವರಲ್ಲಿ ಯಾರೂ ಸ್ಪರ್ಧೆ ಹತ್ರಾನೂ ಬರಂಗಿಲ್ಲ. ಕೊಟ್ಟರೆ ಕೆಂಗಲ್ ಹನುಮಂತಯ್ಯ ಅವರಿಗೋ ಅರಸು ಅವರಿಗೋ ಮರಣೋತ್ತರವಾಗಿ ಕೊಡಬೇಕಷ್ಟೆ' ಎಂದು ಅಪರೂಪಕ್ಕೊಮ್ಮೆ ಶಾಣೇತನದ ಮಾತಾಡಿದ ಬೆಕ್ಕಣ್ಣ ಮತ್ತೆ ಪೇಪರಿನಲ್ಲಿ ಮುಖ ಹುದುಗಿಸಿತು.

'ಕುಮಾರಣ್ಣನೂ ತಾತಾ ಆಗೀನಿ ಅಂತ ಖುಷಿಯಿಂದ ಹೇಳ್ಯಾರ. ಮರಿಮೊಮ್ಮಗನ ಎಂಟ್ರಿ ಆಯಿತಂತ ದೇಗೌಡಜ್ಜಾರು ರಾಜಕೀಯ ಸನ್ಯಾಸ ತಗೋತಾರೇನೋ ಇನ್ನು' ಎಂದಿತು.

'ಹಂಗೆಲ್ಲ ರಾಜಕೀಯ ಸನ್ಯಾಸ ತಗೊಳಾಕ ಇದೇನು ಅಮೆರಿಕ, ಇಂಗ್ಲಂಡು ಅಂತ ಮಾಡೀಯೇನು? ಎಲ್ಲಾರಿಂದ ಭಲೇ ಅನ್ನಿಸ್ಕೆಂಡು, ನೊಬೆಲ್ ಶಾಂತಿ ಪ್ರಶಸ್ತಿ ತಗೊಂಡ ಬರಾಕ್ ಒಬಾಮ ಸೈತ ಪ್ರೆಸಿಡೆಂಟ್ ಕುರ್ಚಿಯಿಂದ ಕೆಳಗಿಳಿದ ಕೂಡಲೇ ಸಾಮಾನ್ಯ ಮನುಷ್ಯನ ಹಂಗ ಅದಾನ, ಪುಸ್ತಕ ಬರಿಲಾಕ ಹತ್ಯಾನ' ಎಂದೆ.

'ನೀ ಹಂಗ ಮನಸ್ಸಿಗೆ ಬಂದಂಗ ಬ್ಯಾರೆಯವ್ರಿಗೆಲ್ಲ ನಮ್ಮೋರಿನ್ನ ಹೋಲಿಕಿ ಮಾಡಬ್ಯಾಡ. ಇಲ್ಲಿ ಮಠದಾಗೆ ಇರೂ ಸನ್ಯಾಸಿಗಳೇ ಕೊನೆಯುಸಿರಿನವರೆಗೂ ರಾಜಕೀಯ ಸನ್ಯಾಸ ತಗೊಳಂಗಿಲ್ಲ, ಇನ್ನ್ ರಾಜಕಾರಣಿಗಳು ಹೆಂಗ ಹಂತಾ ಸನ್ಯಾಸ ತೊಗಳಾಕ ಆಗತೈತಿ...' ಎಂದು ಕೊಂಕುನಗೆ ಬೀರಿತು!

ಸಂಗತ

ಹಾಸ್ಯಪ್ರಜ್ಞೆ ಮತ್ತು ಸೃಜನಶೀಲ ಚಿಂತನೆ

'ನಾಗರಿಕ ಮನುಷ್ಯ'ನಾಗಿಯೂ ಮುಗ್ಧತೆ ಉಳಿಸಿಕೊಳ್ಳುವುದು ಹೇಗೆ?

• ಡಾ. ಜ್ಯೋತಿ

ಇಂಗ್ಲಿಷ್ ಕವಿ ವರ್ಡ್ಸ್‌ವರ್ಥ್ ಹೇಳುವಂತೆ, 'ಮಗು ಮನುಷ್ಯನ ತಂದೆ'. ಅಂದರೆ, ಮಗುವಿನ ನಿಷ್ಕಳಂಕ ಮುಗ್ಧತನದಲ್ಲಿಯೇ ನಿಜವಾದ ಮನುಷ್ಯತ್ವದ ಎಲ್ಲಾ ಅಂಶಗಳು ಅಡಕವಾಗಿರುತ್ತವೆ. ಅಲ್ಲಿ ಜಾತಿ, ಧರ್ಮ, ಲಿಂಗದಂತಹ ಸಮಾಜನಿರ್ಮಿತ ತಾರತಮ್ಯಗಳ ಅರಿವು ಇರುವುದಿಲ್ಲ. ಹಾಗಾಗಿ, ಸಹಜವಾದ ವಿಶ್ವಮಾನವ ದೃಷ್ಟಿಕೋನವಿರುತ್ತದೆ. ಆದರೆ, ಜೀವನದ ದೊಡ್ಡ ದುರಂತವೆಂದರೆ, ಮಗು ಬೆಳೆಯುತ್ತಾ ತನ್ನ ಮುಗ್ಧತೆಯನ್ನು ಕಳೆದುಕೊಂಡು 'ನಾಗರಿಕ ಮನುಷ್ಯ'ನಾಗುವುದು. ಅಂದರೆ, ತನ್ನ ಕಾಲಘಟ್ಟದ ಪ್ರಪಂಚದಲ್ಲಿರುವ ಅಪಭ್ರಂಶಗಳಿಗೆ ಇನ್ನಷ್ಟು ಹೊಸತನ್ನು ಸೇರಿಸಿ, ಚೆನ್ನಾಗಿ ವ್ಯವಹರಿಸುವುದನ್ನು ಕಲಿಯುವುದು.

ಹಾಗಾಗಿಯೇ, ತತ್ವಶಾಸ್ತ್ರಜ್ಞ ನೀಷೆ ಹೇಳುವಂತೆ, ಮನುಷ್ಯನ ನಿಜವಾದ ಪ್ರಬುದ್ಧತೆ, ತಾನು ಬಾಲ್ಯದಲ್ಲಿ ಕಳೆದುಕೊಂಡ ಮುಗ್ಧತೆಯನ್ನು ಮರಳಿ ಪಡೆಯುವುದರಲ್ಲಿದೆ. ಇದು ಫಲಿಸಬೇಕೆಂದರೆ, ಮನುಷ್ಯಜೀವನದ ಕುರಿತು ಪರಂಪರಾಗತವಾಗಿ ಸಮಾಜ ಕಟ್ಟಿ ಬೆಳೆಸಿರುವ ಭ್ರಮೆಗಳನ್ನು ಪ್ರಶ್ನಿಸಿ, ಸ್ವವಿಮರ್ಶೆಯ ಮೂಲಕ ಕಳಚಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಹಾಗಿದ್ದಲ್ಲಿ ಈ ಭ್ರಮೆಗಳು ಯಾವುವು? ಇವುಗಳಿಂದ ಮುಕ್ತಿ ಪಡೆದ ಮನುಷ್ಯಜೀವನ ಹೇಗಿರುತ್ತದೆ ಎನ್ನುವುದಕ್ಕೆ ಉತ್ತಮ ನಿದರ್ಶನವೆಂದರೆ, ಪ್ರಪಂಚದ ಮೊದಲ ಆಧುನಿಕ ಕಾದಂಬರಿಯೆಂದು ಹೆಗ್ಗಳಿಕೆ ಗಳಿಸಿರುವ, ಸ್ಪ್ಯಾನಿಷ್ ಕಾದಂಬರಿಕಾರ ಸರ್ವಾಂಟಿಸ್ ಬರೆದಿರುವ 'ಡಾನ್ ಕಿಹೋತ್ತೆ'. ಈ ಬೃಹತ್ ಕಾದಂಬರಿಯನ್ನು ಎರಡು ಭಾಗಗಳಲ್ಲಿ ಪ್ರಕಟಿಸಿದ ಸರ್ವಾಂಟಿಸ್ (1605 ಮತ್ತು 1615), ಮಾಡಿದ ಸಾಲ ತೀರಿಸಲಾಗದೆ ಜೈಲು ಸೇರಿದ್ದಾಗ ಅದರ ಮೊದಲ ಭಾಗವನ್ನು ಬರೆದಿದ್ದ. ಬಹುಶಃ, ಈ ದೈಹಿಕ ಬಂಧನವೇ ಸಾಮಾಜಿಕ ಕಟ್ಟುಕಟ್ಟಲೆಯ ಬಂಧನಗಳಿಂದ ಅವನ ಮನಸ್ಸನ್ನು ಬಿಡುಗಡೆಗೊಳಿಸಲು ಸಹಾಯ ಮಾಡಿತು.

ಈ ಮೂಲಕ, ಸಾಹಿತ್ಯ ಕೃತಿಯೊಂದರಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಮೊದಲ ಬಾರಿಗೆ ನಾಯಕನಾದ. ಅಲ್ಲಿಯವರೆಗೆ, ಹೀರೊಗಳಾಗಿ ವಿಜೃಂಭಿಸಿದ್ದ ಕಾಲ್ಪನಿಕ ಯೋಧರಂತೆ, ತಾನು ಕೂಡ ಹೀರೊ ಆಗಲು ಶಕ್ತಿ ಮೀರಿ ಪ್ರಯತ್ನಿಸಿದ, ಅದೂ ಯಾವುದೇ ವೈಭವದ ಪರಿಕರಗಳಿಲ್ಲದೆ. ಅಂದರೆ, ಒಬ್ಬ ಸಾಮಾನ್ಯ ಮನುಷ್ಯ ಕೂಡ, ತನ್ನ ದೈಹಿಕ, ಆರ್ಥಿಕ ಹಾಗೂ ಸಾಮಾಜಿಕ ದೌರ್ಬಲ್ಯಗಳನ್ನು ಮೀರಿ, ಮುಗ್ಧತೆಯಿಂದ ಒಂದು ಸುಂದರ ಕಾಲ್ಪನಿಕ ಜಗತ್ತನ್ನು ಸೃಷ್ಟಿಸಿ, ಅಲ್ಲಿ ಖುಷಿಯಾಗಿ ಇರಬಹುದೆಂದು ಈ ಕಾದಂಬರಿ ಸೂಚಿಸುತ್ತದೆ.

ಈ ಕಾದಂಬರಿಯ ನಾಯಕ, ಡಾನ್ ಕಿಹೋತ್ತೆ ಒಬ್ಬ ಸಾಮಾನ್ಯ ಮನುಷ್ಯ. ಅವನು ತನ್ನನ್ನೇ ಹೀರೊ ಎಂದು ಭ್ರಮಿಸಿ, ಅದರಂತೆ ಬದುಕಲು ಪ್ರಯತ್ನಿಸುತ್ತಾನೆ. ತನ್ನ ಸಮಕಾಲೀನ ಪ್ರಪಂಚದ ದೃಷ್ಟಿಕೋನಕ್ಕಿಂತ ಭಿನ್ನವಾಗಿ ಬದುಕು ಕಟ್ಟಿಕೊಳ್ಳುತ್ತಾನೆ. ಅವನ ಆಲೋಚನೆಯಲ್ಲಿ ದೃಢತೆಯಿದೆ, ಬದ್ಧತೆಯಿದೆ ಹಾಗೂ ನಿಯತ್ತಿದೆ. ಅವನು, ತನ್ನ ಜೀವನದ ಪ್ರತೀ ಕ್ಷಣವನ್ನೂ ಸವಾಲಾಗಿ ಸ್ವೀಕರಿಸುತ್ತಾನೆ ಹಾಗೂ ಉತ್ಸಾಹದಿಂದ ಬದುಕುತ್ತಾನೆ. ಮಾಡುವ ಕೆಲಸವನ್ನು ಹೃದಯಪೂರ್ವಕವಾಗಿ ಮಾಡಬೇಕೆನ್ನುವ ಅವನ ಪ್ರಕಾರ, ಪ್ರೀತಿಯು ಹೃದಯದ ಭೇಷರತ್ ಅಭಿವ್ಯಕ್ತಿ. ಇಲ್ಲಿ ದ್ವೇಷಕ್ಕೆ ಅವಕಾಶವಿಲ್ಲ.

ತನ್ನನ್ನು ಯೋಧನೆಂದು ಭ್ರಮಿಸುವ ಡಾನ್, ನೊಂದ ಜನರನ್ನು ರಕ್ಷಿಸುವುದು ತನ್ನ ಜವಾಬ್ದಾರಿಯೆಂದು ತಿಳಿಯುತ್ತಾನೆ. ಅವನ ಈ ಸಾಹಸ ಪಯಣಕ್ಕೆ ಜೊತೆಗಾರನಾಗಲು ತನ್ನ ಸುತ್ತಲಿನ ಪ್ರಪಂಚದ ಸಾಮಾನ್ಯವನ್ನೇ ಅಸಾಮಾನ್ಯಗೊಳಿಸುತ್ತಾನೆ. ಹಾಗಾಗಿ, ಅವನ ಸಣಕಲು ಕುದುರೆಯು ಪ್ರಯಾಣಯೋಗ್ಯ ದಷ್ಟಪುಷ್ಟ ಕುದುರೆಯಾಗಿ ಕಾಣಿಸುತ್ತದೆ. ಊರಿನ ಬಡ ರೈತ, ಸೈನಿಕನ ಸಹಾಯಕನಂತೆ ಕಾಣಿಸುತ್ತಾನೆ. ಹಳ್ಳಿಯ ಸಾಮಾನ್ಯ ಹುಡುಗಿ, ತಾನು ರಕ್ಷಿಸಬೇಕಾದ ರಾಜಕುಮಾರಿಯಂತೆ ಕಾಣಿಸುತ್ತಾಳೆ. ಗಾಳಿಯಂತ್ರಗಳು, ತಾನು ಸೋಲಿಸಬೇಕಾದ ದೈತ್ಯರಂತೆ ಕಾಣಿಸುತ್ತವೆ. ಹೀಗೆ, ಕಾದಂಬರಿಯುದ್ದಕ್ಕೂ ಅವನ ತುಡಿತವೆಂದರೆ, ಪ್ರಪಂಚದ ಸಮಸ್ಯೆಗಳನ್ನು ಪರಿಹರಿಸಲು ಶಕ್ತಿಮೀರಿ ಪ್ರಯತ್ನಿಸುವುದು ಹಾಗೂ ಈ ಮೂಲಕ ಜಗತ್ತನ್ನು ಸುಂದರಗೊಳಿಸುವುದು.

ಇದಕ್ಕೆ ಹೋಲಿಸಿದರೆ, ನಾವಿಂದು ವಾಸ್ತವ ಜಗತ್ತಿನ ಅತಿಯಾದ ನಿರೀಕ್ಷೆಗಳು ಹಾಗೂ ಯಶಸ್ಸನ್ನು ಹೇಗಾದರೂ ಸಾಧಿಸಬೇಕೆಂಬ ಒತ್ತಡದ ನಡುವೆ ಬಾಳುತ್ತಿದ್ದೇವೆ. ವಿಸ್ಮಯವೆಂದರೆ, ಡಾನ್ ಇದ್ಯಾವುದರ ಗೋಚರವಿಲ್ಲದೆ, ತನ್ನ ಕನಸಿನ ಪ್ರಪಂಚದಲ್ಲಿ, ವೈಫಲ್ಯಗಳ ಮೇಲೆ ವೈಫಲ್ಯವನ್ನು ಎದುರಿಸಿದರೂ ಕುಗ್ಗದೆ, ಮರಳಿ ಯತ್ನ ಮಾಡುತ್ತಾ ತನ್ನ ಸೃಜನಶೀಲ ಚಿಂತನೆಯೊಂದಿಗೆ ತನ್ನದೇ ಸುಂದರ ಜಗತ್ತನ್ನು ಸೃಷ್ಟಿಸಿದ.

ವಾಸ್ತವವಾದಿಗಳಾದ ನಮಗೆ, ಡಾನ್ ನಗು ತರಿಸುವ ಹುಚ್ಚನಂತೆ ಕಾಣಿಸುತ್ತಾನೆ. ಅವನ ನಡವಳಿಕೆ ಅಪಹಾಸ್ಯವಾಗಿ ಕಾಣಿಸುತ್ತದೆ. ಯಾಕೆಂದರೆ, ಪ್ರಪಂಚವನ್ನು ನಾವು ಕಾಣುವ ರೀತಿ ಹಾಗೂ ಅವನ ದೃಷ್ಟಿಕೋನ ಭಿನ್ನವಾಗಿವೆ. ಆದರೂ ಅವನ ಬದ್ಧತೆಯ ಬಗ್ಗೆ ನಮಗೆ ಗೌರವ ಮೂಡುತ್ತದೆ. ಹಲವಾರು ವಿಮರ್ಶಕರು ಕಂಡುಕೊಂಡಂತೆ, ಈ ಕಾದಂಬರಿಯು ಮನುಷ್ಯ ಜೀವನಕ್ಕೆ ಒಂದು ಕೈಪಿಡಿ ಹಾಗೂ ಕನ್ನಡಿಯಂತೆ. ಯಾಕೆಂದರೆ, ನಮ್ಮ ಕಲ್ಪನೆಯೇ ನಮ್ಮನ್ನು ವಾಸ್ತವ ಜಗತ್ತಿನ ಜಂಜಾಟಗಳು ಹಾಗೂ ಅಸಂಬದ್ಧ ನಿರೀಕ್ಷೆಗಳಿಂದ ಮುಕ್ತಗೊಳಿಸುವುದು. ಈ ರೀತಿ, ಮುಗ್ಧತೆ ಹಾಗೂ ಹಾಸ್ಯಪ್ರಜ್ಞೆಯನ್ನು ನಿರಂತರವಾಗಿ ಉಳಿಸಿಕೊಳ್ಳುವುದು. 'ಒಂದು ವೇಳೆ ನನಗೆ ಹಾಸ್ಯಪ್ರಜ್ಞೆ ಇಲ್ಲದಿದ್ದಲ್ಲಿ, ನಾನೆಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ' ಎಂದು ಗಾಂಧೀಜಿ ಹೇಳಿದ್ದಾರೆ. ಹಾಸ್ಯಪ್ರಜ್ಞೆಗೆ ಇನ್ನೊಂದು ಹೆಸರು, ಮುಗ್ಧತೆಯನ್ನು ಹಾಗೆಯೇ ಉಳಿಸಿಕೊಂಡ ಡಾನ್ ಕಿಹೋತ್ತೆ.

ಅದಕ್ಕಾಗಿಯೇ ಕುವೆಂಪು ಹೇಳಿರುವುದು, ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ...

ವಾಚಕರ ವಾಣಿ

ಸಾಹಿತ್ಯಾಸಕ್ತ ಸಂಘಟನೆಗಳು ಸಹಕರಿಸಲಿ

ಶತಮಾನ ದಾಟಿದ ಈ ನಾಡಿನ ಭಾಷೆಯ ಪ್ರತೀಕದ ಸಂಕೇತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವವನ್ನು ಹೆಚ್ಚಿಸಲು ಈಗಿನ ಆಡಳಿತಾಧಿಕಾರಿಗಳು ಮುತುವರ್ಜಿ ವಹಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ರಾಜ್ಯದಲ್ಲಿ ಇರುವ ನೂರಾರು ಸಾಂಸ್ಕೃತಿಕ ಹಾಗೂ ಸಾಹಿತ್ಯ ಸಂಘಟನೆಗಳ ಮಾತೃಸಂಸ್ಥೆ ಇದು. ರಾಜ್ಯದ ಜನಸಂಖ್ಯೆಯ ಅರ್ಧದಷ್ಟು ಮಂದಿ ಪರಿಷತ್ತಿನ ಸದಸ್ಯರಾದರೂ ಸಂಸ್ಥೆಯು ಯಾವುದೇ ಸಮ್ಮೇಳನಕ್ಕೆ ಸರ್ಕಾರದ ಮುಂದೆ ಕೈಯೊಡ್ಡುವ ಪ್ರಸಂಗ ಬರಲಾರದು. ಇದನ್ನು ಮನಗಂಡು ಆಡಳಿತಾಧಿಕಾರಿಗಳು ಸದಸ್ಯತ್ವ ನೋಂದಣಿಯನ್ನು ಹೆಚ್ಚಿಸಲು ಅಂತರ್ಜಾಲದಲ್ಲಿ ಅರ್ಜಿಯ ಫಾರಂ ದೊರಕುವಂತೆ ಮಾಡಿದ್ದಾರೆ.

ದೇಶ-ವಿದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ತಾಂತ್ರಿಕತೆಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದ ಕೌಶಲವನ್ನು ಪರಿಷತ್ತು ಬಳಸಿಕೊಂಡು, ಪರಿಷತ್ತಿನ ಅಂತರ್ಜಾಲದ ಮುಖಪುಟದ ವಿನ್ಯಾಸವನ್ನು ಇನ್ನೂ ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸಲಿ. ನೂತನ ಸದಸ್ಯತ್ವ ಪಡೆಯುವವರು ನೇರವಾಗಿ ಪರಿಷತ್ತಿನ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲು ಅನುವಾಗುವ ರೀತಿಯಲ್ಲಿ ನೋಡಿಕೊಳ್ಳಬೇಕು. ಪರಿಷತ್ತಿನ ಇತಿಹಾಸ, ಪ್ರಸ್ತುತ ವಿದ್ಯಮಾನಗಳು, ಪರಿಷತ್ತು ನಡೆಸುವ ಕಾರ್ಯಕ್ರಮಗಳು, ಪರಿಷತ್ತಿನ ಅಂಗರಚನೆ, ಸದಸ್ಯರ ವಿವರದಂತಹ ಮಾಹಿತಿಗಳು ಸಾರ್ವಜನಿಕರಿಗೆ ಸುಲಭವಾಗಿ ದೊರಕುವಂತೆ ಮಾಡಬೇಕು. ಈ ದಿಸೆಯಲ್ಲಿ ರಾಜ್ಯದಲ್ಲಿ ಇರುವ ಸಾಹಿತ್ಯಾಸಕ್ತ ಸಂಘಟನೆಗಳು ಪರಿಷತ್ತಿನೊಂದಿಗೆ ಸಹಕರಿಸಲಿ.

ಗಣಪತಿ ನಾಯ್ಕ್, ಕಾನಗೋಡ

ಕಾನೂನು ಪದಕೋಶ: ಸಕಾಲಿಕ ಸಲಹೆ

ಕನ್ನಡ ಭಾಷೆಯಲ್ಲಿ ಕಾನೂನು ಶಿಕ್ಷಣ ಮತ್ತು ಕಾನೂನಿಗೆ ಸಂಬಂಧಿಸಿದ ಬೃಹತ್ ನಿಘಂಟು ರಚನೆಯ ಅಗತ್ಯವನ್ನು ಪ್ರತಿಪಾದಿಸಿದ ಜಿನದತ್ತ ದೇಸಾಯಿ ಅವರ ಲೇಖನ (ಸಂಗತ, ಸೆ. 21) ಹಾಗೂ ಎಚ್.ಬಿ.ಪ್ರಭಾಕರ ಶಾಸ್ತ್ರಿ ಅವರ ಪತ್ರವು (ವಾ.ವಾ., ಸೆ. 25) ಎಂದೋ ಆಗಬೇಕಾಗಿದ್ದ ಸಾಮಾಜಿಕ ಅಗತ್ಯದ ಕಾರ್ಯಯೋಜನೆಯೊಂದರ ಬಗ್ಗೆ ಸೂಕ್ತ ಚಿಂತನೆಯನ್ನು ಮಂಡಿಸಿವೆ. ಕಾನೂನು ನಿಘಂಟು 2003ರಲ್ಲಿ ಕನ್ನಡಕ್ಕೆ ತರ್ಜುಮೆಗೊಂಡು 2019ರಲ್ಲಿ ನವೀಕರಣಕ್ಕೊಳಪಟ್ಟು 'ಕಾನೂನು ಪದಕೋಶ'ವಾಗಿ, ಈಚಿನ ಪ್ರಕಟಣೆಯು (ಕೇಂದ್ರದ 15 ನಿಯಮಗಳ ಪ್ರತ್ಯೇಕ ಕನ್ನಡ ಪುಸ್ತಕದೊಡನೆ) ಇದೇ 21ರಂದು ಬಿಡುಗಡೆಗೊಂಡಿದೆಯಷ್ಟೆ.

ಇದಲ್ಲದೆ, ಕನ್ನಡ ಅಭಿವೃದ್ಧಿ ನಿರ್ದೇಶನಾಲಯವು 1975ರಲ್ಲಿ ಪ್ರಕಟಿಸಿರುವ 'ಕಾನೂನು ಪದಕೋಶ' ಲಭ್ಯವಿದೆ. ಕರ್ನಾಟಕ ಲಾ ರಿಪೋರ್ಟರ್ ಪಬ್ಲಿಕೇಷನ್ಸ್ ಪ್ರಕಟಿತ 'ಕಾನೂನು ಪದಕೋಶ' ಹಾಗೂ ಬೆ.ಕಾ.ಮೂರ್ತೀಶ್ವರಯ್ಯ ಸಂಪಾದಿತ 'ಕಾನೂನು ಆಡಳಿತ: ಇಂಗ್ಲಿಷ್ ಕನ್ನಡ ಪದಕೋಶ' ಇವೂ ಇವೆ. ಆದರೆ, ಇವೆಲ್ಲ ಸಮಗ್ರವೂ ಸಾರ್ವತ್ರಿಕವೂ ಸರಳವೂ ಸಾಮಯಿಕವೂ ಆಗಿಲ್ಲ. ಈ ನಾಲ್ಕು ಅವಶ್ಯಕತೆಗಳನ್ನೂ ಪೂರೈಸುವ ಬೃಹತ್ ನಿಘಂಟು ಬೇಕಾಗಿದೆ. ಇನ್ನು, ನಿಘಂಟಿಗಾಗಿ ಕಾಯಂ ಸಮಿತಿ ಬೇಕೆಂಬ ಪ್ರಭಾಕರ ಶಾಸ್ತ್ರಿ ಅವರ ಸಲಹೆ ಯೋಗ್ಯವಾದುದು. ಸಮಿತಿಯಲ್ಲಿ ಯಾರೆಲ್ಲ ಇರಬೇಕೆಂಬ ಅಭಿಪ್ರಾಯವೂ ಸಣ್ಣ ಬದಲಾವಣೆಯೊಂದಿಗೆ ಸ್ವೀಕಾರಾರ್ಹ. 'ಸಾಹಿತಿಮಾತ್ರ'ರು ಬೇಡ. ಸಾಹಿತಿಯೋ ಅಸಾಹಿತಿಯೋ, ಭಾಷಾತಜ್ಞರು ಇರಲಿ. ಕನ್ನಡದಲ್ಲಿ ನುರಿತ ಪ್ರಾಧ್ಯಾಪಕರು ಮತ್ತು ಜನಪದರು ಕೂಡಾ ಇರತಕ್ಕದ್ದು.

ಎ.ಆರ್.ಸೋಮಯಾಜಿ, ಬೆಂಗಳೂರು

ಸನಾತನ!

'ಬದುಕಿನ ಭಾರದಲ್ಲಿ
ಹಬ್ಬದ ಹರ್ಷವೆಲ್ಲಿ?'
ಇದು ಇಂದಿನ ಪ್ರಶ್ನೆಯಲ್ಲ;
'25 ವರ್ಷಗಳ ಹಿಂದೆ'
ಗೃಹಿಣಿಯೊಬ್ಬರು ಎತ್ತಿದ್ದು
(ಸೆ. 16);
ಚಿರಂತನ ಪ್ರಶ್ನೆಯೇ ಸರಿ!
ಬದಲಾವಣೆ,
ಅದು ತರುವ 'ಬವಣೆ'
ದೇಶಕ್ಕೆ ಬೇಕೆ?–
'ಅಚಲೋಯಂ ಸನಾತನಃ!'

ಸಿ.ಪಿ.ಕೆ., ಮೈಸೂರು

ಹೆದ್ದಾರಿ ಕಿರಿಕಿರಿ: ಸಮೀಕ್ಷೆ ನಡೆಯಲಿ

ವಿಧಾನಸಭೆಯ ಅಧಿವೇಶನದಲ್ಲಿ ಸದಸ್ಯರು ರಸ್ತೆ ಉಬ್ಬುಗಳ ಬಗ್ಗೆ ಇತ್ತೀಚೆಗೆ ಅತ್ಯಂತ ಭಾವಾವೇಶದಿಂದ ಚರ್ಚಿಸಿದ್ದಾರೆ. ಅಧಿಕಾರಿಗಳನ್ನೂ ತರಾಟೆಗೆ ತೆಗೆದುಕೊಂಡಿದ್ದಾರೆ. ಹೌದು, ವಾಹನಗಳನ್ನು ವೇಗವಾಗಿ ಓಡಿಸುವವರಿಗೆ ರಸ್ತೆ ಉಬ್ಬುಗಳು ತುಂಬಾ ಕಿರಿಕಿರಿ ಅನ್ನಿಸಬಹುದು. ಅದರಲ್ಲೂ ರಾಷ್ಟ್ರೀಯ ಹೆದ್ದಾರಿ ಮತ್ತು ಇತರ ಮುಖ್ಯ ರಸ್ತೆಗಳಲ್ಲಿ ಓಡಿಸುವವರಿಗೆ ಇಂತಹ ಅನುಭವವಾಗಬಹುದು. ಆದರೆ ಇಂದು ಆ ಹೆದ್ದಾರಿಗಳು ಹಾಗೂ ಇತರ ರಸ್ತೆಗಳು, ನೂರಾರು ವರ್ಷಗಳಿಂದ ಆರಾಮವಾಗಿ ಉಸಿರಾಡುತ್ತಿದ್ದ ಸಾವಿರಾರು ಹಳ್ಳಿಗಳ ಹೃದಯ ಭಾಗಗಳನ್ನು ಸೀಳಿ, ಅವರು ಬಾಳಿ ಬದುಕುತ್ತಿದ್ದ ನೆಲವನ್ನು ಕಿತ್ತುಕೊಂಡು ಅನಾಥರನ್ನಾಗಿ ಮಾಡಿಟ್ಟಿವೆ. ಇದರ ಜೊತೆಗೆ ಸದಾ ವಾಹನಗಳ ಗದ್ದಲ, ಕರ್ಕಶ ಶಬ್ದಮಾಲಿನ್ಯ ಬೇರೆ. ಹಾಗೆಯೇ ಅವರು ತಮ್ಮದೇ ನೆಲ, ಗದ್ದೆ, ತೋಟಗಳಿಗೆ ಓಡಾಡಬೇಕಾದರೆ ರಸ್ತೆ ದಾಟಲು ಎಂತೆಂಥ ಹಿಂಸೆಯನ್ನು ಅನುಭವಿಸಬೇಕಾಗಿದೆ. ಆಯಾ ಹಳ್ಳಿಗಳ ಅನನ್ಯ ಭಾಗವಾಗಿರುವ ಲೆಕ್ಕವಿಲ್ಲದಷ್ಟು ನಾಯಿಗಳು ಈ ರಸ್ತೆಗಳಲ್ಲಿ ಸಂಚರಿಸುವ ವಾಹನಗಳಿಗೆ ಸಿಲುಕಿ ಸಾಯುತ್ತಿರುತ್ತವೆ. ಕೆಲವೊಮ್ಮೆ ಬಡಪಾಯಿ ಮನುಷ್ಯರು ಕೂಡ.

ಈ ಬಗ್ಗೆ ಸರ್ಕಾರದ ಬಳಿ ನಿರ್ದಿಷ್ಟ ಅಂಕಿ ಅಂಶವಿದೆಯೇ? ಈ ಕುರಿತು ವಿಧಾನಮಂಡಲದ ಯಾವುದೇ ಅಧಿವೇಶನದಲ್ಲಿ ಇಲ್ಲಿಯವರೆಗೆ ಚರ್ಚೆಯಾಗಿಲ್ಲ. ಯಾವುದೇ ಅಧಿಕಾರಿ ತನ್ನ ಇಚ್ಛೆಗೆ ಅನುಸಾರವಾಗಿ ರಸ್ತೆ ಉಬ್ಬುಗಳನ್ನು ಹಾಕಿಸಲು ಸಾಧ್ಯವಿಲ್ಲ. ಅವರನ್ನು ಆ ಕಡೆ ಈ ಕಡೆ ಜಗ್ಗಾಡುವ ಎಂತೆಂಥ ತರಾವರಿ ನಾಯಕರಿದ್ದಾರೆ. ಬೆಂಗಳೂರು ಮತ್ತು ಇತರ ದೊಡ್ಡ ನಗರಗಳಲ್ಲಿ ರಸ್ತೆ ಉಬ್ಬುಗಳಿಂದಾಗಿ ಆರಾಮವಾಗಿ ಓಡಾಡಲು ಆಗುತ್ತಿಲ್ಲ. ತಮ್ಮ ಮನೆಗಳ ಮುಂದೆಯೇ ಮಕ್ಕಳು ಆಡುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ. ಈ ಸ್ವಾತಂತ್ರ್ಯ ದಿನೇ ದಿನೇ ಮತ್ತಷ್ಟು ಕಷ್ಟದಾಯಕವಾಗುತ್ತಿದೆ. ಇದಕ್ಕೆ ಮೀರಿದ ಕಿರಿಕಿರಿಯ ಹಾರ್ನ್‌ಗಳು. ಬಹಳಷ್ಟು ಬಾರಿ ಈ ಹಾರ್ನ್‌ಗಳ ಅಗತ್ಯವೇ ಇರುವುದಿಲ್ಲ. ಆದರೂ ಫ್ಯಾನ್ಸಿಗೆ ಎಂಬಂತೆ ಬಾರಿಸುತ್ತಲೇ ಇರುತ್ತಾರೆ. ದಯವಿಟ್ಟು ಸದಸ್ಯರು ಇಂಥದ್ದನ್ನೆಲ್ಲ ಸಮೀಕ್ಷೆ ಮಾಡಿಸಬೇಕು.

ಶೂದ್ರ ಶ್ರೀನಿವಾಸ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್‌ನಲ್ಲಿ ಪರಿವರ್ತನೆಯ ತುಡಿತ?

2014ರ ಲೋಕಸಭಾ ಚುನಾವಣೆಯಲ್ಲಿನ ಆಘಾತಕರ ಸೋಲಿನ ಬಳಿಕ ಕಾಂಗ್ರೆಸ್ ಪಕ್ಷವು ಕುಸಿಯುತ್ತಲೇ ಸಾಗಿದೆ. 2019ರ ಲೋಕಸಭಾ ಚುನಾವಣೆಯಲ್ಲಿಯೂ ಪಕ್ಷದ ಸಾಧನೆಯೇನೂ ಭರವಸೆ ಮೂಡಿಸಲಿಲ್ಲ. ಆದರೆ, ಕಾಂಗ್ರೆಸ್ ಪಕ್ಷದ ಪುನಶ್ಚೇತನದ ಬಗ್ಗೆ ಆಗಾಗ ಮಾತುಗಳು ಕೇಳಿ ಬರುತ್ತಿವೆ. ಇತ್ತೀಚಿನವರೆಗೆ ನಡೆದ ಪ್ರಯತ್ನಗಳಿಂದ ದೊಡ್ಡ ಯಶಸ್ಸೇನೂ ದೊರೆತಿಲ್ಲ. ಆದರೆ, ತೀರಾ ಇತ್ತೀಚೆಗೆ ನಡೆದ ಕೆಲವು ಬೆಳವಣಿಗೆಗಳು ಆ ಪಕ್ಷವು ಭಿನ್ನ ಹಾದಿಯೊಂದನ್ನು ಹುಡುಕಿಕೊಳ್ಳುವ ಯತ್ನದಲ್ಲಿದೆ ಎಂಬ ಸುಳಿವು ಕೊಡುತ್ತಿದೆ.

ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗಲಿದ್ದಾರೆ ಮತ್ತು ಪಕ್ಷದ ಚುನಾವಣಾ ಕಾರ್ಯತಂತ್ರವನ್ನು ನೋಡಿಕೊಳ್ಳಲಿದ್ದಾರೆ ಎಂಬುದು ಈಚಿನ ದಿನಗಳಲ್ಲಿ ಹೆಚ್ಚು ಚರ್ಚೆಯಾದ ಸುದ್ದಿ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಕಿಶೋರ್ ಭೇಟಿಯಾಗಿದ್ದಾರೆ. ಕಾಂಗ್ರೆಸ್ ಪಕ್ಷವು ಕಿಶೋರ್ ಸಲಹೆಯಂತೆ ಕೆಲವು ಕ್ರಮಗಳನ್ನು ಕೈಗೊಂಡಿದೆ ಎನ್ನಲಾಗುತ್ತಿದೆ.

ಹಿಂದೂ ಬಹುಸಂಖ್ಯಾತವಾದದ ಸುತ್ತಲೇ ಸುತ್ತುತ್ತಿರುವ ಭಾರತದ ಈಗಿನ ರಾಜಕಾರಣದಲ್ಲಿ ಮತ್ತೆ ಚಲಾವಣೆಗೆ ಬರಲು ಗಟ್ಟಿಯಾದ ಅಡಿಪಾಯವನ್ನು ಕಾಂಗ್ರೆಸ್ ಕಟ್ಟಿಕೊಳ್ಳುವುದು ಅನಿವಾರ್ಯವಾಗಿದೆ. ಹಾಗಾಗಿಯೇ ಯುವ ಜನರನ್ನು ಆಕರ್ಷಿಸುವ ಯತ್ನವನ್ನು ಪಕ್ಷವು ಮಾಡುತ್ತಿದೆ. ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ, ಜೆಎನ್‌ಯು ವಿದ್ಯಾರ್ಥಿ ನಾಯಕರಾಗಿದ್ದ ಕನ್ಹಯ್ಯಾ ಕುಮಾರ್ ಅಂಥವರ ಸೇರ್ಪಡೆ ಇದರ ಭಾಗ ಎನ್ನಲಾಗುತ್ತಿದೆ. ಹಾಗೆಯೇ, ಜಾತಿ ಸಮೀಕರಣವನ್ನು ಹೆಚ್ಚು ಪರಿಣಾಮಕಾರಿ ಆಗಿಸುವ ಯತ್ನವೂ ನಡೆದಿದೆ. ಪಂಜಾಬ್ ಮುಖ್ಯಮಂತ್ರಿಯಾಗಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ನೇಮಕವು ಪರಿಶಿಷ್ಟ ಜಾತಿ– ಪಂಗಡಗಳ ಮತವನ್ನು ಮರಳಿ ಗಳಿಸುವ ಯತ್ನವೂ ಹೌದು. ಇದು ಪಂಜಾಬ್‌ನಲ್ಲಿ ಮಾತ್ರವಲ್ಲ, ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿಯೂ ಪ್ರಭಾವ ಬೀರಬಹುದು ಎಂಬ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇದೆ.

ಪ್ರಶಾಂತ್ ಕಿಶೋರ್

ಯುವತ್ವದ ಸ್ಪರ್ಶ

ಮೋದಿ ನೇತೃತ್ವದಲ್ಲಿ 2014ರ ಲೋಕಸಭಾ ಚುನಾವಣೆ ಎದುರಿಸಿದ ಬಿಜೆಪಿಗೆ ಯುವ ಮತದಾರರ ಬೆಂಬಲ ದೊಡ್ಡ ಮಟ್ಟದಲ್ಲಿ ಸಿಕ್ಕಿತ್ತು. 2019ರ ಚುನಾವಣೆಯಲ್ಲಿಯೂ ಯುವ ಮತದಾರರು ಮೋದಿ ನೇತೃತ್ವದ ಬಿಜೆಪಿಯನ್ನು ಬೆಂಬಲಿಸಿದ್ದರು. ಯುವ ಮತದಾರರನ್ನು ಸೆಳೆಯುವ ತಂತ್ರವನ್ನು ಅನುಸರಿಸಲು ಕಾಂಗ್ರೆಸ್ ಈಗ ಮುಂದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಇದಕ್ಕಾಗಿ ಕಾಂಗ್ರೆಸ್ ಭಾರಿ ದೊಡ್ಡಮಟ್ಟದ ಕಾರ್ಯತಂತ್ರ ಹಾಕಿಕೊಂಡಿದೆ. 2020ರ ಆರಂಭದಲ್ಲಿ ಕೋವಿಡ್ ತಲೆದೋರಿದಾಗ ಕಾಂಗ್ರೆಸ್‌ನ ಯುವನಾಯಕರು ಮತ್ತು ಯುವ ಕಾರ್ಯಕರ್ತರು ಜನರ ನೆರವಿಗೆ ಮುಂದಾಗಿದ್ದರು. ಕೋವಿಡ್ ಲಾಕ್‌ಡೌನ್‌ನ ನಂತರ ನಡೆದ ಕಾರ್ಮಿಕರ ಮರುವಲಸೆ ವೇಳೆ, ಹೆದ್ದಾರಿಗಳ ಉದ್ದಕ್ಕೂ ಕಾರ್ಮಿಕರಿಗೆ ಕಾಂಗ್ರೆಸ್ ಕಾರ್ಯಕರ್ತರು ಊಟದ ವ್ಯವಸ್ಥೆ ಮಾಡಿದ್ದರು. ಅದಕ್ಕಿಂತಲೂ ಮುಖ್ಯವಾಗಿ ಕೋವಿಡ್‌ನ ಎರಡನೇ ಅಲೆ ವೇಳೆ ಆಮ್ಲಜನಕ ಮತ್ತು ಔಷಧದ ಕೊರತೆ ಎದುರಿಸಿದವರಿಗೆ ಅವುಗಳನ್ನು ಒದಗಿಸಿಕೊಡುವ ಕೆಲಸವನ್ನು ಕಾಂಗ್ರೆಸ್ ಕಾರ್ಯಕರ್ತರು ಮಾಡಿದ್ದರು. ಈ ಕಾರ್ಯದಲ್ಲಿ ಕಾಂಗ್ರೆಸ್‌ನ ಯುವ ಕಾರ್ಯಕರ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಯಿಂದ ರಾಜಕೀಯ ಪಕ್ಷಗಳನ್ನು ರೈತ ಸಂಘಟನೆಗಳು ದೂರವಿಟ್ಟಿವೆ. ಆದರೆ ದೆಹಲಿಯ ಸಿಕ್ರಿ, ಸಿಂಘು ಮತ್ತು ಗಾಜಿಪುರ ಗಡಿಗಳಲ್ಲಿ ಬೀಡುಬಿಟ್ಟಿರುವ ರೈತರಿಗೆ ಊಟ, ಟೆಂಟ್ ಮತ್ತು ನೀರಿನ ವ್ಯವಸ್ಥೆಯನ್ನು ಮಾಡುವ ಕೆಲಸವನ್ನು ಕಾಂಗ್ರೆಸ್‌ನ ಯುವ ಕಾರ್ಯಕರ್ತರು ಮಾಡುತ್ತಿದ್ದಾರೆ. ರಾಜಸ್ಥಾನ, ಉತ್ತರ ಪ್ರದೇಶ, ಹರಿಯಾಣದಲ್ಲಿ ನಡೆದ ರೈತರ ಮಹಾಪಂಚಾಯಿತಿಗಳನ್ನು ಆಯೋಜಿಸುವಲ್ಲಿಯೂ ಕಾಂಗ್ರೆಸ್‌ನ ಯುವ ಕಾರ್ಯಕರ್ತರು ರೈತರಿಗೆ ನೆರವಾಗಿದ್ದಾರೆ. ಈ ಮೂಲಕ ರೈತರ ವಿಶ್ವಾಸವನ್ನು ಗಳಿಸಲು ಮುಂದಾಗಿದ್ದಾರೆ.

ರಾಹುಲ್ ಗಾಂಧಿ

ಇದರ ಬೆನ್ನಲ್ಲೇ, ಯುವನಾಯಕರಾದ ಕನ್ಹಯ್ಯಾ ಕುಮಾರ್ ಮತ್ತು ಜಿಗ್ನೇಶ್ ಮೇವಾನಿ ಅವರನ್ನು ಕಾಂಗ್ರೆಸ್ ಈಗ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದೆ. ರಾಜಸ್ಥಾನದಲ್ಲಿಯೂ 'ಯುವ ನಾಯಕ'ರಾದ ಸಚಿನ್ ಪೈಲಟ್ ಮತ್ತು ಅವರ ಬಣದ ಯುವ ನಾಯಕರಿಗೆ ಕಾಂಗ್ರೆಸ್ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದೆ. ಕಾಂಗ್ರೆಸ್‌ನಲ್ಲಿ ಸೋನಿಯಾ ಗಾಂಧಿ ನಾಯಕತ್ವದ ವಿರುದ್ಧ ಧ್ವನಿ ಎತ್ತಿದ್ದ 23 ನಾಯಕರನ್ನು ಪಕ್ಷವು ಈಗ ಪ್ರಮುಖ ಬೆಳವಣಿಗೆಗಳಿಂದ ದೂರವಿಟ್ಟಿದೆ. ಆ ನಾಯಕರನ್ನು ಪಕ್ಷದ ಪ್ರಮುಖ ಹುದ್ದೆಗಳಿಂದ ತೆರವು ಮಾಡಿದೆ. ಆ ಹುದ್ದೆಗಳಿಗೆ ಯುವಜನರನ್ನು ನೇಮಕ ಮಾಡಿದೆ. ಆ ಮೂಲಕ, ತಮ್ಮದು ಯುವಕರ ಪಕ್ಷ ಎಂದು ಬಿಂಬಿಸಲು ಕಾಂಗ್ರೆಸ್ ಮುಂದಾಗಿದೆ.

ಕನ್ಹಯ್ಯಾ ಕುಮಾರ್

2020ರ ಕೋವಿಡ್ ಲಾಕ್‌ಡೌನ್‌ನ ನಂತರ ಈ ತಂತ್ರವನ್ನು ಕಾಂಗ್ರೆಸ್ ಕ್ರಮಬದ್ಧವಾಗಿ ಜಾರಿಗೆ ತರುತ್ತಿದೆ. ಲಾಕ್‌ಡೌನ್ ಅವಧಿಯಲ್ಲಿ ಕಾಂಗ್ರೆಸ್‌ನ ಯುವ ನಾಯಕರು ಮತ್ತು ಕಾರ್ಯಕರ್ತರು ಜನರ ನೆರವಿಗೆ ಧಾವಿಸಿದರು ಎಂಬ ಸಂಕಥನವನ್ನು ರೂಪಿಸಲಾಗಿದೆ. ಈಗ ಬೇರೆ ಬೇರೆ ಸಮುದಾಯಗಳ ಪ್ರಭಾವಿ ಯುವನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗುತ್ತಿದೆ. ಗುಜರಾತ್‌ನ ವಿಧಾನಸಭಾ ಚುನಾವಣೆಯ ಹೊಸ್ತಿಲಿನಲ್ಲಿಯೇ ಪಕ್ಷಕ್ಕೆ ಯುವತ್ವದ ಸ್ಪರ್ಶ ನೀಡುವ ಮಹತ್ವದ ನಿರ್ಧಾರವನ್ನು ಕಾಂಗ್ರೆಸ್ ತೆಗೆದುಕೊಂಡಿದೆ.

ಜಿಗ್ನೇಶ್ ಮೇವಾನಿ

ಎಚ್ಚರದ ಜಾತಿ ಲೆಕ್ಕಾಚಾರ

ಜಾತಿ ಸಮೀಕರಣದ ಬಗ್ಗೆ ಕಾಂಗ್ರೆಸ್ ಪಕ್ಷವು ಹೆಚ್ಚು ಎಚ್ಚರದಿಂದ ಇರುವಂತೆ ಕಾಣಿಸುತ್ತಿದೆ.

ಪಂಜಾಬ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಮಾಡುವ ಮೂಲಕ ಕಾಂಗ್ರೆಸ್ ತನ್ನ ಕಾರ್ಯತಂತ್ರದ ಮೊದಲ ಹೆಜ್ಜೆ ಇರಿಸಿದೆ. ದಲಿತ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿ ರಾಷ್ಟ್ರೀಯ ಮಟ್ಟದಲ್ಲಿ ಹೊಸ ಸಂದೇಶ ರವಾನಿಸಿದೆ. ಕಾಂಗ್ರೆಸ್‌ನ ಈ ನಿರ್ಧಾರವು ಮುಂಬರುವ ದಿನಗಳಲ್ಲಿ ಚುನಾವಣೆ ನಡೆಯಲಿರುವ ಪಂಜಾಬ್, ಉತ್ತರಾಖಂಡ, ಉತ್ತರ ಪ್ರದೇಶ ಮೊದಲಾದ ರಾಜ್ಯಗಳಲ್ಲಿ ಪಕ್ಷದ ಕೈ ಹಿಡಿಯಲಿದೆ ಎಂದು ವಿಶ್ಲೇಷಿಸಲಾಗಿದೆ.

ಗ್ಯಾನಿ ಜೈಲ್‌ಸಿಂಗ್ ಅವರ ಬಳಿಕ ಪಂಜಾಬ್‌ನಲ್ಲಿ ಜಾಟ್ ಸಮುದಾಯೇತರ ಮುಖ್ಯಮಂತ್ರಿಯಾಗಿ ಚರಣ್‌ಜಿತ್ ಸಿಂಗ್ ಚನ್ನಿ ಆಯ್ಕೆಯಾಗಿದ್ದಾರೆ. ರಾಜ್ಯದಲ್ಲಿ ಶೇ 32ರಷ್ಟು ಜನಸಂಖ್ಯೆ ಹೊಂದಿರುವ ದಲಿತರಿಗೆ ಅತ್ಯುನ್ನತ ಹುದ್ದೆ ಈವರೆಗೆ ಸಿಕ್ಕಿರಲಿಲ್ಲ. ಇದನ್ನು ಸಾಧ್ಯವಾಗಿಸುವ ಮೂಲಕ ಕಾಂಗ್ರೆಸ್, ಪಂಜಾಬ್ ಅಷ್ಟೇ ಅಲ್ಲದೆ, ದೇಶದಾದ್ಯಂತ ಇರುವ ದಲಿತ ಸಮುದಾಯದ ಮನವೊಲಿಸುವ ಯತ್ನಕ್ಕೆ ಮುಂದಾಗಿದೆ. ಜೊತೆಗೆ ಜಾಟ್ ಸಮುದಾಯ ಹಾಗೂ ಹಿಂದೂ ಖತ್ರಿ ಸಮುದಾಯಕ್ಕೆ ಸೇರಿದ ಇಬ್ಬರನ್ನು ಪಂಜಾಬ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿಗಳನ್ನಾಗಿ ಮಾಡಿ, ಈ ಎರಡೂ ಸಮುದಾಯಗಳನ್ನು ತಲುಪಲು ಯತ್ನಿಸಿದೆ.

ಜಾಟ್ ಸಮುದಾಯಕ್ಕೆ ಸೇರಿದ ನವಜೋತ್ ಸಿಂಗ್ ಸಿಧು ಅವರಿಗೆ ಪಕ್ಷದ ರಾಜ್ಯ ಘಟಕದ ಚುಕ್ಕಾಣಿ ನೀಡಿರುವುದೂ ಸಹ ವ್ಯವಸ್ಥಿತ ಕಾರ್ಯತಂತ್ರದ ಭಾಗ ಎನ್ನಲಾಗಿದೆ. ಜಾಟ್ ಸಮುದಾಯದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಕೆಳಗಿಳಿಸಿದ್ದರೂ, ಸಮುದಾಯಕ್ಕೆ ರಾಜ್ಯ ಘಟಕ ಅಧ್ಯಕ್ಷ ಸ್ಥಾನ ಮತ್ತು ಒಂದು ಉಪಮುಖ್ಯಮಂತ್ರಿ ಹುದ್ದೆ ನೀಡಿ ತನ್ನ ಯೋಜನೆ ಅನುಷ್ಠಾನಗೊಳಿಸಿದೆ.

ಉತ್ತರ ಪ್ರದೇಶದಲ್ಲಿ ಎಸ್‌ಪಿ, ಬಿಜೆಪಿ ಸೇರಿದಂತೆ ಬಹುತೇಕ ಪಕ್ಷಗಳು ಬ್ರಾಹ್ಮಣ ಸಮುದಾಯದ ಓಲೈಕೆಯಲ್ಲಿ ತೊಡಗಿವೆ. 'ಜೈ ಭೀಮ್' ಎನ್ನುತ್ತಿದ್ದ ಬಿಎಸ್‌ಪಿ ಸಹ ಇದಕ್ಕೆ ಹೊರತಾಗಿಲ್ಲ. ರಾಜ್ಯದ ಶೇ 21ರಷ್ಟಿರುವ ದಲಿತರು ಸಹ ಅಲ್ಲಿ ನಿರ್ಣಾಯಕ. ಪಂಜಾಬ್‌ನಲ್ಲಿ ದಲಿತ ಮುಖ್ಯಮಂತ್ರಿ ಆಯ್ಕೆಯ ಮೂಲಕ ಕಾಂಗ್ರೆಸ್, ಉತ್ತರ ಪ್ರದೇಶದಲ್ಲೂ ತನ್ನ ನೆಲೆ ಗಟ್ಟಿ ಮಾಡಿಕೊಳ್ಳುವ ಎಲ್ಲ ಲಕ್ಷಣಗಳಿವೆ. ಅತ್ತ ಉತ್ತರಾಖಂಡದಲ್ಲೂ ಇದು ಫಲ ನೀಡುತ್ತದೆ ಎಂಬ ಆತ್ಮವಿಶ್ವಾಸದಲ್ಲಿ ಕಾಂಗ್ರೆಸ್ ಇದೆ. ರಾಜ್ಯದ ಜನಸಂಖ್ಯೆಯ ಶೇ 18ರಷ್ಟಿರುವ ದಲಿತ ಸಮುದಾಯದ ಮೇಲೆ ಪಂಜಾಬ್ ವಿದ್ಯಮಾನ ಪ್ರಭಾವ ಬೀರಲಿದೆ ಎನ್ನಲಾಗಿದೆ.

ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ತವರು ಗುಜರಾತ್‌ನಲ್ಲಿ ಬಿಜೆಪಿಗೆ ಏಟು ಕೊಡಲು ಕಾಂಗ್ರೆಸ್ ಅಲ್ಲಿಯೂ ಜಾತಿ ಸಮೀಕರಣದ ಮೊರೆ ಹೋಗಿದೆ. ಸದ್ಯದಲ್ಲೇ ನಡೆಯಲಿರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು, ಪಾಟೀದಾರ್ ಸಮುದಾಯದ ಪ್ರಮುಖ ನಾಯಕ ಹಾರ್ದಿಕ್ ಪಟೇಲ್ ಅವರನ್ನು ಈ ಹಿಂದೆಯೇ ರಾಜ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿ, ಸಮುದಾಯದ ಓಲೈಕೆಗೆ ಮುಂದಾಗಿದೆ. ಹಾರ್ದಿಕ್‌ಗೆ ಜಾತಿ ಬಲವೊಂದೇ ಅಲ್ಲದೆ, ಯುವ ಸಮೂಹದ ಪ್ರಭಾವಿ ನಾಯಕ ಎಂಬ ವರ್ಚಸ್ಸು ಕೂಡ ಇರುವುದನ್ನು ಪಕ್ಷ ಮನಗಂಡು ಈ ನಿರ್ಧಾರ ತೆಗೆದುಕೊಂಡಿತ್ತು. ಇದರ ಸುಳಿವು ಅರಿತ ಬಿಜೆಪಿ, ರಾಜಕೀಯ ದೃಷ್ಟಿಯಿಂದ ಅತ್ಯಂತ ಪ್ರಭಾವಿ ಸಮುದಾಯ ಎನಿಸಿರುವ ಪಾಟೀದಾರರ ಮತ ಸೆಳೆಯಲು ತರಾತುರಿಯಲ್ಲಿ ಮುಖ್ಯಮಂತ್ರಿಯನ್ನೇ ಬದಲಾವಣೆ ಮಾಡಿತು.

2025ರಲ್ಲಿ ಬಿಹಾರ ವಿಧಾನಸಭೆ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್, ಈಗಿನಿಂದಲೇ ಭೂಮಿಕೆ ಸಿದ್ಧಪಡಿಸುತ್ತಿದೆ. ಪ್ರಭಾವಿ ಯುವ ನಾಯಕ ಕನ್ಹಯ್ಯಾ ಕುಮಾರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಮುಂದಾಗಿದೆ. ಅವರು ಬಿಹಾರದಲ್ಲಿ ನೆಲೆ ಕಳೆದುಕೊಂಡಿರುವ ಪಕ್ಷಕ್ಕೆ ಹೊಸ ಚೈತನ್ಯ ನೀಡುತ್ತಾರೆ ಎಂಬ ಲೆಕ್ಕಾಚಾರ ಹಾಕಿಕೊಂಡಿದೆ.

ಹಾರ್ದಿಕ್ ಪಟೇಲ್

ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಮತ್ತು ಉಪಮುಖ್ಯಮಂತ್ರಿ ಸುಖ್‌ಜಿಂದರ್ ಸಿಂಗ್ ರಂಧಾವ ಅವರ ಜತೆಗೆ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ

ಸಿಜೆಐ ರಮಣ ಒತ್ತಾಯ

ಆಕ್ರೋಶದಿಂದ ಕೇಳಿ ಮಹಿಳಾ ಮೀಸಲು

ನವದೆಹಲಿ: ಮಹಿಳೆಯರಿಗೆ ನ್ಯಾಯಾಂಗದಲ್ಲಿ ಶೇ 50ರಷ್ಟು ಮೀಸಲಾತಿ ನೀಡುವುದರ ಪರವಾಗಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ.ರಮಣ ಮಾತನಾಡಿದ್ದಾರೆ. ಇದು ದಾನ ಅಲ್ಲ, ಮಹಿಳೆಯರ ಹಕ್ಕು ಎಂದು ಅವರು ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ನೇಮಕವಾದ ಒಂಬತ್ತು ನ್ಯಾಯಮೂರ್ತಿಗಳಿಗೆ ಸುಪ್ರೀಂ ಕೋರ್ಟ್ ವಕೀಲೆಯರ ಸಂಘ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಇತ್ತೀಚೆಗೆ ನೇಮಕವಾದ ಒಂಬತ್ತು ನ್ಯಾಯಮೂರ್ತಿಗಳಲ್ಲಿ ಮೂವರು ಮಹಿಳೆಯರೂ ಇದ್ದಾರೆ.

'ಜಗತ್ತಿನ ಮಹಿಳೆಯರೇ ಒಗ್ಗಟ್ಟಾಗಿ. ನಿಮ್ಮ ಸಂಕೋಲೆಗಳನ್ನು ಹೊರತುಪಡಿಸಿದರೆ ನೀವು ಕಳೆದುಕೊಳ್ಳಲು ಏನೂ ಇಲ್ಲ' ಎಂದು ಕಾರ್ಲ್ ಮಾರ್ಕ್ಸ್ ಅವರ ಮಾತನ್ನು ಸ್ವಲ್ಪ ಬದಲಾಯಿಸಿ ಹೇಳಿದರು. 'ಜಗತ್ತಿನ ಕಾರ್ಮಿಕರೆಲ್ಲ ಒಗ್ಗಟ್ಟಾಗಿ...' ಎಂಬುದು ಕಾರ್ಲ್ ಮಾರ್ಕ್ಸ್ ಅವರ ಪ್ರಸಿದ್ಧ ಹೇಳಿಕೆ.

ಮಹಿಳಾ ನ್ಯಾಯಾಧೀಶರು ಮತ್ತು ವಕೀಲರ ಸಂಖ್ಯೆ ಹೆಚ್ಚುವುದರೊಂದಿಗೆ ನ್ಯಾಯದಾನದ ಗುಣಮಟ್ಟ ಉತ್ತಮಗೊಳ್ಳುತ್ತದೆ. ಹಾಗಾಗಿ, ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಬೇಕಾದ ಬದಲಾವಣೆಗಳನ್ನು ತುರ್ತಾಗಿ ಮಾಡಬೇಕಾಗಿದೆ. ಕಾನೂನು ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಪ್ರವೇಶದಲ್ಲಿ ಮಹಿಳೆಯರಿಗೆ ಗಣನೀಯ ಪ್ರಮಾಣದ ಮೀಸಲಾತಿ ನೀಡಬೇಕು. ನ್ಯಾಯಾಂಗ ಶಿಕ್ಷಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಬೇಕು ಎಂದು ರಮಣ ಪ್ರತಿಪಾದಿಸಿದ್ದಾರೆ.

ಆಕ್ರೋಶದಿಂದ ಕೂಗಿ ನಿಮ್ಮ ಆಗ್ರಹವನ್ನು ಹೇಳಿ. ಸಾವಿರಾರು ವರ್ಷಗಳ ದಮನ ನೀತಿ ಸಾಕು. ನ್ಯಾಯಾಂಗದಲ್ಲಿ ಶೇ 50ರಷ್ಟು ಮಹಿಳಾ ಪ್ರಾತಿನಿಧ್ಯಕ್ಕೆ ಇದು ಸಕಾಲ

ಎನ್.ವಿ. ರಮಣ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

'ಮಹಿಳೆಯರು ನ್ಯಾಯಾಂಗ ಕ್ಷೇತ್ರಕ್ಕೆ ಬರಲು ಪೂರಕವಾದ ಪರಿಸ್ಥಿತಿಯನ್ನು ಸೃಷ್ಟಿಸಬೇಕು. ಮೂಲಸೌಕರ್ಯವೂ ಸೇರಿ ಎಲ್ಲವೂ ಪೂರಕವಾಗಿರಬೇಕು. ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ಕಾರ್ಯಾಂಗದ ಮೇಲೆಯೂ ಒತ್ತಡ ಹಾಕುತ್ತಿದ್ದೇನೆ' ಎಂದು ಅವರು ವಿವರಿಸಿದರು.

ಮಹಿಳೆಯರು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಮುಖ್ಯ ನ್ಯಾಯಮೂರ್ತಿ ಉಲ್ಲೇಖಿಸಿದರು. ಲಿಂಗತ್ವ ಸಿದ್ಧಮಾದರಿಗಳಿಂದಾಗಿ ಕುಟುಂಬದ ಹೊರೆ ಅವರ ಮೇಲೆ ಬೀಳುತ್ತದೆ. ಕಕ್ಷಿದಾರರು ಪುರುಷ ವಕೀಲರಿಗೆ ಆದ್ಯತೆ ಕೊಡುತ್ತಾರೆ. ನ್ಯಾಯಾಲಯದ ಸಭಾಂಗಣಗಳು ಮಹಿಳೆಯರಿಗೆ ಅನುಕೂಲಕರ ವಾತಾವರಣ ಹೊಂದಿರುವುದಿಲ್ಲ, ಅವು ಕಿಕ್ಕಿರಿದು ತುಂಬಿರುತ್ತವೆ. ಮೂಲಸೌಕರ್ಯ ಇರುವುದಿಲ್ಲ. ಮಹಿಳೆಯರಿಗೆ ಸರಿಯಾದ ಶೌಚಾಲಯಗಳು ಕೂಡ ಇರುವುದಿಲ್ಲ. ಹಾಗಾಗಿ, ಈ ವೃತ್ತಿಗೆ ಬರವುದಕ್ಕೆ ಮಹಿಳೆಯರು ಹಿಂದೇಟು ಹಾಕುತ್ತಾರೆ ಎಂದು ಅವರು ಹೇಳಿದರು.

ಆರು ಸಾವಿರ ವಿಚಾರಣಾ ನ್ಯಾಯಾಂಗ ಸಂಕೀರ್ಣಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಶೇ 22ರಷ್ಟು ನ್ಯಾಯಾಲಯ ಸಂಕೀರ್ಣಗಳಲ್ಲಿ ಮಹಿಳೆಯರಿಗೆ ಶೌಚಾಲಯ ಇಲ್ಲ ಎಂಬುದು ಸಮೀಕ್ಷೆಯಲ್ಲಿ ತಿಳಿದು ಬಂದಿದೆ ಎಂದರು.

ಪ್ರಾತಿನಿಧ್ಯ ಅತ್ಯಲ್ಪ

ನ್ಯಾಯಾಂಗ ವ್ಯವಸ್ಥೆಯ ಕೆಳ ಹಂತಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವು ಸುಮಾರು ಶೇ 30ರಷ್ಟಿದೆ. ಹೈಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ಪ್ರಮಾಣ ಶೇ 11.5ರಷ್ಟು ಮಾತ್ರ ಇದೆ. ಸುಪ್ರೀಂ ಕೋರ್ಟ್‌ನ 33 ನ್ಯಾಯಮೂರ್ತಿಗಳ ಪೈಕಿ ಮಹಿಳೆಯರ ಸಂಖ್ಯೆ ನಾಲ್ಕು ಮಾತ್ರ. ಇದು ಶೇ 12ರಷ್ಟು ಮಾತ್ರ.

ದೇಶದಲ್ಲಿ 17 ಲಕ್ಷ ವಕೀಲರಿದ್ದಾರೆ. ಅದರಲ್ಲಿ ಮಹಿಳೆಯರ ಪ್ರಮಾಣವು ಶೇ 15ರಷ್ಟು ಇದೆ. ರಾಜ್ಯಗಳ ವಕೀಲರ ಸಂಘಗಳಿಗೆ ಚುನಾಯಿತರಾದ ಪ್ರತಿನಿಧಿಗಳಲ್ಲಿ ಮಹಿಳೆಯರ ಪ್ರಮಾಣವು ಶೇ 2ರಷ್ಟು ಮಾತ್ರ ಇದೆ. ಭಾರತೀಯ ವಕೀಲರ ಸಂಘದ ರಾಷ್ಟ್ರೀಯ ಸಮಿತಿಯಲ್ಲಿ ಮಹಿಳಾ ಸದಸ್ಯರೇ ಇಲ್ಲ ಎಂಬುದರತ್ತ ರಮಣ ಬೊಟ್ಟು ಮಾಡಿ ತೋರಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನ್ಯೂಜಿಲೆಂಡ್ ಕ್ರಿಕೆಟ್ ತಂಡವು ಭದ್ರತೆಯ ಕಾರಣ ನೀಡಿ ಪಾಕಿಸ್ತಾನದ ಪ್ರವಾಸವನ್ನು ರದ್ದುಗೊಳಿಸಿದೆ. ಇದಕ್ಕೆ ಪಾಕಿಸ್ತಾನ ಆಕ್ರೋಶ ವ್ಯಕ್ತಪಡಿಸಿದೆ. ಈ ಮಧ್ಯೆ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಯನ್ನು ಬಿಂಬಿಸುವ ಚಿತ್ರವೊಂದು ವೈರಲ್ ಆಗಿದೆ. ನ್ಯೂಜಿಲೆಂಡ್ ತಂಡಕ್ಕೆ ಪಾಕಿಸ್ತಾನ ಈ ರೀತಿಯ ಭದ್ರತಾ ವ್ಯವಸ್ಥೆ ಕಲ್ಪಿಸಿದೆ ಎಂದು ಉಲ್ಲೇಖಿಸಲಾಗಿದೆ. 'ಇಷ್ಟು ಭದ್ರತೆ ಸಾಕಾಗುವುದಿಲ್ಲವೇ' ಎಂದು ಟ್ವಿಟರ್ ಬಳಕೆದಾರರೊಬ್ಬರು ಪ್ರಶ್ನಿಸಿದ್ದಾರೆ.

2019ರಲ್ಲಿ ಶ್ರೀಲಂಕಾ ತಂಡವು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾಗ ಸೆರೆಹಿಡಿದ ಚಿತ್ರ ಇದು ಎಂದು ಇಂಡಿಯಾ ಟುಡೇ ವರದಿ ಮಾಡಿದೆ. ಚಿತ್ರವನ್ನು ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಲಾಗಿದೆ. 2009ರಲ್ಲಿ ಶ್ರೀಲಂಕಾ ತಂಡದ ಮೇಲೆ ಲಾಹೋರ್‌ನಲ್ಲಿ ಭಯೋತ್ಪಾದಕ ದಾಳಿಯ ಯತ್ನ ನಡೆದಿತ್ತು. ಹತ್ತು ವರ್ಷಗಳ ಬಳಿಕ ಮತ್ತೆ ಪಾಕ್‌ಗೆ ಭೇಟಿ ನೀಡಿದ ತಂಡಕ್ಕೆ ಭಾರಿ ಭದ್ರತೆ ಒದಗಿಸಲಾಗಿತ್ತು. ಈ ಚಿತ್ರವನ್ನು ನ್ಯೂಜಿಲೆಂಡ್ ತಂಡಕ್ಕೆ ನೀಡಿದ ಭದ್ರತೆ ಎಂದು ತಪ್ಪಾಗಿ ಬಿಂಬಿಸಲಾಗಿದೆ. ನ್ಯೂಜಿಲೆಂಡ್ ತಂಡವು ಪಾಕಿಸ್ತಾನ ಪ್ರವಾಸಕ್ಕೆ ತೆರಳಿಲ್ಲ ಎಂದು ಸ್ಪಷ್ಟಪಡಿಸಿದೆ.

ಗುಂಡಣ್ಣ

© 2021 by King Features Syndicate, Inc. World Rights reserved

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾದ್ರಿದೇವಿಯ ಸಿದ್ಧತೆ

ವೆಸ್ಸಂತರ ಬೋಧಿಸತ್ವ ರಾಜ್ಯಾಭಿಷೇಕವನ್ನು ಮಾಡಿಸಿಕೊಳ್ಳುತ್ತಿರುವಾಗ ಮಾವುತರು ಪಟ್ಟದಾನೆಯನ್ನು ಅಲಂಕರಿಸಿ ಕರೆದು ತಂದರು. ಆತ ಖಡ್ಗರತ್ನವನ್ನು ಸೊಂಟಕ್ಕೆ ಕಟ್ಟಿಕೊಂಡು ಗಜರತ್ನವನ್ನೇರಿದ. ಆ ಆನೆ ಕೂಡ ಅವನು ಹುಟ್ಟಿದ ದಿನವೇ ಜನ್ಮತಾಳಿದ್ದು. ಅದೇ ಸಮಯಕ್ಕೆ ಜೊತೆಯಲ್ಲಿ ಜನಿಸಿದ್ದ ಅರವತ್ತು ಸಾವಿರ ಅಮಾತ್ಯರು ಅವನನ್ನು ಸುತ್ತುವರೆದು ನಿಂತರು. ಆಗ ಸಿವಿಕನ್ಯೆಯರು ಬಂದು ಮಾದ್ರಿದೇವಿಗೆ ಅಭ್ಯಂಜನ ಸ್ನಾನ ಮಾಡಿಸಿ, ಅಭಿಷೇಕ ಮಾಡಿದರು. 'ಜಾಲಿಕುಮಾರ ಮತ್ತು ಕೃಷ್ಣಾಜಿನರನ್ನು, ಅವರೊಂದಿಗೆ ನಿನ್ನನ್ನು ವೆಸ್ಸಂತರ ರಕ್ಷಿಸಲಿ ಮತ್ತು ಸಂಜಯ ಮಹಾರಾಜ ತಮ್ಮೆಲ್ಲರನ್ನು ರಕ್ಷಿಸಲಿ' ಎಂದು ಆಶೀರ್ವಚನ ಹೇಳಿದರು. ಈ ಪ್ರತಿಷ್ಠೆಯನ್ನು ಪಡೆದು ಮಾದ್ರಿದೇವಿ ಪ್ರಸನ್ನಳಾದಳು. ತಾವು ಇದುವರೆಗೂ ಪಟ್ಟ ಕಷ್ಟಗಳನ್ನು ನೆನೆದು, ಅವು ಮುಗಿದುವಲ್ಲ ಎಂದು ಮತ್ತಷ್ಟು ಸಂತೋಷಪಟ್ಟಳು. ಮಕ್ಕಳಿಗೆ ಹೇಳಿದಳು, 'ಮಕ್ಕಳೇ ನಿಮ್ಮನ್ನು ಕಳೆದುಕೊಂಡಾಗಿನಿಂದ. ಒಂದೇ ಸಾರಿ ಊಟ ಮಾಡುವುದು ಮತ್ತು ನೆಲದ ಮೇಲೆ ಮಲಗುವುದು ನನ್ನ ವ್ರತವಾಗಿತ್ತು. ಮಕ್ಕಳೇ ನಿಮ್ಮನ್ನು ಮತ್ತೆ ಪಡೆದು ನನ್ನ ವ್ರತ ಸಂಪೂರ್ಣವಾಯಿತು. ನಿಮ್ಮ ತಂದೆ ತಾಯಿಗಳಿಬ್ಬರೂ ಸಂಪಾದಿಸಿದ ಪುಣ್ಯ ನಿಮ್ಮನ್ನು ರಕ್ಷಿಸಲಿ. ಸಂಜಯ ಮಹಾರಾಜ ನಮ್ಮೆಲ್ಲರನ್ನು ಕಾಪಾಡಲಿ, ನಿಮ್ಮ ತಂದೆ ತಪಸ್ಸಿನಿಂದ ಸಂಪಾದಿಸಿರುವ ಪುಣ್ಯದ ಪ್ರತಾಪ ನಿಮ್ಮನ್ನು ಅಮರರನ್ನಾಗಿಸಲಿ'.

ರಾಣಿ ಪುಸತಿದೇವಿ, ತನ್ನ ಸೊಸೆ ಇಂದಿನಿಂದ ಶ್ರೇಷ್ಠ ವಸ್ತ್ರ, ಆಭರಣಗಳನ್ನು ಧರಿಸಲಿ ಎಂದು ಅವುಗಳನ್ನು ಪೆಟ್ಟಿಗೆ ತುಂಬಿ ತುಂಬಿ ಕಳುಹಿಸಿದಳು. ಹತ್ತಿಬಟ್ಟೆ, ಕೌಶೇಯ ವಸ್ತ್ರ, ಖೋಮಕ ಮತ್ತು ಉದುಂಬರ ವಸ್ತ್ರಗಳನ್ನು ಕಳುಹಿಸಿದಳು. ಅವುಗಳನ್ನು ಧರಿಸಿದ ಮಾದ್ರಿದೇವಿ ಸೌಂದರ್ಯದಿಂದ ಹೊಳೆಯುತ್ತಿದ್ದಳು. ತಲೆಯ ಮೇಲೆ ಧರಿಸುವ, ಹಣೆಯ ಆಭರಣ, ರತ್ನಗಳಿಂದಾದ ಕೊರಳ ಮಾಲೆಗಳು ಇವನ್ನೆಲ್ಲ ಪುಸತಿದೇವಿ ಸೊಸೆಗೆ ಕಳುಹಿಸಿದಳು. ಉಗ್ಗತ್ಥನ, ಸಿಂಗಮಕ, ಮೇಖಲೆ ಹಾಗೂ ಪಾದದಲ್ಲಿ ಧರಿಸುವ ಆಭರಣಗಳನ್ನು ಅತ್ತೆ, ಸೊಸೆಗೆ ಕಳುಹಿಸಿದಳು. ದಾರದ ಮತ್ತು ದಾರವಿಲ್ಲದ ಆಭರಣಗಳು ಹೇರಳವಾಗಿದ್ದವು. ಅವುಗಳನ್ನು ಧರಿಸಿದ ಮಾದ್ರಿದೇವಿ ಸ್ವರ್ಗದ ದೇವಕನ್ನೆಯಂತೆ ಸುಶೋಭಿತಳಾದಳು. ಆಕೆ ತ್ರಯೋತ್ರಿಂಶ ಭವನದ ಅಪ್ಸರೆಯಂತೆ ಹೊಳೆಯುತ್ತಿದ್ದಳು. ಸ್ವರ್ಗದ ಅತ್ಯಂತ ಸುಂದರವಾದ ತೋಟದಲ್ಲಿ ಬೆಳೆದುನಿಂತ, ರಸತುಂಬಿದ ಬಂಗಾರದ ಪುಟ್ಟ ಬಾಳೆಹಣ್ಣು, ಗಾಳಿಯಲ್ಲಿ ತೊನೆದಂತೆ ತೋರುವ ತುಟಿಗಳುಳ್ಳ ಮಾದ್ರಿದೇವಿ ದೇವತೆಯಂತೆ ತೋರುತ್ತಿದ್ದಳು.

ಚೆನ್ನಾಗಿ ಮಾಗಿದ ನ್ಯಗ್ರೋಧಕ್ಕೆ ಸಮಾನವಾದ ತುಟಿಗಳನ್ನು ಹೊಂದಿದ್ದ ರಾಜಪುತ್ರಿ ಅಪಾರ ಸೌಂದರ್ಯದಿಂದ ಹೊಳೆಯುತ್ತಿದ್ದಳು. ನಂತರ ಮಾದ್ರಿದೇವಿಗೆ, ಅಪಾರ ಶಕ್ತಿಯ ಆಯುಧಗಳ ಆಘಾತವನ್ನು ತಡೆದುಕೊಳ್ಳಬಲ್ಲ ಮತ್ತು ತೀಕ್ಷ್ಣವಾದ ಬಾಣಗಳನ್ನು ಸಹಿಸಲು ಸಮರ್ಥವಾದ, ರಥದ ಅಚ್ಚಿನಂತೆ ಬಲಿಷ್ಠವಾದ ದಂತವುಳ್ಳ, ಪ್ರೌಢವಾದ, ದೊಡ್ಡ ಆನೆಯನ್ನು ತರಲಾಯಿತು. ಆಕೆ ಆ ಆನೆಯನ್ನೇರಿದಳು. ನಂತರ ವೆಸ್ಸಂತರ ಬೋಧಿಸತ್ವ ಮತ್ತು ಮಾದ್ರಿದೇವಿಯರು ತಮ್ಮ ತಮ್ಮ ಆನೆಗಳ ಮೇಲೆ ಕುಳಿತು ಅತ್ಯಂತ ವೈಭವದಿಂದ ಮಹಾರಾಜನಿದ್ದ ಡೇರೆಯ ಬಳಿಗೆ ಬಂದರು. ಅಲ್ಲಿಯವರೆಗೆ ತನ್ನ ಹನ್ನೆರಡು ಅಕ್ಷೋಹಿಣಿ ಸೇನೆಯೊಂದಿಗೆ, ವನಕ್ರೀಡೆಯನ್ನು ಅನುಭವಿಸಿದ ರಾಜ ಅವರಿಗಾಗಿ ಕಾದಿದ್ದ. ❖

ದಿನ ಭವಿಷ್ಯ

ಸೋಮವಾರ ಸೆಪ್ಟೆಂಬರ್ 27, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಹಸ್ತೆ ಷಷ್ಠೀ ಗಂ. 15-14 (ಹ. 12-20) ಸೋಮವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 23-47 (ಹ. 3-46) ಸಿದ್ಧಿ ನಾಮ ಯೋಗ ಗಂ. 24-53 ವಣಿಜ ಕರಣ ಗಂ. 15-14 ವಿಷ ಗಂ. 1-33 ಪುನರ್ವಿಷ ಗಂ. 39-18 ಅಮೃತ ಗಂ 14-51 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-12 ಸೂರ್ಯಾಸ್ತ: 6-10 ಅದೃಷ್ಟ ಸಂಖ್ಯೆ 1 2

ಮೇಷ: ಮನೆಯಲ್ಲಿ ನೆಮ್ಮದಿಯ ವಾತಾವರಣ. ನಿಷ್ಠೆ, ಪ್ರಾಮಾಣಿಕತೆಯಿಂದಾಗಿ ಯಶಸ್ಸು ಮತ್ತು ಪ್ರಶಂಸೆ ಪ್ರಾಪ್ತವಾಗುವುದು. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ವ್ಯಾಪಾರಿಗಳಿಗೆ ಉದ್ಯಮದಲ್ಲಿ ಪ್ರಗತಿ.

ವೃಷಭ: ಕಳೆದುಹೋದ ದಿನಗಳ ಬಗ್ಗೆ ಚಿಂತಿಸುವುದರಿಂದ ಪ್ರಯೋಜನವಿಲ್ಲ. ಹಿರಿಯರ ಸಲಹೆ ಸೂಚನೆಗಳನ್ನು ನಿರ್ಲಕ್ಷಿಸದಿರಿ. ಯಾವುದೇ ಕೆಲಸ ಕಾರ್ಯಗಳಲ್ಲಿ ಆತುರ ತೋರಿ ಗಂಡಾಂತರಕ್ಕೆ ಸಿಲುಕದಿರಿ.

ಮಿಥುನ: ಗೃಹಿಯರು ಹರಿತವಾದ ಆಯುಧಗಳಿಂದ ಸಂಕಷ್ಟ ಎದುರಿಸುವ ಸಾಧ್ಯತೆ. ವಿಶೇಷ ವ್ಯವಹಾರಗಳಲ್ಲಿ ಅಗತ್ಯ ಪ್ರೋತ್ಸಾಹಗಳು ದೊರಕುವುದು. ಸಹೋದರರಿಂದ ಸಹಕಾರ.

ಕರ್ಕಾಟಕ: ಮಿತ್ರ ವ್ಯವಹಾರಗಳಲ್ಲಿ ಜಾಗರೂಕರಾಗಿರುವುದ ಒಳ್ಳೆಯದು. ಮಕ್ಕಳಿಂದ ನೆಮ್ಮದಿ. ವಿದ್ಯಾಭ್ಯಾಸದಲ್ಲಿ ಉತ್ತಮ ಶ್ರದ್ಧೆಯಿಂದ ಸಫಲತೆ ಉಂಟಾಗುವುದು. ಯಂತ್ರೋಪಕರಣಗಳ ಖರೀದಿಗಾಗಿ ಖರ್ಚು.

ಸಿಂಹ: ದೀರ್ಘಕಾಲಿಕ ಅನಾರೋಗ್ಯದ ಸಮಸ್ಯೆಗಳಿಂದ ಮುಕ್ತರಾಗುವಿರಿ. ಪ್ರಾಪ್ತವಯಸ್ಕರಿಗೆ ಉತ್ತಮ ಸಂಬಂಧಗಳು ದೊರಕುವ ಸಾಧ್ಯತೆ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ತೊಡಕುಂಟಾಗುವ ಸಾಧ್ಯತೆ.

ಕನ್ಯಾ: ಮಾತೃವರ್ಗದವರಿಂದ ಸಹಕಾರ ದೊರೆಯುವುದು. ಆರೋಗ್ಯದಲ್ಲಿ ಏರುಪೇರಾಗುವ ಸಂಭವ ಇರುವುದರಿಂದ ವೈದ್ಯರ ಸಲಹೆ ಅತ್ಯಗತ್ಯ. ಅನವಶ್ಯಕ ವ್ಯವಹಾರಕ್ಕೆ ತಲೆಹಾಕದಿರುವುದು ಉತ್ತಮ.

ತುಲಾ: ಭೂ ವ್ಯವಹಾರಗಳಿಂದ ಲಾಭ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ ಉಂಟಾಗುವುದು. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ನೆಮ್ಮದಿಯ ಜೀವನಕ್ಕೆ ನಾಂದಿಯಾಗುವುದು.

ವೃಶ್ಚಿಕ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಸೋದರರಿಂದ ಸಲಹೆ ಸಹಕಾರ ದೊರಕಿ ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣುವಿರಿ. ವಿದೇಶದಿಂದ ಪ್ರಮುಖ ಸುದ್ದಿಯೊಂದು ಬರುವ ಸಾಧ್ಯತೆ ಇದೆ.

ಧನು: ನಿರೀಕ್ಷಿತ ಮೂಲಗಳಿಂದ ಧನಾಗಮನ. ವೃತ್ತಿ ಸಮಸ್ಯೆಗಳಿಂದ ಪರಿಹಾರ ಕಂಡುಕೊಳ್ಳುವಿರಿ. ಮಹಿಳೆಯರಿಗೆ ಕಲಾವಿದರುಗಳಿಗೆ ಉತ್ತಮ ಅವಕಾಶ ದೊರೆತು ಗೌರವಾದರಗಳು ಪ್ರಾಪ್ತವಾಗುವವು.

ಮಕರ: ದೈನಂದಿನ ಚಟುವಟಿಕೆಯಲ್ಲಿ ಉತ್ಸಾಹ. ಋಣ ಪರಿಹಾರದಿಂದ ಸಂತೃಪ್ತಿ ದೊರಕುವುದು. ವೃತ್ತಿಯಲ್ಲಿನ ಸಮಸ್ಯೆಗಳು ನಿವಾರಣೆ. ಸಾಮಾಜಿಕ ಗೌರವಕ್ಕೆ ಪಾತ್ರರಾಗುವಿರಿ.

ಕುಂಭ: ದೂರದ ಪ್ರಯಾಣ ಯೋಗ. ವಾಹನ ಖರೀದಿ ಸಾಧ್ಯತೆ. ನ್ಯಾಯಾಲಯದಲ್ಲಿ ಜಯ. ಚಿನ್ನ ಮುಂತಾದ ಹಳದಿ ಲೋಹ ವ್ಯಾಪಾರಿಗಳಿಗೆ ಉತ್ತಮ ಲಾಭದ ನಿರೀಕ್ಷೆ. ಕುಟುಂಬಸ್ಥರಿಂದ ಉತ್ತಮ ಸಹಕಾರ ದೊರಕಿ ನಿರಾಳತೆ.

ಮೀನ: ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ನೆರೆಹೊರೆಯವರೊಂದಿಗೆ ಕಲಹ ಸಂಭವವಿದ್ದು, ಸಮಾಧಾನದ ನಡವಳಿಕೆ ಅಗತ್ಯ. ಮಕ್ಕಳಿಂದ ನೆಮ್ಮದಿ ಸೌಖ್ಯ. ಗೃಹ ನಿರ್ಮಾಣ ಕೆಲಸಗಳಲ್ಲಿ ಪ್ರಗತಿ.

ನಿಮ್ಮ ಜನ್ಮದಿನ 27-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಅನುಕೂಲ. ವಾಣಿಜ್ಯ ಬೆಳೆಗಳಿಂದಲೂ ಅಧಿಕ ತಮ ಆದಾಯ. ಬೇರೆಯವರಿಗೆ ಸಹಾಯ ಮಾಡುವಲ್ಲಿ ನಿಷ್ಠೂರವಾಗಿ ವರ್ತಿಸುವಿರಿ.

ಪದಬಂಧ 4731

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅರ್ಧ ಅಂಗಿಯನ್ನು ಹಿಡಿದಿರುವ ಹೆಂಡತಿ! (3)
3.ಕಂಬದ ಬೋದಿಗೆಗೆ ಜೋಡಿಸಿರುವ ಅಲಂಕಾರದ ವಿಗ್ರಹ (4)
5.ಕೊನೆಗೆ ಜಾಲ ಬೀಸಿದಾಗಲೇ ಇದು ನಿರಾಯಾಸ! (4)
6.ವಟಗುಟ್ಟುವವನ ಹತ್ತಿರವಿರುವ ಬ್ರಹ್ಮಚಾರಿ! (2)
7.ಗಮನ ಹರಿಸಿ ನೋಡಿ! ಆಕಾಶ ಕಂಡೀತು! (3)
9.ತಿರುಗಿಸಿದರೂ ಇದು ಹೊಸತು (3)
12.ಪರಾಜಯದಲ್ಲೂ ಗೆಲುವು ನುಸುಳಿದೆಯಲ್ಲಾ! (2)
13.ಮಡಿವಂತಿಕೆ ತೋರುತ್ತಿರುವ ಅಗಸ (4)
15.ಆಸರೆ ಮನೆಯಲ್ಲ !ಇದು ಜೈಲು! (4)
16.ಕರುವಿನ ಪಚನಾಂಗ ಇಲ್ಲಿ ಕಾಣಿಸುತ್ತಿದೆ (3)

ಮೇಲಿಂದ ಕೆಳಕ್ಕೆ

1.ಅತ್ತಿತ್ತ ನೋಡುವಾಗಲೇ ಬಂದಳಲ್ಲಾಮಾವನ ಹೆಂಡತಿ (2)
2.ಗೀಟು ಹಾಕಿದವ ಮಾಡಿದ ಮೆರುಗಿನ ಲೇಪನ (3)
3.ಕರೆದು ಹೆಣ್ಣು ಕೊಟ್ಟಾಗ ಅಳಿಯನಿಗೆ ಈ ಅಪಸ್ಮಾರವಂತೆ! (4)
4.ವೃತ್ತ ರೇಖೆಯನ್ನು ಎಳೆಯುವ ಸಲಕರಣೆ (3)
6.ಆ ವರ್ತಕನೇ ತಿಳಿಸಿಬಿಡುತ್ತಾನೆ ಎಲ್ಲಾ ಸುದ್ದಿ! (4)
8. ನಯದೊಳಗೇ ನೋಡಿ! ಉದಯದ ಪ್ರಾರಂಭವನ್ನು! (4)
10. ಮನೆಯ ಹಜಾರವಿದು (4)
11.ಹಸೆ ಬರೆಯುವ ಜಾಗದಲ್ಲೇ ಬೆಳೆದ ಪಾಚಿ (3)
12.ಉತ್ತರದ ಕಡೆಯವರ ಸ್ನಾನ (3)
14.ಅಗುಳು ನುಂಗುವಾಗ ಕಾಣಿಸಿರುವ ಕಣ್ಣೀರು (2)



4730ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಚ್ಛ್ವಾಸ 3.ಗಾವುದ 5.ಭಿನ್ನಾಭಿಪ್ರಾಯ 7.ಕ್ಷುಲ್ಲಕ 8.ಕಹಳೆ 9.ಓರಿಗೆ 11.ಗರತಿ 13.ಆಹ್ವಾನ 15.ಶುಕ್ತಿಕೆ 16.ವಿಮಾನಯಾನ 17.ಗುಲಾಲು 18.ಕದಿರು

ಮೇಲಿಂದ ಕೆಳಕ್ಕೆ: 2.ಸಭಿಕ 3.ಗಾಯಕ 6.ಭಿಕಾರಿ 9.ಓದುಗ 10.ಗೆಳತಿ 12.ರಸನ 14.ನವಿಲು 15.ಶುನಕ

ಸುಡೊಕು 5117

				6		1		
9							7	8
	8		7			2		6
6		1		5		7		9
			8		6			
8				7		5		2
3		9		1				
			6		7	9	3	4
7		8		2			1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5116 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಸ್ವಾಧೀನದಲ್ಲಿ ಸರ್ಕಾರಕ್ಕೆ ಇಲ್ಲ ಆಸಕ್ತಿ: ವಿಐಎಲ್

ನವದೆಹಲಿ (ಪಿಟಿಐ): 'ದೂರಸಂಪರ್ಕ ವಲಯದ ಯವುದೇ ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳುವ ಆಸಕ್ತಿಯನ್ನು ತಾನು ಹೊಂದಿಲ್ಲ ಎಂದು ಕೇಂದ್ರ ಸರ್ಕಾರವು ಸ್ಪಷ್ಟಪಡಿಸಿದೆ' ಎಂದು ವೊಡಾಫೋನ್ ಐಡಿಯಾ ಲಿಮಿಟೆಡ್‌ನ (ವಿಐಎಲ್) ಸಿಇಒ ರವೀಂದರ್ ಟಕ್ಕರ್ ಹೇಳಿದ್ದಾರೆ.

'ಸರ್ಕಾರದೊಂದಿಗೆ ವಿವಿಧ ಹಂತಗಳಲ್ಲಿ ನಾನು ಸಂವಹನ ನಡೆಸಿದ್ದೇನೆ. ಸರ್ಕಾರವು ಯಾವುದೇ ಇತರ ಟೆಲಿಕಾಂ ಕಂಪನಿಯನ್ನು ಹೊಂದಲು ಅಥವಾ ಸ್ವಾಧೀನಪಡಿಸಿಕೊಳ್ಳಲು ಅಥವಾ ನಿರ್ವಹಿಸಲು ಆಸಕ್ತಿ ಹೊಂದಿಲ್ಲ ಎಂಬುದು ಸ್ಪಷ್ಟವಾಗಿದೆ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ಕಾನಿಷ್ಕ ವಿಶ್ವಾಸ್‌ಗೆ 'ಶಾಂತಿ ಸ್ವರೂಪ್ ಭಟ್ನಾಗರ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕಾನಿಷ್ಕ ವಿಶ್ವಾಸ್

ಬೆಂಗಳೂರು: ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರೀಸರ್ಚ್‌ನ (ಜೆಎನ್‌ಸಿಎಎಸ್‌ಆರ್) ಪ್ರಾಧ್ಯಾಪಕ ಕಾನಿಷ್ಕ ವಿಶ್ವಾಸ್ ಅವರು 2021ನೇ ಸಾಲಿನ 'ಶಾಂತಿ ಸ್ವರೂಪ್ ಭಟ್ನಾಗರ್' ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವವರು ಹಾಗೂ ವಿಶೇಷ ಸಂಶೋಧನೆ ಕೈಗೊಂಡವರಿಗೆ ಪ್ರತಿ ವರ್ಷವೂ ಈ ಪ್ರಶಸ್ತಿ ನೀಡಲಾಗುತ್ತದೆ. ಕಾನಿಷ್ಕ ಅವರು ರಸಾಯನ ವಿಜ್ಞಾನ ಕ್ಷೇತ್ರದಲ್ಲಿ ಹಲವು ವಿಶಿಷ್ಟ ಸಂಶೋಧನೆಗಳನ್ನು ಮಾಡಿರುವುದರಿಂದ ಅವರಿಗೆ ದೇಶದ ಅತ್ಯುನ್ನತ ವಿಜ್ಞಾನ ಪುರಸ್ಕಾರ ಒಲಿದಿದೆ.

ಕಾನಿಷ್ಕ ನೇತೃತ್ವದ ಸಂಶೋಧಕರ ತಂಡವು ತ್ಯಾಜ್ಯ ಶಾಖವನ್ನು ವಿದ್ಯುತ್ ಅನ್ನಾಗಿ ಪರಿವರ್ತಿಸಬಲ್ಲ ಪರಿಸರ ಸ್ನೇಹಿ 'ಥರ್ಮೋಎಲೆಕ್ಟ್ರಿಕ್' ತಂತ್ರಾಂಶವನ್ನು ಮಾರ್ಚ್‌ನಲ್ಲಿ ಅಭಿವೃದ್ಧಿಪಡಿಸಿತ್ತು. ಲ್ಯಾಪ್‌ಟ್ಯಾಪ್‌ನಿಂದ ಉತ್ಪತ್ತಿಯಾದ ಶಾಖವನ್ನು ಮೊಬೈಲ್‌ಚಾರ್ಜ್‌ಮಾಡಲು, ಮೊಬೈಲ್‌ನಿಂದ ಉತ್ಪತ್ತಿಗೊಂಡ ಶಾಖವನ್ನು ಕೈಗಡಿಯಾರ ರೀಚಾರ್ಜ್ ಮಾಡಲು ಬಳಸುವುದು ಈ ತಂತ್ರಾಂಶದ ಉದ್ದೇಶ. ವಿಶ್ವದ ಪ್ರತಿಷ್ಠಿತ ವಿಜ್ಞಾನದ ಜರ್ನಲ್ 'ಸೈನ್ಸ್'ನಲ್ಲಿ ಈ ಸಂಶೋಧನೆಯ ಕುರಿತಾದ ವರದಿ ಪ್ರಕಟವಾಗಿತ್ತು.

ಇ.ವಿ. ಮೇಲಿನ ಆಮದು ಸುಂಕ ತಗ್ಗಲಿ: ಔಡಿ

ನವದೆಹಲಿ (ಪಿಟಿಐ): ಭಾರತಕ್ಕೆ ಆಮದು ಮಾಡಿಕೊಳ್ಳುವ ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ಮೇಲೆ ಗರಿಷ್ಠ ಸುಂಕ ಇರುವುದು ದೇಶದಲ್ಲಿ ಇ.ವಿ.ಗಳ ಬೆಳವಣಿಗೆಗೆ ಅಡ್ಡಿಯಾಗಿದೆ ಎಂದು ಐಷಾರಾಮಿ ಕಾರುಗಳನ್ನು ತಯಾರಿಸುವ, ಜರ್ಮನಿಯ ಔಡಿ ಕಂಪನಿ ಹೇಳಿದೆ. ಸುಂಕ ತಗ್ಗಿಸುವುದರಿಂದ ಹೆಚ್ಚು ವಾಹನಗಳನ್ನು ಮಾರಾಟ ಮಾಡಲು ಹಾಗೂ ಸ್ಥಳೀಯ ತಯಾರಿಕೆಗೆ ಹೂಡಿಕೆ ಮಾಡಲು ನೆರವಾಗಲಿದೆ ಎಂದು ತಿಳಿಸಿದೆ.

ಬಲ್ಬೀರ್ ಸಿಂಗ್

ಕಂಪನಿಯು ದೇಶದಲ್ಲಿ ಸದ್ಯ ಐದು ಇ.ವಿ.ಗಳನ್ನು ಮಾರಾಟ ಮಾಡುತ್ತಿದೆ. ಸುಂಕ ತಗ್ಗಿಸುವುದರಿಂದ ವಾಹನಗಳ ಬೆಲೆ ಕಡಿಮೆ ಮಾಡಲು ಅನುಕೂಲ ಆಗಲಿದ್ದು, ಇದರಿಂದ ಮಾರುಕಟ್ಟೆಯಲ್ಲಿ ಒಂದು ನಿರ್ದಿಷ್ಟ ಪಾಲು ಹೊಂದಲು ಸಾಧ್ಯವಾಗಲಿದೆ ಎಂದು ಹೇಳಿದೆ.

ಮೂರರಿಂದ ಐದು ವರ್ಷಗಳವರೆಗೆ ಸುಂಕದಲ್ಲಿ ರಿಯಾಯಿತಿ ದೊರೆತರೆ ಮಾರಾಟ ಹೆಚ್ಚಾಗಲಿದ್ದು, ಆಗ ಭಾರತದಲ್ಲಿಯೇ ತಯಾರಿಕೆ ಆರಂಭಿಸಲು ಹೂಡಿಕೆ ಮಾಡುವಂತೆ ನಮ್ಮ ಕೇಂದ್ರ ಕಚೇರಿಗೆ ಮನವರಿಕೆ ಮಾಡಲು ಸಾಧ್ಯ ಎಂದು ಕಂಪನಿಯ ಭಾರತದ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹455

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಪರಭಾಷೆ ಪದ ಬಳಕೆಗೆ ಮಡಿವಂತಿಕೆ ಬೇಡ'

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಆಲದಮರ

ಎಂ.ಎಸ್. ನರಸಿಂಹಮೂರ್ತಿ

ಎಚ್. ಡುಂಡಿರಾಜ್

ರಿಚರ್ಡ್ ಲೂಯಿಸ್

ಅಸಾದುಲ್ಲಾ ಬೇಗ್

ಮನು ಹಂದಾಡಿ

ಆಲದಮರ (ಪ್ರಜಾವಾಣಿ ಕ್ಲಬ್ ಹೌಸ್): 'ಬೇರೆ ಭಾಷೆಯ ಪದಗಳನ್ನು ನಮ್ಮದಾಗಿಸಿಕೊಳ್ಳುವ ಮೂಲಕ ಕನ್ನಡವನ್ನು ಮತ್ತಷ್ಟು ಸಮೃದ್ಧಗೊಳಿಸುವ ಕೆಲಸವಾಗಬೇಕು. ಪರಭಾಷೆಯ ಬಳಕೆ ವಿರುದ್ಧ ಆವೇಶ ಬೇಡ; ಸಮಾವೇಶ ಬೇಕು'

ಇಂತಹ ಒಕ್ಕೊರಲಿನ ಅಭಿಪ್ರಾಯಕ್ಕೆ 'ಪ್ರಜಾವಾಣಿ' ಕ್ಲಬ್ ಹೌಸ್‌ನ 'ಆಲದಮರ' ವೇದಿಕೆಯಾಯಿತು. 'ಕಂಗ್ಲಿಷ್, ಇಂಗ್ಲಿಷ್ ಮತ್ತು ಕನ್ನಡ' ಕುರಿತು ನಡೆದ ಚರ್ಚೆಯಲ್ಲಿ ನೂರಾರು ಕೇಳುಗರು ಭಾಗಿಯಾದರು. ಕನ್ನಡ ಭಾಷೆಯ ಬೆಳವಣಿಗೆಗೆ ಕಂಗ್ಲಿಷ್ ಅನಿವಾರ್ಯವಾಗಿದೆ. ಪರಭಾಷೆಗಳಿಂದ ಪದಗಳನ್ನು ಎರವಲು ಪಡೆಯುವಾಗ ಬಳಕೆಗೆ ಮಡಿವಂತಿಕೆ ಬೇಡ ಎನ್ನುವ ಅಭಿಪ್ರಾಯ ಪಡಿಮೂಡಿತು.

ಹಾಸ್ಯ ಲೇಖಕ ಎಂ.ಎಸ್. ನರಸಿಂಹಮೂರ್ತಿ ಮಾತನಾಡಿ, 'ಪರಭಾಷೆಯ ಶಬ್ದಗಳನ್ನು ಯಥಾವತ್ತಾಗಿ ಬಳಸಿಕೊಳ್ಳಬೇಕು. ಅವುಗಳ ಅನುವಾದಕ್ಕೆ ಮುಂದಾದರೆ ಜನರು ಸ್ವೀಕರಿಸುವುದು ಕಡಿಮೆ. ವಿಶ್ವದ ಹಲವು ಭಾಷೆಯ ಪದಗಳನ್ನು ಆಕ್ಸ್‌ಫರ್ಡ್ ಪದಕೋಶ ಯಥಾವತ್ತಾಗಿ ಸ್ವೀಕರಿಸಿದೆ. ಹಾಗಾಗಿಯೇ, ಅದರಲ್ಲಿ 1.45 ಲಕ್ಷ ಪದಗಳು ಸೇರ್ಪಡೆಯಾಗಿವೆ. ಇತ್ತೀಚೆಗೆ ಭಾರತೀಯರ ಗುಲಾಬ್ ಜಾಮೂನು, ಚಮಚಾ ಪದ ಕೂಡ ಸೇರ್ಪಡೆಯಾಗಿವೆ. ಅಂತಹ ಬೆಳವಣಿಗೆ ಕನ್ನಡ ಪದಕೋಶದಲ್ಲಿಯೂ ಆಗಬೇಕು' ಎಂದು ಪ್ರತಿಪಾದಿಸಿದರು.

ಇದಕ್ಕೆ ಚುಟುಕು ಕವಿ ಎಚ್. ಡುಂಡಿರಾಜ್ ಕೂಡ ಧ್ವನಿಗೂಡಿಸಿದರು. 'ಕನ್ನಡದಲ್ಲಿ ಇಂಗ್ಲಿಷ್ ಹಿತಮಿತವಾಗಿದ್ದರೆ ತೊಂದರೆಯಿಲ್ಲ. ಕ್ರಿಯಾಪದವನ್ನು ಕನ್ನಡದಲ್ಲಿ ಬಳಸಿ ಉಳಿದದ್ದನ್ನು ಇಂಗ್ಲಿಷ್‌ನಲ್ಲಿ ಬಳಸುವ ಪ್ರವೃತ್ತಿ ಕನ್ನಡಕ್ಕೆ ಅಪಾಯಕಾರಿ. ಕನ್ನಡ ಕಲಿಕೆ, ಬಳಕೆಗೆ ಕೀಳರಿಮೆ ಸಲ್ಲದು. ಮಕ್ಕಳಿಗೆ ಕನ್ನಡ ಕಲಿಕೆಯಲ್ಲಿ ಹಿಂದಡಿ ಇಡಬಾರದು' ಎಂದು ಸಲಹೆ ನೀಡಿದರು.

ಹಾಸ್ಯ ಭಾಷಣಕಾರ ರಿಚರ್ಡ್ ಲೂಯಿಸ್ ಕಂಗ್ಲಿಷ್ ಪದ ಬಳಕೆಯು ನಗಿಸುವುದಕ್ಕೆ ಹೇಗೆ ಪೂರಕವಾಗಿದೆ ಎಂಬುದನ್ನು ಹಾಸ್ಯ ಚಟಾಕಿಗಳ ಮೂಲಕ ಪ್ರಸ್ತುತಪಡಿಸಿದರು. 'ಪರಭಾಷಿಕರಿಗೆ ಕನ್ನಡ ಕಲಿಯುವ ಆಸಕ್ತಿ ಇರುತ್ತದೆ. ಅದಕ್ಕೆ ನಾವು ನೀರೆರದು ಪೋಷಿಸಬೇಕು. ಅವರನ್ನು ಅಪಹಾಸ್ಯ ಮಾಡಬಾರದು. ಇದು ಕನ್ನಡದ ಬೆಳವಣಿಗೆಗೂ ಮಾರಕ' ಎಂದು ಅಭಿಪ್ರಾಯಪಟ್ಟರು.

'ಕಂಗ್ಲಿಷ್ ಬಳಕೆ ಕನ್ನಡದ ಬೆಳವಣಿಗೆಗೆ ಪೂರಕವಾಗಿಯೇ ಇದೆ. ಅಡ್ಡಿಯಾಗುತ್ತದೆ ಎಂಬುದನ್ನು ನಾನು ಒಪ್ಪುವುದಿಲ್ಲ' ಎಂದ ಶಾಯರಿ ಕವಿ ಅಸಾದುಲ್ಲಾ ಬೇಗ್, ಶಾಯಿರಿಗಳ ಮೂಲಕ ಕೇಳುಗರನ್ನು ರಂಜಿಸಿದರು.

ನಗೆ ಭಾಷಣಕಾರ, ಶಿಕ್ಷಕರಾದ ಮನು ಹಂದಾಡಿ, 'ಪ್ರಸ್ತುತ ಪರಭಾಷೆಯ ಹಲವು ಪದಗಳು ದಿನಬಳಕೆಯ ಪದಗಳಾಗಿವೆ. ಅವುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ವ್ಯಾವಹಾರಿಕ ಬಳಕೆಗೆ ಮುಂದಾದಾಗ ಗೊಂದಲ ತಲೆದೋರುತ್ತದೆ. ಬೇಕರಿ, ಬ್ರೆಡ್, ಟ್ರ್ಯಾಕ್ಟರ್ ಮುಂತಾದ ಪದಗಳು ಕನ್ನಡದೊಂದಿಗೆ ಬೆರೆತುಹೋಗಿವೆ. ಅವುಗಳನ್ನು ಯಥಾವತ್ತಾಗಿಯೇ ಬಳಸಬೇಕು' ಎಂದು ಹೇಳಿದರು.

ಮ್ಯೂಚುವಲ್ ಫಂಡ್: ಬೇಕೇ 'ಎನ್‌ಎಫ್‌ಒ' ಹೂಡಿಕೆ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮ್ಯೂಚುವಲ್ ಫಂಡ್ ಹೌಸ್‌ಗಳು ಹೊಸ ಫಂಡ್ ಆರಂಭಿಸುವಾಗ ಬಹಳಷ್ಟು ಸುದ್ದಿಯಾಗುತ್ತದೆ. ಎಲ್ಲೆಡೆ ಜಾಹೀರಾತುಗಳು, ಟಿ.ವಿ. ವಾಹಿನಿಗಳಲ್ಲಿ ಫಂಡ್ ಮ್ಯಾನೇಜರ್ ಸಂದರ್ಶನಗಳು ನಡೆಯುತ್ತವೆ. ಈ ರೀತಿಯ ಒಂದು ಅಬ್ಬರದ ಪ್ರಚಾರ ನಡೆಯುತ್ತಿರುವಾಗ ಸಹಜವಾಗಿಯೇ ಗೊಂದಲಕ್ಕೆ ಒಳಗಾಗಿ, ಪೂರ್ವಾಪರ ಯೋಚಿಸದೆಯೇ ನೀವು ಹೊಸ ಫಂಡ್‌ನಲ್ಲಿ ಹೂಡಿಕೆ ಮಾಡುವ ನಿರ್ಧಾರಕ್ಕೆ ಬಂದುಬಿಡುತ್ತೀರಿ. ಆದರೆ, ಮ್ಯೂಚುವಲ್ ಫಂಡ್ ಕಂಪನಿಗಳ ಹೊಸ ಫಂಡ್‌ಗಳಲ್ಲಿ, ಅಂದರೆ ಎನ್‌ಎಫ್‌ಒಗಳಲ್ಲಿ ಹೂಡಿಕೆ ಮಾಡಬೇಕೇ? ಇದರಿಂದ ಯಾರಿಗೆ ಲಾಭ? ಯಾರಿಗೆ ನಷ್ಟ?

ಏನಿದು 'ಎನ್‌ಎಫ್‌ಒ'?: ನ್ಯೂ ಫಂಡ್ ಆಫರ್ ಎಂಬುದು 'ಎನ್‌ಎಫ್‌ಒ'ದ ವಿಸ್ತೃತ ರೂಪ. ಮ್ಯೂಚುವಲ್ ಫಂಡ್ ಹೌಸ್‌ಗಳು ಹೊಸದಾಗಿ ಒಂದು ಮ್ಯೂಚುವಲ್ ಫಂಡ್ ಆರಂಭಿಸುವ ಸಲುವಾಗಿ ಹೂಡಿಕೆದಾರರಿಂದ ನಿಧಿ ಸಂಗ್ರಹಿಸುವುದನ್ನು ಸರಳವಾಗಿ ನ್ಯೂ ಫಂಡ್ ಆಫರ್ ಎಂದು ಕರೆಯಬಹುದು.

ಮ್ಯೂಚುವಲ್ ಫಂಡ್ ಹೌಸ್‌ಗಳು ಎನ್‌ಎಫ್‌ಒ ಆರಂಭಿಸುವಾಗ ಹಣ ತೊಡಗಿಸಲು ಹೂಡಿಕೆದಾರರಿಗೆ ಕೆಲವು ದಿನಗಳ (ಸಾಮಾನ್ಯವಾಗಿ 15 ದಿನಗಳು) ಕಾಲಾವಕಾಶ ನೀಡುತ್ತವೆ. ಈ ಕಾಲಾವಕಾಶ ಮುಗಿದ ಮೇಲೆ, ಇಂತಹ ಬಹುತೇಕ ಮ್ಯೂಚುಯಲ್ ಫಂಡ್‌ಗಳು ಓಪನ್ ಎಂಡೆಡ್ ಫಂಡ್‌ಗಳಾಗಿ ಬದಲಾಗುತ್ತವೆ. ಓಪನ್ ಎಂಡೆಡ್ ಫಂಡ್‌ಗಳಾದ ಮೇಲೆ ಮತ್ತೆ ಹೊಸ ಹೂಡಿಕೆಗಳನ್ನು ಆ ಫಂಡ್‌ಗೆ ಪಡೆಯಬಹುದು. ಅಂದರೆ ಮತ್ತೆ ಯಾರು ಬೇಕಾದರೂ ಹೂಡಿಕೆ ಮಾಡುವ ಅವಕಾಶ ಸಿಗುತ್ತದೆ. ಸಾಮಾನ್ಯವಾಗಿ 'ಎನ್‌ಎಫ್‌ಒ'ಗಳು ಹೀಗೆ ರಚನೆಯಾಗುತ್ತವೆ.

'ಎನ್‌ಎಫ್‌ಒ'ಗಳಲ್ಲಿ ಎಷ್ಟು ವಿಧ, ಯಾವುದನ್ನು ಪರಿಗಣಿಸಬೇಕು?: 'ಎನ್‌ಎಫ್‌ಒ' ಮ್ಯೂಚುವಲ್ ಫಂಡ್ ಓಪನ್ ಎಂಡೆಡ್ ಮಾದರಿಯದ್ದಾ ಅಥವಾ ಕ್ಲೋಸ್ ಎಂಡೆಡ್ ಮಾದರಿಯದ್ದಾ ಎಂದು ನೋಡುವುದು ಬಹಳ ಮುಖ್ಯ. ಓಪನ್ ಎಂಡೆಡ್ ಆಗಿದ್ದರೆ ಮೇಲೆ ಹೇಳಿರುವ ಹಾಗೆ ಹೊಸ ಹೂಡಿಕೆಗಳನ್ನು ಪಡೆಯಲು ಅವಕಾಶವಿರುತ್ತದೆ. ಆದರೆ, ಕ್ಲೋಸ್ ಎಂಡೆಡ್ ಫಂಡ್‌ನಲ್ಲಿ ಹೊಸ ಹೂಡಿಕೆಗಳಿಗೆ ಅವಕಾಶವಿರುವುದಿಲ್ಲ. 'ಎನ್‌ಎಫ್‌ಒ' ಅವಧಿ ಮುಗಿದ ಮೇಲೆ ಯಾವುದೇ ಹೂಡಿಕೆಗಳನ್ನೂ ಕ್ಲೋಸ್ ಎಂಡೆಡ್ ಫಂಡ್‌ನಲ್ಲಿ ಪಡೆಯುವಂತಿಲ್ಲ. 'ಎನ್‌ಎಫ್‌ಒ' ಕ್ಲೋಸ್ ಎಂಡೆಡ್ ಆಗಿದ್ದಲ್ಲಿ ಹೂಡಿಕೆ ಪರಿಗಣಿಸಬಹುದು. ಆದರೆ ಓಪನ್ ಎಂಡೆಡ್ ಆದಲ್ಲಿ ಎಚ್ಚರಿಕೆ ಬಹಳ ಮುಖ್ಯ.

'ಎನ್‌ಎಫ್‌ಒ' ಪೂರ್ವಾಪರ ತಿಳಿಯಲು ಸಾಧ್ಯವಿಲ್ಲ: ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ಮುನ್ನ ಅದರ ಪೂರ್ವಾಪರ ತಿಳಿದು ಮುನ್ನಡೆಯುತ್ತೇವೆ. ಈ ಹಿಂದೆ ಆ ಫಂಡ್ ಎಷ್ಟು ಲಾಭ ಕೊಟ್ಟಿದೆ, ಅದರ ಫಂಡ್ ಮ್ಯಾನೇಜರ್ ಯಾರು, ರೇಟಿಂಗ್ ಎಷ್ಟಿದೆ, ಬೇರೆ ಫಂಡ್‌ಗಳಿಗೆ ಹೋಲಿಸಿದರೆ ನಿರ್ದಿಷ್ಟ ಫಂಡ್ ಎಷ್ಟು ಉತ್ತಮ, ಯಾವ ಕಂಪನಿಗಳಲ್ಲಿ ಮತ್ತು ವಲಯಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂಬ ಅಂದಾಜು ತೆಗೆದುಕೊಳ್ಳುತ್ತೇವೆ. ಆದರೆ 'ಎನ್‌ಎಫ್‌ಒ' ಮೂಲಕ ಸೃಷ್ಟಿಯಾಗುವ ಹೊಸ ಫಂಡ್‌ನಲ್ಲಿ ಈ ಯಾವ ಅಂಶಗಳನ್ನೂ ಅಳೆಯಲು ಸಾಧ್ಯವಿಲ್ಲ. ಫಂಡ್ ಹೊಸದಾಗಿ ಆಗುತ್ತಿರುವ ಕಾರಣ ಪೂರ್ವಾಪರ ತಿಳಿದು ಹೂಡಿಕೆ ನಿರ್ಧಾರ ಮಾಡಲು ಸಾಧ್ಯವಿಲ್ಲ. ಅಲ್ಲದೆ, ಹೊಸ ಫಂಡ್ ರೂಪಿಸಿದಾಗ ಅದನ್ನು ಲಾಭದ ಹಳಿಗೆ ತರಲು ಫಂಡ್ ಮ್ಯಾನೇಜರ್‌ಗಳು ಸಮಯ ತೆಗೆದುಕೊಳ್ಳುತ್ತಾರೆ.

ಈ ಎಲ್ಲ ಅಂಶಗಳನ್ನು ಪರಿಗಣಿಸಿ ನೋಡಿದಾಗ ಹೊಸ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಬದಲು ಇರುವ ಫಂಡ್‌ಗಳನ್ನೇ ಅಳೆದು–ತೂಗಿ ನೋಡಿ, ಒಂದು ಉತ್ತಮ ಫಂಡ್ ಆಯ್ದುಕೊಳ್ಳುವುದು ಲೇಸು.

'ಎನ್‌ಎಫ್‌ಒ' ಅಂದರೆ ಐಪಿಒ ಅಲ್ಲ: 'ಎನ್‌ಎಫ್‌ಒ' ಒಂದು ರೀತಿಯಲ್ಲಿ ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ರೀತಿಯೇ ಎಂದು ಕೆಲವರು ದಿಕ್ಕು ತಪ್ಪಿಸುತ್ತಾರೆ. ಅಂಥವರ ಬಗ್ಗೆ ಜಾಗೃತರಾಗಿರಿ. ಐಪಿಒದಲ್ಲಿ ಸೀಮಿತ ಸಂಖ್ಯೆಯ ಷೇರುಗಳನ್ನು ಸಾರ್ವಜನಿಕರಿಗೆ ಮೊದಲ ಬಾರಿಗೆ ಒದಗಿಸಲಾಗುತ್ತದೆ. ಆದರೆ ಓಪನ್ ಎಂಡೆಡ್ 'ಎನ್‌ಎಫ್‌ಒ'ದಲ್ಲಿ ನಿಧಿ ಬೆಳೆಯುತ್ತಲೇ ಹೋಗುತ್ತದೆ. ಇಲ್ಲಿ ನಿಧಿಗೆ ಮಿತಿ ಎನ್ನುವುದಿಲ್ಲ.

'ಎನ್‌ಎಫ್‌ಒ' ದುಬಾರಿ: ಪ್ರತಿ ಮ್ಯೂಚುವಲ್ ಫಂಡ್‌ಗೂ ನಿರ್ವಹಣಾ ಶುಲ್ಕವಿರುತ್ತದೆ. ಆದರೆ 'ಎನ್‌ಎಫ್‌ಒ'ಗಳಲ್ಲಿ ವೆಚ್ಚ ಅನುಪಾತ ಜಾಸ್ತಿ. ಭಾರತದಲ್ಲಿ ಮ್ಯೂಚುವಲ್ ಫಂಡ್ ಕಂಪನಿ ನಿರ್ವಹಿಸುವ ಒಟ್ಟು ಮೊತ್ತ ಕಡಿಮೆಯಿದ್ದರೆ ಹೆಚ್ಚು ಶುಲ್ಕ ವಿಧಿಸಲು ಅವಕಾಶವಿದೆ. ಹಾಗಾಗಿ 'ಎನ್‌ಎಫ್‌ಒ'ಗಳಲ್ಲಿ ಶುಲ್ಕ ಹೆಚ್ಚಿಗೆಯಾಗಿ ಹೂಡಿಕೆದಾರನಿಗೆ ಅದರ ಹೊರೆ ವರ್ಗಾವಣೆಯಾಗುತ್ತದೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ದಾಖಲೆ ಬರೆದ ಸೆನ್ಸೆಕ್ಸ್

ಷೇರುಪೇಟೆ ಸೂಚ್ಯಂಕಗಳು ಸತತ ಐದನೇ ವಾರವೂ ಏರಿಕೆ ಕಂಡಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಕ್ರಮವಾಗಿ 60,333 ಮತ್ತು17,947 ಅಂಶಗಳನ್ನು ತಲುಪಿ ಹೊಸ ದಾಖಲೆ ಬರೆದಿವೆ. ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಶೇ 1.75ರಷ್ಟು ಗಳಿಕೆ ಕಂಡಿದ್ದರೆ, ನಿಫ್ಟಿ ಶೇ 1.52ರಷ್ಟು ಗಳಿಕೆ ಕಂಡಿದೆ.

ಆರ್ಥಿಕ ಚೇತರಿಕೆ, ಕೋವಿಡ್ ಮೂರನೇ ಅಲೆಯ ತೀವ್ರತೆ ಅಷ್ಟಾಗಿ ಇರದು ಎಂಬ ಆಶಾಭಾವ, ಮುಂಬರುವ ತ್ರೈಮಾಸಿಕ ಫಲಿತಾಂಶಗಳು ಸಕಾರಾತ್ಮಕವಾಗಿರುವ ನಿರೀಕ್ಷೆ, ಅಮೆರಿಕದ ಫೆಡರಲ್ ಬ್ಯಾಂಕ್ ಸದ್ಯಕ್ಕೆ ಬಡ್ಡಿ ದರ ಪರಿಷ್ಕರಣೆ ಮಾಡುವುದಿಲ್ಲ ಎಂದು ಹೇಳಿರುವುದು, ಚೀನಾದ ಅತಿ ದೊಡ್ಡ ರಿಯಲ್ ಎಸ್ಟೇಟ್ ಸಂಸ್ಥೆ ಎವರ್‌ಗ್ರಾಂದೆ ಬಿಕ್ಕಟ್ಟಿನ ನಡುವೆಯೂ ರಿಯಲ್ ಎಸ್ಟೇಟ್ ಷೇರುಗಳಲ್ಲಿ ಖರೀದಿ ಭರಾಟೆ ಕಂಡುಬಂದದ್ದು, ದೇಶಿ ಸಾಂಸ್ಥಿಕ ಹೂಡಿಕೆದಾರರು ಹೆಚ್ಚು ಹೂಡಿಕೆ ಮಾಡಿದ್ದು ಸೇರಿ ಹಲವು ಅಂಶಗಳು ಸೆನ್ಸೆಕ್ಸ್ 60,000 ಅಂಶಗಳ ಗಡಿ ದಾಟಿ ದಾಖಲೆ ಬರೆಯಲು ಕಾರಣವಾದವು.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಬಜಾಜ್ ಫಿನ್‌ಸರ್ವ್ ಶೇ 10ರಷ್ಟು, ಎಚ್‌ಸಿಎಲ್ ಟೆಕ್ ಶೇ 7ರಷ್ಟು, ಒಎನ್‌ಜಿಸಿ ಶೇ 6ರಷ್ಟು, ಕೋಲ್ ಇಂಡಿಯಾ ಶೇ 6ರಷ್ಟು, ಬಜಾಜ್ ಫೈನಾನ್ಸ್ ಶೇ 5ರಷ್ಟು ಗಳಿಸಿವೆ. ಟಾಟಾ ಸ್ಟೀಲ್ ಶೇ 8ರಷ್ಟು, ಬಿಪಿಸಿಎಲ್ ಶೇ 5ರಷ್ಟು, ಟಾಟಾ ಕನ್ಸೂಮರ್ ಶೇ 4ರಷ್ಟು, ಶ್ರೀ ಸಿಮೆಂಟ್ ಶೇ 4ರಷ್ಟು ಕುಸಿದಿವೆ.

60 ಸಾವಿರ ದಾಟಿದ ಸೆನ್ಸೆಕ್ಸ್, ನೀವೇನು ಮಾಡಬೇಕು?: ಸೆನ್ಸೆಕ್ಸ್ 60 ಸಾವಿರ ಅಂಶಗಳ ಗಡಿ ದಾಟಿದೆ. ವಾಸ್ತವದಲ್ಲಿ ಇಷ್ಟು ವೇಗವಾಗಿ ಏರಿಕೆ ಕಂಡಿರುವ ಮಾರುಕಟ್ಟೆ ಮುಂದೊಂದು ದಿನ ಬೀಳಲೇಬೇಕು. ಆದರೆ ಯಾವಾಗ ಮಾರುಕಟ್ಟೆ ಮುಗ್ಗರಿಸುತ್ತದೆ ಎಂದು ನಿಖರವಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲ.

ಬಹಳಷ್ಟು ಷೇರುಗಳ ಬೆಲೆ ಅವುಗಳ ಅಸಲಿ ಮೌಲ್ಯಕ್ಕಿಂತ ಹೆಚ್ಚಾಗಿದೆ. ಅಂದರೆ ಮುಂದಿನ ಎರಡು ಮೂರು ವರ್ಷಗಳ ನಂತರದಲ್ಲಿ ಇರಬೇಕಿದ್ದ ದರ ಈಗಲೇ ಇದೆ. ಬಹುತೇಕ ಹೂಡಿಕೆದಾರರು ಮಾರುಕಟ್ಟೆ ಕುಸಿತ ಕಂಡಾಗ ಇರುವ ಎಲ್ಲ ಷೇರುಗಳನ್ನು ಮಾರಾಟ ಮಾಡಲು ಹೋಗಿ ನಷ್ಟ ಮಾಡಿಕೊಳ್ಳುತ್ತಾರೆ. ಅದೇ ದೊಡ್ಡ ತಪ್ಪು. ಬಿದ್ದ ಮಾರುಕಟ್ಟೆ ಮತ್ತೆ ಏಳುತ್ತದೆ ಎನ್ನುವುದನ್ನು ಇತಿಹಾಸ ಹೇಳಿಕೊಟ್ಟಿದೆ. ಆರ್ಥಿಕವಾಗಿ ಉತ್ತಮವಾಗಿರುವ ಒಳ್ಳೆಯ ಕಂಪನಿಗಳ ಮೇಲೆ ಹೂಡಿಕೆ ಮಾಡಿದರೆ ಮಾರುಕಟ್ಟೆ ಏರಿಳಿತಗಳಿಗೆ ತಲೆ ಕೆಡಿಸಿಕೊಳ್ಳಬೇಕಿಲ್ಲ.

ಅಳತೆ ಅಂದಾಜಿಲ್ಲದೆ ಸಿಕ್ಕ ಸಿಕ್ಕ ಕಂಪನಿಗಳ ಷೇರುಗಳನ್ನು ಖರೀದಿಸಿದರೆ ನಷ್ಟಕ್ಕೆ ಸಿಲುಕುವುದು ನಿಶ್ಚಿತ. ತರಕಾರಿ ಖರೀದಿಸುವಾಗ ಮಾಡುವ ಶೋಧನೆಯನ್ನು ಷೇರುಗಳ ಖರೀದಿ ಮಾಡುವ ಮುನ್ನ ಮಾಡಿದರೆ ನೀವು ಖಂಡಿತ ಷೇರು ಮಾರುಕಟ್ಟೆಯಲ್ಲಿ ಯಾವ ಪರಿಸ್ಥಿತಿಯಲ್ಲೂ ಏರಿಳಿತದ ಭಯವಿಲ್ಲದೆ ಹೂಡಿಕೆ ಮಾಡಬಹುದು.

ಅಮೆಜಾನ್ ಮಾರಾಟ ಮೇಳವೂ ಅ. 3ರಿಂದ ಆರಂಭ

ನವದೆಹಲಿ (ಪಿಟಿಐ): ಫ್ಲಿಪ್‌ಕಾರ್ಟ್ ಕಂಪನಿಯಂತೆಯೇ ಅಮೆಜಾನ್ ಸಹ ತನ್ನ ಹಬ್ಬದ ಮಾರಾಟ ಮೇಳದ ದಿನಾಂಕ ಬದಲಿಸಿದ್ದು, ಅಕ್ಟೋಬರ್ 3ರಿಂದಲೇ 'ಗ್ರೇಟ್ ಇಂಡಿಯನ್ ಫೆಸ್ಟಿವಲ್' ಆರಂಭಿಸುವುದಾಗಿ ಘೋಷಿಸಿದೆ.

ಎರಡೂ ಕಂಪನಿಗಳ ಮಾರಾಟ ಮೇಳವು ಒಂದೇ ದಿನ ಆರಂಭವಾಗಲಿದೆ. ಕಳೆದ ವರ್ಷದಂತೆಯೇ ಈ ಬಾರಿಯೂ ಸ್ಪರ್ಧೆಯು ತೀವ್ರವಾಗುವ ನಿರೀಕ್ಷೆ ಇದೆ. ಫ್ಲಿಪ್‌ಕಾರ್ಟ್‌ನ 'ಬಿಗ್ ಬಿಲಿಯನ್ ಡೇಸ್' ಮಾರಾಟವು ಎಂಟು ದಿನಗಳದ್ದಾಗಿದ್ದರೆ, ಅಮೆಜಾನ್‌ನ 'ಗ್ರೇಟ್ ಇಂಡಿಯನ್ ಫೆಸ್ಟಿವಲ್' ಮಾರಾಟವು ಒಂದು ತಿಂಗಳವರೆಗೆ ನಡೆಯಲಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹263-478
ದ್ವಿತಳಿ (ಬಿ.ವಿ)	₹295-566

ಪೌಷ್ಟಿಕ ಆಹಾರ ಸೇವಿಸಿ

'ಬ್ಯಾಂಕ್ ಅಸ್ತಿತ್ವವೇ ಇಲ್ಲದ ಜಿಲ್ಲೆಗಳು ಇಂದಿಗೂ ಇವೆ'

ಐಬಿಎ ವಾರ್ಷಿಕ ಮಹಾಸಭೆಯಲ್ಲಿ ನಿರ್ಮಲಾ ಕಳವಳ

ಮುಂಬೈ (ಪಿಟಿಐ): ಆರ್ಥಿಕ ಒಳಗೊಳ್ಳುವಿಕೆಗೆ ಹೆಚ್ಚಿನ ಆದ್ಯತೆ ನೀಡಿದ್ದರೂ, ದೇಶದ ಹಲವು ಜಿಲ್ಲೆಗಳಲ್ಲಿ ಇಂದಿಗೂ ಬ್ಯಾಂಕಿಂಗ್ ಅಸ್ತಿತ್ವವೇ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದ್ದಾರೆ.

ದೇಶದ ನೀತಿ ನಿರೂಪಕರು ಆರ್ಥಿಕ ಒಳಗೊಳ್ಳುವಿಕೆಯ ಬಗ್ಗೆ ದಶಕಕ್ಕೂ ಹೆಚ್ಚಿನ ಅವಧಿಯಿಂದ ಆದ್ಯತೆ ನೀಡುತ್ತಿದ್ದಾರೆ. ಎರಡು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಹಳ್ಳಿಯಲ್ಲಿಯೂ ಬ್ಯಾಂಕ್ ಅಸ್ತಿತ್ವ ಇರಬೇಕು ಎಂಬ ಗುರಿಯನ್ನು ನಿಗದಿ ಮಾಡಿದ್ದಾರೆ. ಕೆಲವು ವರ್ಷಗಳ ಹಿಂದೆ ಆರ್‌ಬಿಐ, ಶಾಖೆ ತೆರೆಯುವುದಕ್ಕೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ಸಡಿಲಿಸಿದೆ.

ನಿರ್ಮಲಾ

'ದೊಡ್ಡ ಪಂಚಾಯಿತಿಗಳಲ್ಲಿ ಬ್ಯಾಂಕ್‌ನ ಭೌತಿಕ ಶಾಖೆ ಇಲ್ಲದ ಹಲವು ಜಿಲ್ಲೆಗಳು ಇಂದಿಗೂ ಇವೆ. ಒಂದೇ ಒಂದು ಬ್ಯಾಂಕಿಂಗ್ ಸಂಸ್ಥೆಯ ಅಸ್ತಿತ್ವವನ್ನು ಭೌತಿಕವಾಗಿ ಹೊಂದಿಲ್ಲದ ಹಲವು ಜಿಲ್ಲೆಗಳು ಇಂದಿಗೂ ಇವೆ' ಎಂದು ನಿರ್ಮಲಾ ಅವರು ಭಾರತೀಯ ಬ್ಯಾಂಕ್‌ಗಳ ಒಕ್ಕೂಟದ (ಐಬಿಎ) ವಾರ್ಷಿಕ ಮಹಾಸಭೆಯಲ್ಲಿ ಹೇಳಿದ್ದಾರೆ.

'ಆರ್ಥಿಕ ಚಟುವಟಿಕೆಯ ಕೇಂದ್ರಗಳನ್ನು ಗಮನಿಸಲು ನಿಮಗೆ ಸಾಧ್ಯವಾಗಬೇಕು. ಗ್ರಾಮೀಣ ಪ್ರದೇಶಗಳಲ್ಲಿಯೂ ಆರ್ಥಿಕ ಚಟುವಟಿಕೆಗಳು ಜೋರಾಗಿ ಇದ್ದರೆ, ಅಲ್ಲಿ ಬ್ಯಾಂಕ್ ಅಸ್ತಿತ್ವ ಇರಬೇಕಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

ನಿರ್ಮಲಾ ಅವರ ಕಾರ್ಯಕ್ರಮದ ನಂತರ ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಎಚ್‌ಡಿಎಫ್‌ಸಿ ಬ್ಯಾಂಕ್, ಮುಂದಿನ ಎರಡು ವರ್ಷಗಳಲ್ಲಿ ಎರಡು ಲಕ್ಷ ಹಳ್ಳಿಗಳನ್ನು ತಲುಪಲಾಗುತ್ತದೆ ಮತ್ತು ಮುಂದಿನ ಆರು ತಿಂಗಳುಗಳಲ್ಲಿ ಎರಡೂವರೆ ಸಾವಿರ ಜನರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದೆ.

ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿಯನ್ನು (ಎನ್‌ಎಆರ್‌ಸಿಎಲ್) 'ಬ್ಯಾಡ್ ಬ್ಯಾಂಕ್' ಎಂದು ಕರೆಯಬಾರದು ಎಂದೂ ನಿರ್ಮಲಾ ಅವರು ಮನವಿ ಮಾಡಿದರು.

ಅರ್ಥ ವ್ಯವಸ್ಥೆ ಹಾಗೂ ಉದ್ಯಮ ವಲಯದ ಅಗತ್ಯಗಳನ್ನು ಪೂರೈಸಲು ದೇಶಕ್ಕೆ ಎಸ್‌ಬಿಐ ಗಾತ್ರದ ನಾಲ್ಕರಿಂದ ಐದು ಬ್ಯಾಂಕ್‌ಗಳ ಅಗತ್ಯ ಇದೆ ಎಂದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಕಂಪ್ಯೂಟರ್

Printer

EPSON EXCEED YOUR VISION
ಹೊಚ್ಚಹೊಸ A3 ಮೊನೋ ಎಕೋಟ್ಯಾಂಕ್ ಪ್ರಿಂಟರ್ SMART MFP ಫೋಟೋಕಾಪಿ ಮತ್ತು ಸ್ಟೇಷನರಿ ಶಾಪ್‌ಗಳಿಗೆ
12 ಪೈಸೆ ಪ್ರತಿ ಪ್ರಿಂಟ್‌ಗೆ*
ವಿದ್ಯುತ್ ಬಳಕೆ 19w* ನಷ್ಟು ಕಡಿಮೆ



ಮೊನೋಕ್ರೋಮ್ ಎಕೋಟ್ಯಾಂಕ್ M15140
*Conditions apply.
CALL 88700 00768 FOR MORE INFO

ವ್ಯಾಪಾರ

Business to Business

Business

ಲಕ್ಷಾಂತರ ಗಳಿಸಿ ಔಷಧಿಯ ಮಿಲ್ಕಿ ಮಶ್ರೂಮ್ಸ ಮನೆಯಲ್ಲೆ ಬೆಳೆಸಿರಿ ನಾವೇ ಖರೀದಿಸುತ್ತೇವೆ. ವ್ಹಿಡಿಯೋಗಾಗಿ ವಾಟ್ಸಆಪ್ ಮಾಡಿ 8971251972. Patil Exports

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

ಉದ್ಯೋಗಾವಕಾಶ

General

✓ ತಕ್ಷಣ ಬೇಕಾಗಿದ್ದಾರೆ ಮಾರ್ಕೆಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

✓ ಕರ್ನಾಟಕದಾದ್ಯಂತ ಹೆಸರಾಂತ 450ಕಂಪನಿಗಳಿಗೆ, ಕಂಪನಿ ಹಾಗೂ ಆಫೀಸ್ ವರ್ಕ್ ಗೆ, ಯುವಕ, ಯುವತಿಯರು ಬೇಕಾಗಿದ್ದಾರೆ.ನೇರನೇಮಕಾತಿ 16,200-65,000/-ಊಟ, ವಸತಿಯೊಂದಿಗೆ 7022366461, 8904049301.

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

✓ TOYOTA, ಟಾಟಾಮೋಟರ್ಸ, ಬಿಗ್ ಬಜಾರ್ಸ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ಅನುಭವವುಳ್ಳವರು ಆಫೀಸ್ ವರ್ಕ್,ಫೀಲ್ಡ್ ವರ್ಕ್ (Any Degree) ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು, ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.10,000-15,000. 8951315839, 9880545002

✓ TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

CONCORD HEALTH- REQUIRED Mobile Phlebotomist (MLT/DMLT) For Sample Collection & Delivery Boys Ph No. -9154955064

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಮನೆಕೆಲಸ, ವಯಸ್ಸಾದವರನ್ನು, ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ ಸಂಬಳ 15,000-22,000/- 9663196788, 6366324863

ವಯಸ್ಸಾದವರನ್ನು ನೂಡೀಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟ ವಸತಿಯೋಂದಿಗೆ 11000 ರಿಂದ 16000ವರೆಗೆ ಸಂಬಳ. ಫೋ: 8139962883

Walk-in

ವಾಂಟೆಡ್ ಪುರುಷ ಸೇಲ್ಸ್ ಎಕ್ಸಿಕ್ಯೂಟಿವ್ ಕನ್ನಡ ಸ್ಪೀಕಿಂಗ್, ಟೂ ವೀಲರ್ ಮ್ಯಾಂಡೇಟರಿ walk-in. ಅಟ್ರಾಕ್ಟಿವ್ ಇನ್ಸೆಂಟಿವ್ ಬಜಾಜ್ ಫೈನಾನ್ಸ್ ಪ್ರೆಸ್ಟೀಜ್ ಲಿಮಿಟೆಡ್, ಟವರ್ 8 ನೇ ಮಹಡಿ, ರೆಸಿಡೆನ್ಸಿ ರೋಡ್-560025 ಸಂಪರ್ಕಿಸಿ- 8147927081, 7899073558

ಭವಿಷ್ಯ

Astrology

★||ಶ್ರೀಶಿರಿಡಿ ಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀ_ಪುರುಷ_ವಶೀಕರಣ, ದಾಂಪತ್ಯ_ಕಿರಿಕಿರಿ, ಕಂಕಣಭಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ_ಗುಪ್ತ ಸಮಸ್ಯೆಗಳಿಗೆ 11_ಗಂಟೆಗಳಲ್ಲಿ ಶಾಶ್ವತ_ಪರಿಹಾರ. ಪಂಡಿತ್.ವಿಕ್ರಮ್_ಭಟ್ 9972654095

★||ಮೋಡಿ ಮಾಂತ್ರಿಕರು||★ ನಂಬರ್.1 ವಶೀಕರಣ ಸಪೆಷಲಿಸ್ಟ್, ಪ್ರೀತಿಪ್ರೇಮ, ಸಾಲದಬಾದೆ, ಗಂಡಹೆಂಡತಿ ವಿಚಾರ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಪೋನಿನ_ಮೂಲಕ ಶಾಶ್ವತ_ಪರಿಹಾರ. 9591588881

★||ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು||★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಡ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127 .

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಪಂಜಾಬ್: ಏಳು ಹೊಸ ಮುಖಗಳು, ಅಮರಿಂದರ್ ಸಿಂಗ್ ಆಪ್ತರಲ್ಲಿ ಕೆಲವರಿಗೆ ಸ್ಥಾನ

ಚನ್ನಿ ಸಂಪುಟಕ್ಕೆ 15 ಸಚಿವರ ಸೇರ್ಪಡೆ

ಚಂಡೀಗಡ (ಪಿಟಿಐ): ಪಂಜಾಬ್ ಸಚಿವ ಸಂಪುಟ ಭಾನುವಾರ ವಿಸ್ತರಣೆಯಾಗಿದ್ದು, ಏಳು ಮಂದಿ ಹೊಸಬರು ಸೇರಿದಂತೆ 15 ಸಚಿವರು ಪ್ರಮಾಣ ವಚನ ಸ್ವೀಕರಿಸಿದರು.

ರಣದೀಪ್ ಸಿಂಗ್ ನಭಾ, ರಾಜ್‌ಕುಮಾರ್ ವರ್ಕಾ, ಸಂಗರ್ ಸಿಂಗ್ ಗಿಲ್ಜಿಯಾನ್, ಪರ್ಗತ್ ಸಿಂಗ್, ಅಮರಿಂದರ್ ಸಿಂಗ್ ರಾಜಾ ಮತ್ತು ಗುರುಕೀರತ್ ಸಿಂಗ್ ಕೊಟ್ಲಿ ಅವರು ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಚಿವ ಸಂಪುಟಕ್ಕೆ ಸೇರ್ಪಡೆಯಾದ ಹೊಸ ಮುಖಗಳು.

2018ರಲ್ಲಿ ಅಮರಿಂದರ್ ಸಿಂಗ್ ಸಂಪುಟಕ್ಕೆ ರಾಜೀನಾಮೆ ನೀಡಿದ್ದ ರಾಣಾ ಗುರ್ಜಿತ್ ಸಿಂಗ್ ಅವರು ಪುನರಾಗಮನ ಮಾಡಿದ್ದಾರೆ. ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ಪ್ರಮಾಣವಚನ ಬೋಧಿಸಿದರು.

ಅಮರಿಂದರ್ ಸಿಂಗ್ ನೇತೃತ್ವದ ಸಂಪುಟದಲ್ಲಿ ಸಚಿವರಾಗಿದ್ದ ಬ್ರಹ್ಮ ಮೊಹಿಂದ್ರಾ, ಮನ್ ಪ್ರೀತ್ ಸಿಂಗ್ ಬಾದಲ್, ತೃಪ್ತ್ ರಾಜಿಂದರ್ ಸಿಂಗ್ ಬಾಜ್ವಾ, ಅರುಣ ಚೌಧರಿ, ಸುಖಬಿಂದರ್ ಸಿಂಗ್ ಸರ್ಕರಿಯಾ, ರಜಿಯಾ ಸುಲ್ತಾನ, ವಿಜಯ್ ಇಂದರ್ ಸಿಂಗ್ಲಾ ಮತ್ತು ಭರತ್ ಭೂಷಣ್ ಅಶು ಅವರನ್ನು ಸಚಿವರಾಗಿ ಉಳಿಸಿಕೊಳ್ಳಲಾಗಿದೆ.

ಅಮರಿಂದರ್ ಸಿಂಗ್ ಅವರ ರಾಜೀನಾಮೆಯ ಬಳಿಕ ಚನ್ನಿ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಮಾಡಲಾಗಿತ್ತು. ಇವರು ರಾಜ್ಯದ ಮೊದಲ ದಲಿತ ಮುಖ್ಯಮಂತ್ರಿ.

ಸಚಿವರಾದ ರಾಣಾ ಗುರ್ಜಿತ್ ಸಿಂಗ್, ಸಿಂಗ್ಲಾ ಮತ್ತು ಮೊಹಿಂದರ್ ಅವರು ಅಮರಿಂದರ್ ಅವರಿಗೆ ಆಪ್ತರು ಎನ್ನಲಾಗಿದೆ. ಅಮರಿಂದರ್ ಸಿಂಗ್ ಸಂಪುಟದಲ್ಲಿ ಸಚಿವರಾಗಿದ್ದ ರಾಣಾ ಗುರ್ಮಿತ್ ಸಿಂಗ್ ಸೋಧಿ, ಸಾಧು ಸಿಂಗ್ ಧರ್ಮಸೋತ್, ಬಲಬೀರ್ ಸಿಂಗ್ ಸಿಧು, ಗುರುಪ್ರೀತ್ ಸಿಂಗ್ ಕಾಂಗಾರ್ ಮತ್ತು ಸುಂದರ್ ಶಾಮ್ ಅರೋರಾ ಅವರಿಗೆ ಹೊಸ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ.

ಸುಖ್‌ಜಿಂದರ್ ಸಿಂಗ್ ರಂಧಾವ ಮತ್ತು ಒ.ಪಿ. ಸೋನಿ ಅವರು ಉಪಮುಖ್ಯಮಂತ್ರಿಗಳಾಗಿ ಸೋಮವಾರ ಅಧಿಕಾರ ವಹಿಸಿಕೊಂಡಿದ್ದರು. ಈ ವಿಸ್ತರಣೆ ಬಳಿಕ ಸಂಪುಟವು ಗರಿಷ್ಠ 18 ಸಚಿವರನ್ನು ಹೊಂದಿದಂತಾಗಿದೆ.

ಪ್ರಮಾಣವಚನ ಸ್ವೀಕಾರ ಸಮಾರಂಭದ ಬಳಿಕ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ತಮ್ಮ ನೂತನ ಸಂಪುಟ ಸಹೋದ್ಯೋಗಿಗಳೊಂದಿಗೆ ಕಾಣಿಸಿಕೊಂಡರು —ಪಿಟಿಐ ಚಿತ್ರ

> **ತಾವು ನಿರ್ವಹಿಸಿದ ಕೋವಿಡ್ ನಿಯಂತ್ರಣ ಕೆಲಸವನ್ನು ಕೆನಡಾ ಸಂಸತ್ ಸೇರಿದಂತೆ ಎಲ್ಲಡೆಯೂ ಶ್ಲಾಘಿಸಲಾಗಿತ್ತು. ಆದರೆ ನಾನು ಮಾಡಿದ ತಪ್ಪೇನು**
> **ಬಲ್ಬೀರ್ ಸಿಧು**
> ಸಚಿವಸ್ಥಾನ ವಂಚಿತ

> **ಸಂಪುಟದಲ್ಲಿ ಜಾಗ ಸಿಗದವರಿಗೆ ಸೂಕ್ತ ಸ್ಥಾನಮಾನ ನೀಡಲಾಗುವುದು. ಯುವ ಮುಖಗಳು, ಸಾಮಾಜಿಕ ಮತ್ತು ಪ್ರಾದೇಶಿಕ ಸಮತೋಲನ ಸಾಧಿಸಲಾಗಿದೆ**
> **ಹರೀಶ್ ರಾವತ್**
> ಪಂಜಾಬ್ ಕಾಂಗ್ರೆಸ್ ಉಸ್ತುವಾರಿ

ಅಸಮಾಧಾನ ಸ್ಫೋಟ

ಸಂಪುಟ ವಿಸ್ತರಣೆ ಬೆನ್ನಲ್ಲೇ ಭಿನ್ನಮತ ಕಂಡುಬಂದಿದೆ. ತಮ್ಮನ್ನು ಕಾರಣವಿಲ್ಲದೇ ಸಂಪುಟದಿಂದ ಕೈಬಿಡಲಾಗಿದೆ ಎಂಬ ಕೂಗು ಎದ್ದಿದೆ. ಪ್ರಮಾಣವಚನ ಕಾರ್ಯಕ್ರಮಕ್ಕೂ ಮುನ್ನ ಸುದ್ದಿಗೋಷ್ಠಿ ನಡೆಸಿದ ಬಲ್ಬೀರ್ ಸಿಂಗ್ ಸಿಧು ಹಾಗೂ ಗುರುಪ್ರೀತ್ ಸಿಂಗ್ ಕಾಂಗಾರ್ ಅವರು ತಮ್ಮನ್ನು ಸಂಪುಟದಿಂದ ಕೈಬಿಟ್ಟಿರುವುದನ್ನು ಪ್ರಶ್ನಿಸಿದರು. ಬಲ್ಬೀರ್ ಸಿಧು ಅವರು ಸುದ್ದಿಗೋಷ್ಠಿಯಲ್ಲಿ ಕಣ್ಣೀರಿಟ್ಟರು.

ಆರು ಬಾರಿ ಶಾಸಕ ರಾಕೇಶ್ ಪಾಂಡೆ ಅವರು ಅಸಮಾಧಾನ ಹೊರಹಾಕಿದ್ದಾರೆ. ಸಂಪುಟಕ್ಕೆ ರಾಣಾ ಗುರ್ಜಿತ್ ಸಿಂಗ್ ಅವರ ಸೇರ್ಪಡೆಗೆ ಪಕ್ಷದಲ್ಲೇ ವಿರೋಧ ವ್ಯಕ್ತವಾಗಿದೆ. ಭ್ರಷ್ಟಾಚಾರ ಆರೋಪ ಇರುವ ಅವರ ಬದಲಾಗಿ ದಲಿತ ನಾಯಕನ ಆಯ್ಕೆಯಾಗಬೇಕು ಎಂದು ಮುಖಂಡರು ಹೇಳಿದ್ದಾರೆ.

‘ತಾಲಿಬಾನ್ ಮೇಲೆ ರಷ್ಯಾ, ಚೀನಾ, ಪಾಕ್, ಅಮೆರಿಕ ನಿಗಾ’

ವಿಶ್ವಸಂಸ್ಥೆ (ಎಪಿ): ಅಫ್ಗಾನಿಸ್ತಾನದಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದಿರುವ ತಾಲಿಬಾನ್ ತನ್ನ ಭರವಸೆಗಳನ್ನು ಉಳಿಸಿಕೊಳ್ಳುವಂತೆ ನೋಡಿಕೊಳ್ಳುವುದಕ್ಕಾಗಿ ರಷ್ಯಾ, ಚೀನಾ, ಪಾಕಿಸ್ತಾನ ಮತ್ತು ಅಮೆರಿಕ ಜತೆಯಾಗಿ ಕೆಲಸ ಮಾಡುತ್ತಿವೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಹೇಳಿದ್ದಾರೆ.

ಎಲ್ಲ ವರ್ಗಗಳಿಗೂ ಸರ್ಕಾರದಲ್ಲಿ ಪ್ರಾತಿನಿಧ್ಯ ಮತ್ತು ಭಯೋತ್ಪಾದನೆ ಎಲ್ಲೆಡೆ ಹರಡದಂತೆಯೂ ಈ ದೇಶಗಳು ಒಟ್ಟಾಗಿ ಕ್ರಮ ಕೈಗೊಳ್ಳಲಿವೆ ಎಂದು ಅವರು ತಿಳಿಸಿದ್ದಾರೆ.

ಈ ದಿಸೆಯಲ್ಲಿ ನಾಲ್ಕು ದೇಶಗಳು ಒಪ್ಪಂದ ಮಾಡಿಕೊಂಡಿವೆ. ರಷ್ಯಾ, ಚೀನಾ, ಪಾಕಿಸ್ತಾನದ ಪ್ರತಿನಿಧಿಗಳು ಇತ್ತೀಚೆಗಷ್ಟೇ ಕತಾರ್‌ಗೆ ತೆರಳಿದ್ದರು. ಅಲ್ಲಿಂದ ಅವರು ಅಫ್ಗಾನಿಸ್ತಾನದ ಕಾಬೂಲ್‌ಗೆ ಭೇಟಿ ನೀಡಿದ್ದರು. ತಾಲಿಬಾನ್ ಪ್ರತಿನಿಧಿಗಳು ಮತ್ತು ಪದಚ್ಯುತಗೊಂಡ ಸರ್ಕಾರದ ಸಮಾಲೋಚನಾ ಮಂಡಳಿಯ ಪ್ರತಿನಿಧಿಗಳಾದ ಮಾಜಿ ಅಧ್ಯಕ್ಷ ಹಮೀದ್ ಕರ್ಜೈ ಮತ್ತು ಅಬ್ದುಲ್ಲ ಅಬ್ದುಲ್ಲ ಅವರ ಜೊತೆ ಚರ್ಚೆ ನಡೆಸಿದರು ಎಂದು ಅವರು ಹೇಳಿದರು.

1996ರಿಂದ 2001ರ ವರೆಗೆ ನೀಡಿದ ಆಡಳಿತಕ್ಕಿಂತ ಭಿನ್ನವಾದ ಆಡಳಿತ ನೀಡುವುದಾಗಿ ತಾಲಿಬಾನ್ ಭರವಸೆ ನೀಡಿತ್ತು. ಆದರೆ, ಮಹಿಳೆ ಮತ್ತು ಹೆಣ್ಣು ಮಕ್ಕಳ ವಿಚಾರದಲ್ಲಿ ತನ್ನ ಹಿಂದಿನ ದಮನಕಾರಿ ನೀತಿಯನ್ನು ತಾಲಿಬಾನ್ ಪ್ರಯೋಗಿಸುತ್ತಿದೆ ಎಂದು ಇತ್ತೀಚಿನ ಬೆಳವಣಿಗೆಗಳಿಂದ ತಿಳಿದುಬಂದಿದೆ. ತಾಲಿಬಾನ್ ನೀಡಿದ್ದ ಭರವಸೆಗಳನ್ನು ಉಳಿಸಿಕೊಳ್ಳುವಂತೆ ಮಾಡುವುದು ಸದ್ಯದ ಪ್ರಮುಖ ಕೆಲಸ ಎಂದಿದ್ದಾರೆ.

ವಿಮಾನ ಹಾರಾಟ ಪುನರಾರಂಭಕ್ಕೆ ಬೇಡಿಕೆ

ಅಫ್ಗಾನಿಸ್ತಾನಕ್ಕೆ ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ಪುನರಾರಂಭ ಮಾಡಬೇಕು ಎಂದು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರ ಭಾನುವಾರ ಮನವಿ ಮಾಡಿದೆ. ಕಾಬೂಲ್ ವಿಮಾನ ನಿಲ್ದಾಣವನ್ನು ದುರಸ್ತಿ ಮಾಡಲಾಗಿದೆ. ವಿಮಾನಯಾನಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದಿದೆ.

ಅಫ್ಗಾನಿಸ್ತಾವನ್ನು ತಾಲಿಬಾನ್ ವಶಕ್ಕೆ ತೆಗೆದುಕೊಂಡ ಬಳಿಕ ವಾಣಿಜ್ಯ ಉದ್ದೇಶದ ವಿಮಾನಯಾನವನ್ನು ಹಲವು ದೇಶಗಳು ಸ್ಥಗಿತಗೊಳಿಸಿವೆ.

ಉತ್ತರ ಪ್ರದೇಶ ಸಂಪುಟ ವಿಸ್ತರಣೆ

ಲಖನೌ (ಪಿಟಿಐ): ಉತ್ತರ ಪ್ರದೇಶ ಸಂಪುಟವನ್ನು ಭಾನುವಾರ ವಿಸ್ತರಣೆ ಮಾಡಲಾಗಿದೆ. ಒಟ್ಟು ಏಳು ಜನರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಈಚೆಗಷ್ಟೇ ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದ್ದ ಜಿತಿನ್ ಪ್ರಸಾದ ಅವರಿಗೆ ಸಚಿವ ಸ್ಥಾನವನ್ನು ನೀಡಲಾಗಿದೆ.

2022ರಲ್ಲಿ ಉತ್ತರ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಇದೇ ಸಂದರ್ಭದಲ್ಲಿ ಬಿಜೆಪಿ ಸಂಪುಟ ವಿಸ್ತರಣೆಯ ಸಾಹಸಕ್ಕೆ ಮುಂದಾಗಿದೆ. ಉತ್ತರ ಪ್ರದೇಶ ಸರ್ಕಾರದಲ್ಲಿ ಗರಿಷ್ಠ 60 ಸಚಿವ ಸ್ಥಾನವನ್ನು ನೀಡಬಹುದಾಗಿದೆ. ಈವರೆಗೆ 43 ಸಚಿವರಷ್ಟೇ ಇದ್ದರು. ಭಾನುವಾರ 7 ಜನರಿಗೆ ಸಚಿವ ಸ್ಥಾನ ನೀಡಿದ ನಂತರ ಈಗ ಉತ್ತರ ಪ್ರದೇಶದ ಒಟ್ಟು ಸಚಿವರ ಸಂಖ್ಯೆ 60ಕ್ಕೆ ಏರಿದೆ.

ಜಿತಿನ್ ಪ್ರಸಾದ, ಪಲ್ಟು ರಾಮ್, ಛತರಪಾಲ್ ಗಂಗ್ವಾರ್, ಸಂಗೀತಾ ಬಲವಂತ ಬಿಂದ್, ಧರಮವೀರ್ ಪ್ರಜಾಪತಿ, ಸಂಜೀವ್ ಕುಮಾರ್ ಗೌರ್ ಮತ್ತು ದಿನೇಶ್ ಖಾತಿಕ್ ಅವರು ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಮುಖ್ಯಾಂಶಗಳು

- ಚುನಾವಣೆಗೆ ಆರು ತಿಂಗಳು ಇರುವಾಗ ಯೋಗಿ ಸಂಪುಟ ವಿಸ್ತರಣೆ
- ಬ್ರಾಹ್ಮಣ, ಪರಿಶಿಷ್ಟರು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸ್ಥಾನ
- ಕಾಂಗ್ರೆಸ್ ತೊರೆದಿದ್ದ ಜಿತಿನ್ ಪ್ರಸಾದಗೆ ಸಂಪುಟ ದರ್ಜೆ

> **ಬಿಜೆಪಿ ಸರ್ಕಾರವು ತನ್ನ ವೈಫಲ್ಯಗಳನ್ನು ಮರೆಮಾಚುವ ಉದ್ದೇಶದಿಂದ ಸಂಪುಟ ವಿಸ್ತರಣೆ ಮಾಡಿದೆ. ಈ ಮೂಲಕ ಜಾತಿಗಳನ್ನು ಓಲೈಸಲು ಮುಂದಾಗಿದೆ**
> **ಸಮಾಜವಾದಿ ಪಕ್ಷ**

ಬಿಜೆಪಿ ಜಾತಿ ಸಮೀಕರಣ

ಇನ್ನೇನು ಚುನಾವಣೆ ಎದುರಿಸಲಿರುವ ಉತ್ತರಪ್ರದೇಶದಲ್ಲಿ ಬಿಜೆಪಿಯು ಎಲ್ಲಾ ಜಾತಿಗಳ ಓಲೈಕೆಗೆ ಮುಂದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಜಿತಿನ್ ಪ್ರಸಾದ ಅವರು ಬ್ರಾಹ್ಮಣ ಸಮುದಾಯವನ್ನು ಪ್ರತಿನಿಧಿಸುತ್ತಾರೆ. ಜಿತಿನ್ ಪ್ರಸಾದ ಅವರಿಗೆ ಸಂಪುಟ ದರ್ಜೆಯ ಸ್ಥಾನ ನೀಡಲಾಗಿದೆ. ಬ್ರಾಹ್ಮಣರನ್ನು ಓಲೈಸಲೆಂದೇ ಅವರಿಗೆ ಸ್ಥಾನ ನೀಡಲಾಗಿದೆ. ಪರಿಶಿಷ್ಟ ಜಾತಿಗಳ ಮೂವರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಈ ಮೂಲಕ ಪರಿಶಿಷ್ಟ ಜಾತಿಗಳ ಮೂರು ಬೇರೆ ಬೇರೆ ಸಮುದಾಯಗಳ ಓಲೈಕೆಗೆ ಬಿಜೆಪಿ ಮುಂದಾಗಿದೆ.

ಇತರೆ ಹಿಂದುಳಿದ ವರ್ಗಗಳ ನಾಲ್ವರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಜಿತಿನ್ ಪ್ರಸಾದ್ ಅವರನ್ನು ಹೊರತುಪಡಿಸಿ ಉಳಿದವರೆಲ್ಲರಿಗೂ ರಾಜ್ಯ ಸಚಿವರ ಸ್ಥಾನ ನೀಡಲಾಗಿದೆ.

ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಜಾಟ್ ಸಮುದಾಯದ ದೊಡ್ಡ ಬೆಂಬಲವಿತ್ತು. ಆದರೆ ಈಗ ನೂತನ ಕೃಷಿ ಕಾಯ್ದೆಗಳ ಕಾರಣದಿಂದ ಜಾಟ್ ಸಮುದಾಯವು ಬಿಜೆಪಿಯಿಂದ ದೂರ ಸರಿದಿದೆ. ಕೃಷಿಯೇ ಪ್ರಧಾನ ಕಸುಬಾದ ಈ ಸಮುದಾಯದ ಬಹುತೇಕ ಮಂದಿ ರೈತ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಇದು ಬಿಜೆಪಿಗೆ ಮುಳುವಾಗಬಹುದು. ಈ ಸಂಭಾವ್ಯ ನಷ್ಟವನ್ನು ಸರಿದೂಗಿಸಿಕೊಳ್ಳುವ ಉದ್ದೇಶದಿಂದ ಬಿಜೆಪಿ ಬೇರೆ ಜಾತಿಗಳ ಓಲೈಕೆಗೆ ಮುಂದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಉ. ಪ್ರದೇಶ: ‘ಜಾತ್ಯತೀತ’ ಪಕ್ಷಗಳಿಗೆ ಕಳವಳ ಮೂಡಿಸಿದ ಒವೈಸಿ

ಲಖನೌ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಅಸದುದ್ದೀನ್ ಒವೈಸಿ ನೇತೃತ್ವದ ಆಲ್ ಇಂಡಿಯಾ ಮಜ್ಲಿಸ್‌–ಇ–ಇತ್ತೆಹಾದುಲ್ ಮುಸ್ಲಿಮೀನ್ ಪಕ್ಷ (ಎಐಎಂಐಎಂ) ಸ್ಪರ್ಧಿಸಲಿದೆ. ಅಲ್ಪಸಂಖ್ಯಾತರ ಮತಗಳ ಮೇಲೆ ಪ್ರಮುಖವಾಗಿ ಅವಲಂಬನೆ ಆಗಿರುವ ರಾಜಕೀಯ ಪಕ್ಷಗಳು ಇದರಿಂದಾಗಿ ಕಳವಳಕ್ಕೀಡಾಗಿವೆ ಎನ್ನಲಾಗಿದೆ.

ಉತ್ತರ ಪ್ರದೇಶದ 403 ವಿಧಾನಸಭಾ ಕ್ಷೇತ್ರಗಳ ಪೈಕಿ 100 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಎಐಎಂಐಎಂ ಈಗಾಗಲೇ ಘೋಷಿಸಿದೆ.

ಉತ್ತರ ಪ್ರದೇಶದ ಜಾಟವ, ಯಾದವ, ರಾಜ್‌ಭರ್, ನಿಶಾದ್ ಮುಂತಾದ ಸಣ್ಣಸಣ್ಣ ಸಮುದಾಯಗಳಿಗೆ ಅವೇ ಸಮುದಾಯಗಳ ನಾಯಕರು ಇದ್ದಾರೆ. ಆದರೆ ರಾಜ್ಯದಲ್ಲಿ ಶೇ 19ರಷ್ಟು ಜನಸಂಖ್ಯೆ ಇರುವ ಮುಸ್ಲಿಮರಲ್ಲಿ ಏಕೀಕೃತ ನಾಯಕತ್ವ ಇಲ್ಲ. ಸಮಾಜವಾದಿ ಪಕ್ಷ, ಬಹುಜನ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಕೈ ಕೆಳಗೆ ಮುಸ್ಲಿಮರು ಗುಲಾಮಗಿರಿ ಮಾಡಿದ್ದು ಸಾಕು. ಆ ಪಕ್ಷಗಳು ಮುಸ್ಲಿಮರನ್ನು ಕೇವಲ ಮತ ಬ್ಯಾಂಕ್‌ಗಳನ್ನಾಗಿ ಬಳಸಿಕೊಂಡಿವೆ ಎಂದು ಎಐಎಂಐಎಂ ನಾಯಕರು ಅಭಿಪ್ರಾಯ ಪಟ್ಟಿದ್ದಾರೆ.

ಸುಮಾರು 82 ವಿಧಾನಸಭೆ ಕ್ಷೇತ್ರಗಳಲ್ಲಿ ಮುಸ್ಲಿಮರ ಮತಗಳು ನಿರ್ಣಾಯಕ ಪಾತ್ರ ವಹಿಸುತ್ತವೆ.

ಒವೈಸಿ ಅವರು ಉತ್ತರ ಪ್ರದೇಶದ ಅಯೋಧ್ಯೆಯಿಂದ ಕಳೆದ ತಿಂಗಳು ಪ್ರಚಾರ ಕಾರ್ಯ ಆರಂಭಿಸಿದ್ದಾರೆ.

ಮುಸ್ಲಿಂ ಸಮುದಾಯದ ಉನ್ನತಿಗಾಗಿ ಮುಸ್ಲಿಮರಲ್ಲಿ ನಾಯಕತ್ವ ಹುಟ್ಟುಹಾಕುವ ಗುರಿಯನ್ನು ಎಐಎಂಐಎಂ ಹೊಂದಿದೆ. ಜಾತ್ಯತೀತ ಎಂದು ಹೇಳಿಕೊಳ್ಳುವ ಪಕ್ಷಗಳು ಕೂಡ ಒಬ್ಬ ಮುಸ್ಲಿಂ ನಾಯಕ ರೂಪುಗೊಳ್ಳಲು ಬಿಡುವುದಿಲ್ಲ ಎಂದು ಪಕ್ಷದ ವಕ್ತಾರ ಸಯ್ಯದ್ ಆಸಿಂ ವಾಖರ್ ಹೇಳಿದ್ದಾರೆ.

ಆದರೆ, ಎಐಎಂಐಎಂ ಕ್ರಮವನ್ನು ಎಸ್‌ಪಿ, ಬಿಎಸ್‌ಪಿ ಖಂಡಿಸಿವೆ. ಮುಸ್ಲಿಂ ಮತಗಳನ್ನು ವಿಭಜಿಸಿ ಬಿಜೆಪಿಗೆ ನೆರವಾಗಲು ಒವೈಸಿ ನಡೆಸಿರುವ ಹುನ್ನಾರ ಇದಾಗಿದೆ ಎಂದಿವೆ.

‘ಬಿಜೆಪಿ ಪರವಾಗಿ ಎಸ್‌ಪಿಯ ಮತಗಳನ್ನು ವಿಭಜಿಸಲು ಒವೈಸಿ ಪ್ರಯತ್ನಿಸುತ್ತಿದ್ದಾರೆ. ಅವರೊಬ್ಬ ಮತ ವಿಭಜಕ’ ಎಂದು ಎಸ್‌ಪಿ ನಾಯಕ ಅಬು ಆಜ್ಮಿ ಹೇಳಿದ್ದಾರೆ.

‘ಹಿಂದುತ್ವ ರಾಜಕೀಯ ಗಟ್ಟಿಯಾಗುತ್ತಿರುವ ಹಿನ್ನೆಲೆಯಲ್ಲಿ ಮುಸ್ಲಿಮರು ತಮಗೆ ಪ್ರತ್ಯೇಕ ನಾಯಕತ್ವದ ಅಗತ್ಯವಿದೆ ಎಂದು ತಿಳಿದಿದ್ದಾರೆ. ಆದ್ದರಿಂದ ಈ ಬಾರಿ ಒವೈಸಿ ಅವರ ಲೆಕ್ಕಾಚಾರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕೆಲಸ ಮಾಡುವುದು ಖಚಿತ’ ಎಂದು ರಾಜಕೀಯ ವಿಶ್ಲೇಷಕ ಪರ್ವೇಜ್ ಅಹ್ಮದ್ ಹೇಳಿದ್ದಾರೆ.

ಅಮೆಜಾನ್ ಈಸ್ಟ್ ಇಂಡಿಯಾ ಕಂಪನಿ 2.0: ಪಾಂಚಜನ್ಯ

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್‌ನ ವಾರಪತ್ರಿಕೆ ಪಾಂಚಜನ್ಯವು, ‘ಅಮೆಜಾನ್ ಈಸ್ಟ್ ಇಂಡಿಯಾ ಕಂಪನಿ 2.0’ ಎಂದು ಹೇಳಿದೆ. ಅಕ್ಟೋಬರ್ 3ರ ಸಂಚಿಕೆಯಲ್ಲಿ ಈ ಸಂಬಂಧ ಮುಖಪುಟ ಲೇಖನವನ್ನು ಪಾಂಚಜನ್ಯವು ಪ್ರಕಟಿಸಿದೆ.

‘18ನೇ ಶತಮಾನದಲ್ಲಿ ಭಾರತವನ್ನು ಆಕ್ರಮಿಸಿಕೊಳ್ಳಲು ಈಸ್ಟ್ ಇಂಡಿಯಾ ಕಂಪನಿ ಏನೆಲ್ಲಾ ಮಾಡಿತೋ ಅದನ್ನೇ ಈಗ ಅಮೆಜಾನ್ ಕಂಪನಿ ಮಾಡುತ್ತಿದೆ. ಭಾರತದಲ್ಲಿ ತನ್ನ ಪರವಾಗಿ ನೀತಿ ರೂಪಿಸಿಕೊಳ್ಳಲು ಅಮೆಜಾನ್ ಕೋಟ್ಯಂತರ ರೂ ಲಂಚ ನೀಡಿದೆ’ ಎಂದು ಪಾಂಚಜನ್ಯ ಆರೋಪಿಸಿದೆ.

‘ಭಾರತದ ಇ-ಮಾರುಕಟ್ಟೆಯಲ್ಲಿ ಏಕಸ್ವಾಮ್ಯವನ್ನು ಸಾಧಿಸಲು ಅಮೆಜಾನ್ ಮುಂದಾಗಿದೆ. ಇದಕ್ಕಾಗಿ ದೇಶದ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಮತ್ತು ನಾಗರಿಕರ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದೆ’ ಎಂದು ಪಾಂಚಜನ್ಯ ಆರೋಪಿಸಿದೆ.

ನಕ್ಸಲ್ ಬಾಧಿತ ರಾಜ್ಯಗಳ ಸಿ.ಎಂಗಳ ಜೊತೆ ಅಮಿತ್ ಶಾ ಚರ್ಚೆ

ನವದೆಹಲಿ (ಪಿಟಿಐ): ನಕ್ಸಲ್ ಸಮಸ್ಯೆಯನ್ನು ವರ್ಷದೊಳಗೆ ನಿರ್ಮೂಲನೆ ಮಾಡಲು ನಕ್ಸಲ್ ಬಾಧಿತ ರಾಜ್ಯಗಳ ಮುಖ್ಯಮಂತ್ರಿಗಳು ಒತ್ತು ನೀಡಬೇಕು. ಅಲ್ಲದೆ ನಕ್ಸಲರಿಗೆ ಸಿಗುತ್ತಿರುವ ಹಣಕಾಸಿನ ನೆರವಿನ ಮೂಲವನ್ನು ತಡೆಯಲು ಜಂಟಿ ಕಾರ್ಯತಂತ್ರ ರೂಪಿಸಬೇಕು ಎಂದು ಗೃಹ ಸಚಿವ ಅಮಿತ್ ಶಾ ಆಗ್ರಹಿಸಿದರು.

ನಕ್ಸಲ್ ಬಾಧಿತ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಮತ್ತು ಹಿರಿಯ ಅಧಿಕಾರಿಗಳನ್ನು ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, ಮಾವೋವಾದಿಗಳ ವಿರುದ್ಧದ ಹೋರಾಟವು ಈಗ ಅಂತಿಮ ಹಂತ ತಲುಪಿದೆ. ಹೀಗಾಗಿ ಅದನ್ನು ಇನ್ನಷ್ಟು ಚುರುಕುಗೊಳಿಸಿ, ನಿರ್ಣಾಯಕವಾಗಿಸಬೇಕು ಎಂದು ಕರೆ ನೀಡಿದರು.

ಮುಖ್ಯಮಂತ್ರಿಗಳಾದ ನವೀನ್ ಪಟ್ನಾಯಕ್ (ಒಡಿಶಾ), ಕೆ.ಚಂದ್ರಶೇಖರ ರಾವ್ (ತೆಲಂಗಾಣ), ನಿತೀಶ್ ಕುಮಾರ್ (ಬಿಹಾರ), ಶಿವರಾಜ ಸಿಂಗ್ ಚೌಹಾಣ್ (ಮಧ್ಯಪ್ರದೇಶ), ಉದ್ಧವ್ ಠಾಕ್ರೆ (ಮಹಾರಾಷ್ಟ್ರ), ಹೇಮಂತ್ ಸೊರೇನ್ (ಜಾರ್ಖಂಡ್) ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪಶ್ಚಿಮ ಬಂಗಾಳ, ಛತ್ತೀಸಗಡ, ಆಂಧ್ರಪ್ರದೇಶ ಮತ್ತು ಕೇರಳ ಮುಖ್ಯಮಂತ್ರಿಗಳಿಗೂ ಆಹ್ವಾನ ನೀಡಲಾಗಿತ್ತು. ಇವರ ಬದಲಾಗಿ ಆ ರಾಜ್ಯಗಳ ಸಚಿವರು ಅಥವಾ ಉನ್ನತ ಅಧಿಕಾರಿಗಳು ಪಾಲ್ಗೊಂಡಿದ್ದರು.

ನಕ್ಸಲ್ ಸಮಸ್ಯೆಗೆ ವರ್ಷದಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಎಲ್ಲ ಸಿ.ಎಂಗಳು ಆದ್ಯತೆ ನೀಡಬೇಕು ಎಂದು ಅವರು ಹೇಳಿದರು.

ಗುಲಾಬ್ ಚಂಡಮಾರುತ ನೆಲಸ್ಪರ್ಶ

1 ಲಕ್ಷಕ್ಕೂ ಹೆಚ್ಚು ಜನರ ಸ್ಥಳಾಂತರ: ಆಂಧ್ರ, ಒಡಿಶಾ, ಪ.ಬಂಗಾಳದಲ್ಲಿ ಭಾರಿ ಮಳೆ

ಕೋಲ್ಕತ್ತ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ಗುಲಾಬ್ ಚಂಡಮಾರುತವು ಭಾನುವಾರ ರಾತ್ರಿ ಒಡಿಶಾ-ಆಂಧ್ರಪ್ರದೇಶ ಗಡಿಭಾಗದಲ್ಲಿ ನೆಲಸ್ಪರ್ಶಮಾಡಿದೆ. ಒಡಿಶಾದ ಗೋಪಾಲಪುರಂ ಮತ್ತು ಆಂಧ್ರಪ್ರದೇಶದ ಕಳಿಂಗಪಟ್ಟಣಂನಲ್ಲಿ ಚಂಡಮಾರುತವು ಭೂ ಪ್ರವೇಶ ಮಾಡಿದೆ.

ಚಂಡಮಾರುತದ ನೆಲಸ್ಪರ್ಶದ ನಂತರ ಎರಡೂ ರಾಜ್ಯಗಳಲ್ಲಿ ಭಾರಿ ಮಳೆಯಾಗಿದೆ. ಒಡಿಶಾ, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರವಾಹದ ಸ್ಥಿತಿ ಎದುರಿಸುವ ಅಪಾಯವಿದ್ದ ಪ್ರದೇಶಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ.

ನೆಲಸ್ಪರ್ಶದ ವೇಳೆ ಗಾಳಿಯ ವೇಗವು 95 ಕಿ.ಮೀ.ನಷ್ಟಿತ್ತು. 3 ರಾಜ್ಯಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಪಶ್ಚಿಮ ಬಂಗಾಳದಲ್ಲಿ ಚಂಡಮಾರುತದ ಪ್ರಭಾವವು ಕಡಿಮೆ ಇರಲಿದೆ. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ 20,000 ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ. ಆಂಧ್ರಪ್ರದೇಶದ 9 ಜಿಲ್ಲೆಗಳಲ್ಲಿ ಚಂಡಮಾರುತದ ಪ್ರಭಾವವು ತೀವ್ರವಾಗಿರಲಿದ್ದು, 85,000ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಪೂರ್ವ ಕರಾವಳಿ ರೈಲ್ವೆಯು 34 ರೈಲುಗಳ ಸಂಚಾರವನ್ನು ರದ್ದುಪಡಿಸಿದೆ.

ನೌಕಾಪಡೆ ಸನ್ನದ್ಧ: ಚಂಡಮಾರುತದ ತುರ್ತು ಪರಿಸ್ಥಿತಿಯನ್ನು ಎದುರಿಸಲು ನೌಕಾಪಡೆಯ ಎರಡು ವಿಮಾನವಾಹಕ ನೌಕೆಗಳನ್ನು ಸಿದ್ಧವಾಗಿ ಇರಿಸಲಿದೆ. ಚೆನ್ನೈಗೆ ಸಮೀಪದಲ್ಲಿ ಐಎನ್‌ಎಸ್ ದೇಗಾ ಮತ್ತು ಐಎನ್‌ಎಸ್ ರಾಜಾಲಿ ನೌಕೆಗಳನ್ನು ಸಜ್ಜಾಗಿ ಇರಿಸಲಾಗಿದೆ.

ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಲು ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ನೌಕಾಪಡೆ ತಿಳಿಸಿದೆ.

ಮೀನುಗಾರರ ಸಾವು

ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯಲ್ಲಿ ಚಂಡಮಾರುತಕ್ಕೆ ಸಿಲುಕಿ ಇಬ್ಬರು ಮೀನುಗಾರರು ಮೃತಪಟ್ಟಿದ್ದಾರೆ. ಒಬ್ಬರು ಕಣ್ಮರೆಯಾಗಿದ್ದಾರೆ.

ಮೀನುಗಾರಿಕೆಗೆ ಆಳ ಸಮುದ್ರಕ್ಕೆ ತೆರಳಿದ್ದ 6 ಮೀನುಗಾರರು ಭಾನುವಾರ ಸಂಜೆ ಕಣ್ಮರೆಯಾಗಿದ್ದರು. ಅವರ ದೋಣಿಯು ಸಂಪರ್ಕಕ್ಕೆ ಸಿಗುತ್ತಿರಲಿಲ್ಲ. ಮೀನುಗಾರರ ಹುಡುಕಾಟಕ್ಕೆ ನೌಕಾಪಡೆಯು ಕಾರ್ಯಾಚರಣೆ ನಡೆಸಿತು. ಈ ವೇಳೆ ಮೂವರು ಮೀನುಗಾರರು ಜೀವಂತವಾಗಿ ಪತ್ತೆಯಾಗಿದ್ದಾರೆ.

65 ಗಂಟೆಗಳಲ್ಲಿ 20 ಸಭೆಗಳಲ್ಲಿ ಪಾಲ್ಗೊಂಡ ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಅಮೆರಿಕ ಪ್ರವಾಸ ಶನಿವಾರಕ್ಕೆ ಮುಕ್ತಾಯವಾಯಿತು. ಅಮೆರಿಕದಲ್ಲಿದ್ದ 65 ಗಂಟೆಗಳಲ್ಲಿ ಅವರು 20 ಸಭೆಗಳಲ್ಲಿ ಭಾಗವಹಿಸಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಅಮೆರಿಕಕ್ಕೆ ತೆರಳುವಾಗ ಮತ್ತು ಅಲ್ಲಿಂದ ವಾಪಸ್ ಬರುವಾಗ ವಿಮಾನದಲ್ಲಿ ಕೂಡ ಅಧಿಕಾರಿಗಳ ಜೊತೆ ನಾಲ್ಕು ಸುದೀರ್ಘವಾದ ಸಭೆಗಳನ್ನು ಅವರು ನಡೆಸಿದ್ದಾರೆ ಎನ್ನಲಾಗಿದೆ.

ಈ ಕುರಿತ ವಿವರಗಳನ್ನು ಸರ್ಕಾರದ ಮೂಲಗಳು ನೀಡಿವೆ. ಬುಧವಾರ ಅಮೆರಿಕಕ್ಕೆ ತೆರಳುವ ವೇಳೆ ಅವರು ವಿಮಾನದಲ್ಲಿ ಎರಡು ಸಭೆಗಳನ್ನು ನಡೆಸಿದ್ದಾರೆ. ಗುರುವಾರ (ಸೆ.23) ಸಿಇಒಗಳ ಜೊತೆ ಐದು ಸಭೆಗಳನ್ನು ಅವರು ನಡೆಸಿದ್ದರು. ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಜೊತೆಯೂ ಸಭೆ ನಡೆಸಿದ್ದರು. ಅದೇ ದಿನ ಜಪಾನ್ ಮತ್ತು ಆಸ್ಟ್ರೇಲಿಯ ಪ್ರಧಾನಿಗಳ ಜೊತೆ ದ್ವಿಪಕ್ಷೀಯ ಸಭೆ ನಡೆಸಿದ್ದರು. ಜೊತೆಗೆ, ಮೂರು ಆಂತರಿಕ ಸಭೆಗಳ ಅಧ್ಯಕ್ಷತೆಯನ್ನು ಮೋದಿ ವಹಿಸಿದ್ದರು.

ಮರುದಿನ ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ದ್ವಿಪಕ್ಷೀಯ ಸಭೆ ನಡೆಸಿದ್ದರು ಮತ್ತು ಕ್ವಾಡ್ ಸಭೆಯಲ್ಲಿ ಭಾಗಿಯಾಗಿದ್ದರು. ಅದೇ ದಿನ ಅವರು 4 ಇತರ ಆಂತರಿಕ ಸಭೆಗಳಲ್ಲೂ ಭಾಗವಹಿಸಿದ್ದರು. ಸೆ.25ರಂದು ಅವರು ಭಾರತಕ್ಕೆ ವಾಪಸಾದರು. ಅಲ್ಲಿಂದ ಹೊರಡುವ ಮುನ್ನ ಹೋಟೆಲ್‌ನಲ್ಲಿ ಮೂರು ಸಭೆಗಳನ್ನು ನಡೆಸಿದ್ದರು. ವಿಮಾನದಲ್ಲಿಯೂ ಎರಡು ಸಭೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

2 ಕಿ.ಮೀ ನಡೆದ ಪ್ರಧಾನಿ

ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಭಾನುವಾರ ಬೆಳಿಗ್ಗೆ ಬಂದಿಳಿದ ಮೋದಿ ಅವರನ್ನು ಬಿಜೆಪಿ ಮುಖಂಡರು ಸ್ವಾಗತಿಸಿದರು. ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರೂ ಇದ್ದರು. ವಿಮಾನ ನಿಲ್ದಾಣದ ಹೊರಗೆ ಕಾದಿದ್ದ ಪಕ್ಷದ ಕಾರ್ಯಕರ್ತರು ಮತ್ತು ಜನರನ್ನು ಭೇಟಿಯಾಗುತ್ತಾ ಮೋದಿ ಅವರು ಸುಮಾರು ಎರಡು ಕಿ.ಮೀ. ನಡೆದರು. ತಮ್ಮನ್ನು ಸ್ವಾಗತಿಸಲು ಬಂದ ಜನರಿಗೆ ಕೃತಜ್ಞತೆ ಹೇಳಿದರು.

ಪ್ರಶಸ್ತಿಯೊಂದಿಗೆ ಸಾನಿಯಾ ಮಿರ್ಜಾ (ಎಡ) ಹಾಗೂ ಶುಯಿ ಜಾಂಗ್

ಸಾನಿಯಾಗೆ ಒಸ್ಟ್ರಾವ ಕಿರೀಟ

ಒಸ್ಟ್ರಾವ, ಜೆಕ್ ಗಣರಾಜ್ಯ (ಪಿಟಿಐ): ಭಾರತದ ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರು ಒಸ್ಟ್ರಾವ ಓಪನ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಾರೆ. ಚೀನಾದ ಶುಯಿ ಜಾಂಗ್ ಜೊತೆಗೂಡಿದ ಅವರು ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ಕೈಟ್ಲಿನ್ ಕ್ರಿಸ್ಟಿಯನ್ ಮತ್ತು ಎರಿನ್ ರೌಟ್‌ಲಿಫ್ ಅವರನ್ನು ಸೋಲಿಸಿದರು.

ಸಾನಿಯಾ ಅವರಿಗೆ ಈ ವರ್ಷದಲ್ಲಿ ಒಲಿದ ಮೊದಲ ಪ್ರಶಸ್ತಿ ಇದು.

ಒಂದು ತಾಸು ನಾಲ್ಕು ನಿಮಿಷಗಳ ಕಾಲ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಭಾರತ– ಚೀನಾ ಜೋಡಿಯು 6-3, 6-2ರಿಂದ ಅಮೆರಿಕದ ಕೈಟ್ಲಿನ್ ಮತ್ತು ನ್ಯೂಜಿಲೆಂಡ್‌ನ ಎರಿನ್ ಎದುರು ಗೆದ್ದರು.

ಥಾಯ್ಲೆಂಡ್‌ಗೆ ಮಣಿದ ಭಾರತ

ವಂಟಾ, ಫಿನ್ಲೆಂಡ್ (ಪಿಟಿಐ): ಸುದಿರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಪಂದ್ಯದಲ್ಲೇ ಭಾರತ ತಂಡ ಎಡವಿದೆ. ಇದರೊಂದಿಗೆ ನಾಕೌಟ್ ಹಂತಕ್ಕೆ ಪ್ರವೇಶಿಸುವ ತಂಡದ ಆಸೆ ಕ್ಷೀಣಗೊಂಡಿದೆ.

ಭಾನುವಾರ ನಡೆದ ‘ಎ’ ಗುಂಪಿನ ಹಣಾಹಣಿಯಲ್ಲಿ ಭಾರತ ತಂಡದವರು 1–4ರಿಂದ ಥಾಯ್ಲೆಂಡ್ ಎದುರು ಎಡವಿದರು. ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್ ಮತ್ತು ಧ್ರುವ ಕಪಿಲ ಮಾತ್ರ ಜಯ ಸಾಧಿಸಿದರೆ, ಪುರುಷರ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್, ಮಹಿಳಾ ಡಬಲ್ಸ್‌ನಲ್ಲಿ ಆಡಲಿಳಿದ ಅಶ್ವಿನಿ ಪೊನ್ನಪ್ಪ– ಎನ್.ಸಿಕ್ಕಿ ರೆಡ್ಡಿ ಜೋಡಿ ನಿರಾಸೆ ಅನುಭವಿಸಿತು.

ವಿಶ್ವದ ಮಾಜಿ ಅಗ್ರಕ್ರಮಾಂಕದ ಆಟಗಾರ ಶ್ರೀಕಾಂತ್ ಅವರು 9-21 19-21ರಿಂದ ಕುನ್ಲಾವತ್ ವಿಟಿದ್ಸನ್ ಎದುರು ಮಣಿದರೆ, ಅಶ್ವಿನಿ–ಸಿಕ್ಕಿ 21-23 8-21ರಿಂದ ಜೊಂಗ್‌ಕೊಲ್ಫನ್ ಕಿತಿತಾರ್ಕುಲ್ ಹಾಗೂ ರವಿಂದಾ ಪ್ರಜೊಂಗ್‌ಜಾಯ್ ವಿರುದ್ಧ ಸೋಲು ಅನುಭವಿಸಿದರು. ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬಾನ್ಸೋದ್ 11-21 14-21ರಿಂದ ಪಾರ್ನ್‌ಪವಿ ಚೊಚುವಾಂಗ್ ಎದುರು ಎಡವಿದರು. ನಂತರದ ಪಂದ್ಯದಲ್ಲಿ ಅರ್ಜುನ್ – ಕಪಿಲ 21-18 21-17ರಿಂದ ಸುಪಕ್ ಜೊಮ್ಕೊಹ್ ಹಾಗೂ ಕಿಟಿನುಪೊಂಗ್ ಕೆಡ್ರೆನ್ ಎದುರು ಜಯ ಸಾಧಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಬಿ. ಸಾಯಿ ಪ್ರಣೀತ್–ತನಿಶಾ ಕ್ರಾಸ್ಟೊ 13-21 11-21ರಿಂದ ದೇಚ್‌ಪೊಲ್ ಪುವರನುಕ್ರೊ ಮತ್ತು ಸಪ್‌ಸೈರಿ ತೀರ್‌ತನಾಚಿ ಎದುರು ಎಡವಿದರು.

ಎರಡು ದಾಖಲೆ ಬರೆದ ರಿಧಿಮಾ

ರಾಜ್ಯ ಈಜು ಚಾಂಪಿಯನ್‌ಷಿಪ್: ಶಿವ, ಸಂಭವ್, ಶೋನ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರದ ರಿಧಿಮಾ ವೀರೇಂದ್ರ ಕುಮಾರ್ ಅವರು ರಾಜ್ಯ ಈಜು ಸಂಸ್ಥೆ ಆಯೋಜಿಸಿರುವ ಈಜು ಚಾಂಪಿಯನ್‌ಷಿಪ್‌ನ ನಾಲ್ಕನೇ ದಿನವಾದ ಭಾನುವಾರ ಎರಡು ಕೂಟ ದಾಖಲೆ ಬರೆದರು.

ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಗುಂಪು ಎರಡರ ಬಾಲಕಿಯರ 50 ಮೀ. ಫ್ರೀಸ್ಟೈಲ್‌ನಲ್ಲಿ (28.14 ಸೆಕೆಂಡು) ಮತ್ತು 50 ಮೀ. ಬ್ಯಾಕ್‌ಸ್ಟ್ರೋಕ್ (30.6 ಸೆ) ವಿಭಾಗದಲ್ಲಿ ಕೂಟ ದಾಖಲೆಗಳೊಂದಿಗೆ ಚಿನ್ನ ಗೆದ್ದರು. ಭಾನುವಾರ ಹಲವು ದಾಖಲೆ ನಿರ್ಮಾಣವಾದವು.

ನಾಲ್ಕನೇ ದಿನದ ಫಲಿತಾಂಶಗಳು: 800 ಮೀ. ಫ್ರೀಸ್ಟೈಲ್:ಪುರುಷರು: ಕೌಸ್ತುಭ್ ಅಗರವಾಲ್ (ಬಸವನಗುಡಿ ಈಜು ಕೇಂದ್ರ)–1, ಕಾಲ: 8:57.10, ಆರ್ಯನ್ ಭೋಸ್ಲೆ–2, ರಿಷಭ್ ಚೌಬೆ–3 (ಅತಿಥಿ ಈಜುಪಟುಗಳು– ಡಾಲ್ಫಿನ್). ಬಾಲಕರ ಗುಂಪು 1: ಅನೀಶ್ ಎಸ್. ಗೌಡ (ಬಿಎಸಿ)–1, ಕಾಲ: 8:34.79, ಶಿವಾಂಕ್ ವಿಶ್ವನಾಥ್ (ಜಿಎಫ್‌ಆರ್‌ಎವೈ)–2, ಅಮೋಘ ವೆಂಕಟೇಶ್ (ಬಿಎಸಿ)–3. ಗುಂಪು 2: ಪವನ್ ಧನಂಜಯ (ಬಿಎಸಿ)–1, ಕಾಲ: 9:03.26, ಅಲಸ್ಟೇರ್ ಸ್ಯಾಮ್ಯುಯೆಲ್ ರೆಗೊ–2, ಕ್ರಿಶ್ ಸುಕುಮಾರ್–3 (ಇಬ್ಬರೂ ಡಾಲ್ಫಿನ್). 200 ಮೀ. ಫ್ರೀಸ್ಟೈಲ್: ಬಾಲಕರ ಗುಂಪು 2: ನವನೀತ್ ಆರ್. ಗೌಡ(ಡಾಲ್ಫಿನ್)–1, ಕಾಲ: 2:19.66 (ಕೂಟ ದಾಖಲೆ), ಪವನ್ ಧನಂಜಯ (ಬಿಎಸಿ)–2, ಸೂರ್ಯ ಜೋಯಪ್ಪ (ಬಿಎಸಿ)–3. ಗುಂಪು 1: ಶೋನ್ ಗಂಗೂಲಿ (ಬಿಎಸಿ)–1, ಕಾಲ: 2:09.30 (ಕೂಟ ದಾಖಲೆ), ಕಲ್ಪ್ ಬೊಹ್ರಾ (ಬಿಎಸಿ)–2, ವಿದಿತ್ ಶಂಕರ್ (ಡಾಲ್ಫಿನ್)–3. 200 ಮೀ. ಮೆಡ್ಲೆ: ಪುರುಷರು: ಶಿವ ಎಸ್.–1, ಕಾಲ: 2:07.61 (ಕೂಟ ದಾಖಲೆ), ರಾಜ್ ವಿನಾಯಕ್ ರೆಲೇಕರ್ –2, ಕೌಸ್ತುಭ್ ಅಗರವಾಲ್–3 (ಎಲ್ಲರೂ ಬಿಎಸಿ). 50 ಮೀ. ಫ್ರೀಸ್ಟೈಲ್: ಬಾಲಕರ ಗುಂಪು 2: ಚಿಂತನ್ ಶೆಟ್ಟಿ (ಮಂಗಲಾ ಸ್ವಿಮಿಂಗ್ ಕ್ಲಬ್)–1, ಕಾಲ:26.90, ವಿಸ್ತೃತ್ ಮೆಹರೊತ್ರಾ(ಜೀ ಸ್ವಿಮ್)–2, ಸುಯೋಗ್ ಗೌಡ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3. ಗುಂಪು 1: ಸಂಭವ್ ಆರ್. (ಬಿಎಸ್‌ಆರ್‌ಸಿ)–1, ಕಾಲ: 23.73 (ಕೂಟ ದಾಖಲೆ), ಸಾಯಿ ಸಮರ್ಥ್ ಎನ್.ವಿ. (ವಿಜಯನಗರ)–2, ಸಂಜೀತ್ ಎಲ್. (ಬಿಎಸಿ)–3. ಪುರುಷರು: ಪೃಥ್ವಿ ಎಂ. (ಬಿಎಸಿ)–1, ಕಾಲ: 24.51, ಆದಿತ್ಯ ಭಂಡಾರಿ (ಜೈ ಹಿಂದ್, ಮಂಗಳೂರು)–2, ಪೃಥ್ವಿಕ್ ಡಿ.ಎಸ್. (ಬಿಎಸಿ)–3. 50 ಮೀ. ಬ್ಯಾಕ್‌ಸ್ಟ್ರೋಕ್: ಬಾಲಕರ ಗುಂಪು 2: ಅನಂತಜೀತ್ ಮುಖರ್ಜಿ (ಬಿಎಸ್‌ಆರ್‌ಸಿ)–1, ಕಾಲ: 31.96, ಸಾತ್ವಿಕ್ ಪ್ರಸನ್ನ (ಎನ್‌ಎಸಿ)–2, ಡೈಲಾನ್ ವ್ಯಾಸ್ ಸ್ಲೆಜಾರ್ (ಮಂಗಲಾ)–3. ಗುಂಪು 1: ಉತ್ಕರ್ಷ್ ಪಾಟೀಲ್ (ಬಿಎಸಿ)–1, ಕಾಲ: 27.45, ನಯನ್ ವಿಘ್ನೇಶ್ (ಎನ್‌ಎಸಿ)–2, ಗ್ರುಥನ್ ವಿ. (ವಿಜಯನಗರ)–3. ಪುರುಷರು: ಶ್ರೀಹರಿ ನಟರಾಜ್ (ಡಾಲ್ಫಿನ್)–1, ಕಾಲ: 25.91, ಭವೇಶ್ ಆರ್–2, ಜತಿನ್ ಬಿ.–3 (ಇಬ್ಬರೂ ಬಿಎಸ್‌ಆರ್‌ಸಿ). 4X100 ಮೀ. ಫ್ರೀಸ್ಟೈಲ್: ಬಾಲಕರ ಗುಂಪು 2: ಡಾಲ್ಫಿನ್ ತಂಡ ‘ಎ‘ –1, ಕಾಲ: 3:59.31, ಬಿಎಸಿ ‘ಎ’–2, ಡಾಲ್ಫಿನ್ ‘ಬಿ’–3.

ರಿಧಿಮಾ ವೀರೇಂದ್ರಕುಮಾರ್– ಪ್ರಜಾವಾಣಿ ಚಿತ್ರ

ಶೋನ್ ಗಂಗೂಲಿ

ಮಹಿಳಾ ವಿಭಾಗದ ಫಲಿತಾಂಶಗಳು: 800 ಮೀ. ಫ್ರೀಸ್ಟೈಲ್: ಮಹಿಳೆಯರು: ನಿಖಿತಾ ಎಸ್. ವಿ –1, ಕಾಲ: 10:26.79, ಧೃತಿ ಮುರಳೀಧರ್–2, ಇಂಚರಾ ನಾರಾಯಣ್–3 (ಎಲ್ಲರೂ ಬಿಎಸಿ). ಬಾಲಕಿಯರ ಗುಂಪು 1: ಅಸ್ಮಿತಾ ಚಂದ್ರ–1, ಕಾಲ: 9:57.14, ಅನುಮತಿ ಚೌಗಲೆ–2 (ಇಬ್ಬರೂ ಜಿಎಫ್‌ಆರ್‌ಎವೈ), ಅರಿಯಾ ಶೇತ್ (ಅತಿಥಿ- ಜಿಎಫ್‌ಆರ್‌ಎವೈ)–3. ಗುಂಪು 2: ಶಿರಿನ್ (ಬಿಎಸಿ)–1, ಕಾಲ: 9:46.40 (ಕೂಟ ದಾಖಲೆ), ಅಂಬರ್ ಸಿಂಗ್ (ಡಾಲ್ಫಿನ್)–2, ರಿತಿಕಾ ಬಿ.ಎಂ (ಬಿಎಸಿ)–3. 200 ಮೀ. ಮೆಡ್ಲೆ: ಬಾಲಕಿಯರ ಗುಂಪು 2: ಮಾನವಿ ವರ್ಮಾ –1, ಕಾಲ: 2:32.61 (ಕೂಟ ದಾಖಲೆ), ರಿಯಾನ್ನಾ ಫರ್ನಾಂಡಿಸ್–2, ಅಂಬರ್ ಸಿಂಗ್–3 (ಎಲ್ಲರೂ ಡಾಲ್ಫಿನ್). ಗುಂಪು 1: ಎ. ಜೆದಿದಾ (ಡಿಕೆವಿ)–1, ಕಾಲ: 2:33.70, ಲಕ್ಷ್ಯಾ ಎಸ್ (ಬಿಎಸಿ)–2, ನಯಿಶಾ ಶೆಟ್ಟಿ (ಡಾಲ್ಫಿನ್)–3. ಮಹಿಳೆಯರು: ವಿ. ಪ್ರೀತಾ (ಡಿಕೆವಿ)–1, ಕಾಲ: 2:44.60, ವಿಭಾ ಭೋಸ್ಲೆ (ಬಿಎಸಿ)–2. 50 ಮೀ. ಫ್ರೀಸ್ಟೈಲ್: ಬಾಲಕಿಯರ ಗುಂಪು 2: ರಿಧಿಮಾ ವೀರೇಂದ್ರ ಕುಮಾರ್ (ಬಿಎಸಿ)–1, ಕಾಲ: 28.14 (ಕೂಟ ದಾಖಲೆ), ಶಾಲಿನಿ ದೀಕ್ಷಿತ್ (ಡಾಲ್ಫಿನ್)–2, ರಿಷಿಕಾ ಮಂಗಲೆ (ವಿಜಯನಗರ)–3. ಗುಂಪು 1: ಲಿತೇಶಾ ಮಂದಣ್ಣ–1, ಕಾಲ:28.57, ಇಂಚರಾ ಬಿ.–2 (ಇಬ್ಬರೂ ಜಿಎಫ್‌ಆರ್‌ಎವೈ), ನಯಿಶಾ ಶೆಟ್ಟಿ (ಡಾಲ್ಫಿನ್)–3. ಮಹಿಳೆಯರು: ಮಧುರಾ ಬಿ.ಜಿ.–1, ಕಾಲ: 28.91, ಸುನೈನಾ ಮಂಜುನಾಥ್–2, ಮಯೂರಿ ಲಿಂಗರಾಜ್–3 (ಎಲ್ಲರೂ ಬಿಎಸಿ). 50 ಮೀ. ಬ್ಯಾಕ್‌ಸ್ಟ್ರೋಕ್: ಬಾಲಕಿಯರ ಗುಂಪು 2: ರಿಧಿಮಾ ವೀರೇಂದ್ರ ಕುಮಾರ್ (ಬಿಎಸಿ)–1, ಕಾಲ: 30.06 (ಕೂಟ ದಾಖಲೆ), ಶಾಲಿನಿ ದೀಕ್ಷಿತ್–2, ಸಿದ್ಧಿ ಶಾ–3 (ಇಬ್ಬರೂ ಡಾಲ್ಫಿನ್). ಗುಂಪು 1: ನೀನಾ ವೆಂಕಟೇಶ್ (ಡಾಲ್ಫಿನ್)–1, ಕಾಲ:30.75, ರಿತು ಭರಮರೆಡ್ಡಿ (ಬಿಎಸಿ)–2, ಇಮಾನಿ ಜಾಧವ್ (ಡಾಲ್ಫಿನ್)–3. ಮಹಿಳೆಯರು: ದಾಮಿನಿ ಗೌಡ (ಬಿಎಸಿ)–1, ಕಾಲ: 32.91, ಪ್ರಕೃತಿ ಶಾಸ್ತ್ರಿ (ಮತ್ಸ್ಯ)–2, ಭೂಮಿಕಾ ಕೇಸರಕರ್ (ಬಿಎಸ್‌ಆರ್‌ಸಿ)–3.

ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಅರ್ಧಶತಕ; ಯುಜುವೇಂದ್ರ ಚಾಹಲ್ ಮೋಡಿ

ಪಟೇಲ್ ಹ್ಯಾಟ್ರಿಕ್; ಆರ್‌ಸಿಬಿಗೆ 'ಹರ್ಷ'

ದುಬೈ (ಪಿಟಿಐ): ಮಧ್ಯಮವೇಗಿ ಹರ್ಷಲ್ ಪಟೇಲ್ ಹ್ಯಾಟ್ರಿಕ್ ಸಾಧನೆಯಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ಅಮೋಘ ಜಯ ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ವಿರಾಟ್ (51; 42ಎ) ಮತ್ತು ಮ್ಯಾಕ್ಸ್‌ವೆಲ್ (56; 37ಎ) ಅವರ ಅರ್ಧಶತಕಗಳ ಬಲದಿಂದ ಬೆಂಗಳೂರು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಮುಂಬೈ ತಂಡವು 18.1 ಓವರ್‌ಗಳಲ್ಲಿ 111 ರನ್ ಗಳಿಸಿ ಆಲೌಟ್ ಆಯಿತು. 54 ರನ್‌ಗಳ ಅಂತರದಿಂದ ಸೋತಿತು. ಇದರೊಂದಿಗೆ ಮುಂಬೈ ತಂಡವು ಟೂರ್ನಿಯಲ್ಲಿ ಆರನೇ ಸೋಲಿನ ಕಹಿ ಅನುಭವಿಸಿತು. ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನಕ್ಕೆ ಕುಸಿಯಿತು. ಆರ್‌ಸಿಬಿ 12 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೇರಿತು.

ಹರ್ಷಲ್ ಹ್ಯಾಟ್ರಿಕ್: ಗುರಿ ಬೆನ್ನಟ್ಟಿದ ಮುಂಬೈಗೆ ಇನಿಂಗ್ಸ್‌ನ ಆರಂಭದಲ್ಲಿ ಸ್ಪಿನ್ನರ್ ಯುಜುವೇಂದ್ರ ಚಾಹಲ್ ಹೊಡೆತ ಕೊಟ್ಟರು. 17ನೇ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯ, ಕೀರನ್ ಪೊಲಾರ್ಡ್ ಮತ್ತು ರಾಹುಲ್ ಚಾಹರ್ ಅವರನ್ನು ಡಗ್‌ಔಟ್‌ಗೆ ಕಳಿಸಿದ ಹರ್ಷಲ್ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಈ ಆವೃತ್ತಿಯಲ್ಲಿ ಹರ್ಷಲ್ 10 ಪಂದ್ಯಗಳನ್ನು ಆಡಿ 23 ವಿಕೆಟ್ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ.

ಮುಂಬೈ ನಾಯಕ ರೋಹಿತ್ ಶರ್ಮಾ (43) ಮತ್ತು ಕ್ವಿಂಟನ್ ಡಿ ಕಾಕ್ (24) ಅವರು ಮೊದಲ ವಿಕೆಟ್‌ಗೆ 57 ರನ್ ಗಳಿಸಿ ಉತ್ತಮ ಆರಂಭ ನೀಡಿದ್ದರು. ಆದರೆ, ಚಾಹಲ್, ಡಿಕಾಕ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ಅದರ ನಂತರ ರೋಹಿತ್ ಶರ್ಮಾಗೆ ಹತ್ತನೇ ಓವರ್‌ನಲ್ಲಿ ಮ್ಯಾಕ್ಸ್‌ವೆಲ್ ಪೆವಿಲಿಯನ್ ಹಾದಿ ತೋರಿಸಿದರು. ಇಲ್ಲಿಂದ ಮುಂಬೈ ತಂಡದ ಪತನ ಆರಂಭವಾಯಿತು. 32 ರನ್‌ಗಳ ಅಂತರದಲ್ಲಿ ಎಂಟು ವಿಕೆಟ್‌ಗಳು ಪತನವಾದವು. ಚಾಹಲ್, ಸಿರಾಜ್ ಹಾಗೂ ಮ್ಯಾಕ್ಸ್‌ವೆಲ್ ಅವರ ದಾಳಿಯ ಜೊತೆಗೆ ಹರ್ಷಲ್ ಹ್ಯಾಟ್ರಿಕ್‌ನ ಅಬ್ಬರಕ್ಕೆ ರೋಹಿತ್ ಬಳಗವು ತತ್ತರಿಸಿತು.

ಮ್ಯಾಕ್ಸ್‌ವೆಲ್ ಬ್ಯಾಟಿಂಗ್‌ನ-ಲ್ಲಿಯೂ ಮಿಂಚಿದ್ದರು. ಸತತ ಎರಡನೇ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿಯೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದರು. ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ವಿರಾಟ್ ಕೊಹ್ಲಿಯ ಕ್ಯಾಚ್ ಕೈಚೆಲ್ಲಿದ್ದ ರಾಹುಲ್ ಚಾಹರ್ ಲೋಪವು ಮುಂಬೈಗೆ ದುಬಾರಿಯಾಯಿತು. ಅವರು ಶ್ರೀಕರ್ ಭರತ್ (32ರನ್) ಅವರೊಂದಿಗೆ 2ನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದರು. ವಿರಾಟ್ 40 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. 'ದುಬಾರಿ' ಆಟಗಾರ ಗ್ಲೆನ್ 33ಎಸೆತಗಳಲ್ಲಿ 50ರ ಗಡಿ ದಾಟಿದರು. ಆ್ಯಡಂ ಮಿಲ್ನೆ ಎಸೆತದಲ್ಲಿ ಕೊಹ್ಲಿ ಔಟಾದರು. ಆದರೆ, ಎಬಿ ಡಿವಿಲಿಯರ್ಸ್ (11) ಮತ್ತೊಮ್ಮೆ ವೈಫಲ್ಯ ಅನುಭವಿಸಿದರು.

ವಿರಾಟ್ 10 ಸಾವಿರ ರನ್: ಆರ್‌ಸಿಬಿ ನಾಯಕ ವಿರಾಟ್ ಕೊಹ್ಲಿ ಟಿ20 ಮಾದರಿಯ ಕ್ರಿಕೆಟ್‌ನಲ್ಲಿ 10 ಸಾವಿರ ರನ್‌ಗಳನ್ನು ಗಳಿಸಿದ ಸಾಧನೆ ಮಾಡಿದರು.

ಅಂತರರಾಷ್ಟ್ರೀಯ, ದೇಶಿ ಮತ್ತು ಫ್ರ್ಯಾಂಚೈಸ್ ಕ್ರಿಕೆಟ್‌ನ ಟ್ವೆಂಟಿ 20 ಪಂದ್ಯಗಳಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 89 ಪಂದ್ಯಗಳಿಂದ 3159 ರನ್ ಗಳಿಸಿದ್ದಾರೆ. ಐಪಿಎಲ್‌ನಲ್ಲಿ 202 ಪಂದ್ಯಗಳಿಂದ 6185 ರನ್ ಗಳಿಸಿದ್ದಾರೆ. ಉಳಿದ ರನ್‌ಗಳು ದೇಶಿ ಕ್ರಿಕೆಟ್ ಪಂದ್ಯಗಳಿಂದ ಬಂದಿವೆ.

ಪೊಲಾರ್ಡ್ ವಿಕೆಟ್ ಗಳಿಸಿದ ಹರ್ಷಲ್ ಪಟೇಲ್ (ಬಲ) ಸಂಭ್ರಮ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ165 (20 ಓವರ್)

ಕೊಹ್ಲಿ ಸಿ ಅನುಕೂಲ್ ಬಿ ಮಿಲ್ನೆ 51 (42ಎ, 4X3, 6X3), ಪಡಿಕ್ಕಲ್ ಸಿ ಡಿಕಾಕ್ ಬಿ ಬೂಮ್ರಾ 0(4ಎ), ಭರತ್ ಸಿ ಸೂರ್ಯಕುಮಾರ್ ಬಿ ರಾಹುಲ್ 32 (24ಎ, 4X2, 6X2), ಮ್ಯಾಕ್ಸ್‌ವೆಲ್ ಸಿ ಬೌಲ್ಟ್ ಬಿ ಬೂಮ್ರಾ 56 (37ಎ, 4X6, 6X3), ಡಿವಿಲಿಯರ್ಸ್ ಸಿ ಡಿಕಾಕ್ ಬಿ ಬೂಮ್ರಾ 11 (6ಎ, 4X1, 6X1), ಡ್ಯಾನಿಯಲ್ ಔಟಾಗದೆ 1(3ಎ), ಶಾಬಾಜ್ ಬಿ ಬೌಲ್ಟ್ 1 (3ಎ), ಜೆಮಿಸನ್ ಔಟಾಗದೆ 2 (2ಎ))

ಇತರೆ (ಲೆಗ್‌ಬೈ 4, ವೈಡ್ 6, ನೋಬಾಲ್ 1) 11

ವಿಕೆಟ್ ಪತನ: 1–7 (ದೇವದತ್ತ ಪಡಿಕ್ಕಲ್, 1.4), 2–75 (ಶ್ರೀಕರ್ ಭರತ್, 8.5), 3–126 (ವಿರಾಟ್ ಕೊಹ್ಲಿ, 15.5), 4–161 (ಗ್ಲೆನ್ ಮ್ಯಾಕ್ಸ್‌ವೆಲ್, 18.3), 5–161 (ಎಬಿ ಡಿವಿಲಿಯರ್ಸ್, 18.4), 6–162 (ಶಾಬಾಜ್ ಅಹಮದ್, 19.2).

ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–17–1, ಜಸ್‌ಪ್ರೀತ್ ಬೂಮ್ರಾ 4–0–36–3, ಆ್ಯಡಂ ಮಿಲ್ನೆ 4–0–48–1, ಕೃಣಾಲ್ ಪಾಂಡ್ಯ 4–0–27–0, ರಾಹುಲ್ ಚಾಹರ್ 4–0–33–1.

ಮುಂಬೈ 111 (18.1 ಓವರ್)

ರೋಹಿತ್ ಸಿ ಪಡಿಕ್ಕಲ್ ಬಿ ಮ್ಯಾಕ್ಸ್‌ವೆಲ್ 43 (28ಎ, 4X5, 6X1), ಡಿಕಾಕ್ ಸಿ ಮ್ಯಾಕ್ಸ್‌ವೆಲ್ ಬಿ ಚಾಹಲ್ 24 (23 ಎ, 4X4), ಇಶಾನ್ ಸಿ ಪಟೇಲ್ ಬಿ ಚಾಹಲ್ 9 (12ಎ, 4X1), ಸೂರ್ಯಕುಮಾರ್ ಸಿ ಚಾಹಲ್ ಬಿ ಸಿರಾಜ್ 8 (9ಎ), ಕೃಣಾಲ್ ಬಿ ಮ್ಯಾಕ್ಸ್‌ವೆಲ್ 5(11ಎ), ಪೊಲಾರ್ಡ್ ಬಿ ಪಟೇಲ್ 7 (10ಎ), ಹಾರ್ದಿಕ್ ಸಿ ಕೊಹ್ಲಿ ಬಿ ಪಟೇಲ್ 3 (6ಎ), ಮಿಲ್ನೆ ಬಿ ಪಟೇಲ್ 0 (1ಎ), ಚಾಹರ್ ಎಲ್‌ಬಿಡಬ್ಲ್ಯು ಪಟೇಲ್ 0 (1ಎ), ಬೂಮ್ರಾ ಬಿ ಚಾಹಲ್ 5 (6ಎ, 4X1), ಬೌಲ್ಟ್ ಔಟಾಗದೆ 0 (3ಎ)

ಇತರೆ (ಲೆಗ್‌ಬೈ 2, ವೈಡ್ 4, ನೋಬಾಲ್ 1) 7

ವಿಕೆಟ್ ಪತನ: 1–57(ಕ್ವಿಂಟನ್ ಡಿಕಾಕ್, 6.4), 2–79 (ರೋಹಿತ್ ಶರ್ಮಾ, 9.6), 3–81 (ಇಶಾನ್ ಕಿಶನ್, 10.3), 4–93 (ಕೃಣಾಲ್ ಪಾಂಡ್ಯ, 13.1), 5–97 (ಸೂರ್ಯಕುಮಾರ್ ಯಾದವ್, 14.1), 6–106 (ಹಾರ್ದಿಕ್ ಪಾಂಡ್ಯ, 16.1), 7–106 (ಕೀರನ್ ಪೊಲಾರ್ಡ್, 16.2), 8–106 (ರಾಹುಲ್ ಚಾಹರ್, 16.3), 9–111 (ಜಸ್‌ಪ್ರೀತ್ ಬೂಮ್ರಾ, 17.3), 10–111 (ಆ್ಯಡಂ ಮಿಲ್ನೆ, 18.1).

ಬೌಲಿಂಗ್: ಕೈಲ್ ಜೆಮಿಸನ್ 2–0–22–0, ಮೊಹಮ್ಮದ್ ಸಿರಾಜ್ 3–0–15–1, ಕ್ರಿಸ್ಟಿಯನ್ 2–0–21–0, ಹರ್ಷಲ್ ಪಟೇಲ್ 3.1–0–17–4, ಚಾಹಲ್ 4–1–11–3, ಮ್ಯಾಕ್ಸ್‌ವೆಲ್ 4–0–23–2

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ 54 ರನ್ ಜಯ

ಆರೆಂಜ್ ಕ್ಯಾಪ್
(ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	430
ಕೆ.ಎಲ್.ರಾಹುಲ್	ಪಂಜಾಬ್	401
ಡುಪ್ಲೆಸಿ	ಚೆನ್ನೈ	394

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	23
ಆವೇಶ್ ಖಾನ್	ಡೆಲ್ಲಿ	15
ಬೂಮ್ರಾ	ಮುಂಬೈ	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	10	8	2	00	00	16
ಡೆಲ್ಲಿ ಕ್ಯಾಪಿಟಲ್ಸ್	10	8	2	00	00	16
ಬೆಂಗಳೂರು	10	6	4	00	00	12
ಕೋಲ್ಕತ್ತ ನೈಟ್ ರೈಡರ್ಸ್	10	4	6	00	00	8
ಪಂಜಾಬ್	10	4	6	00	00	8
ರಾಜಸ್ತಾನ	9	4	5	00	00	8
ಮುಂಬೈ ಇಂಡಿಯನ್ಸ್	10	4	6	00	00	8
ಹೈದರಾಬಾದ್	9	1	8	00	00	2

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಚೆನ್ನೈಗೆ ರೋಚಕ ಜಯ

ರವೀಂದ್ರ ಜಡೇಜ ಬ್ಯಾಟಿಂಗ್ –ಪಿಟಿಐ ಚಿತ್ರ

ಅಬುಧಾಬಿ (ಪಿಟಿಐ): ಎಂಟು ಎಸೆತಗಳಲ್ಲಿ 22 ರನ್ ಗಳಿಸಿದ ರವೀಂದ್ರ ಜಡೇಜ ಅಬ್ಬರದಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ರೋಚಕ ಜಯ ಗಳಿಸಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ್ದ ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 171 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ್ದ ಚೆನ್ನೈ ತಂಡಕ್ಕೆ ಒಳ್ಳೆಯ ಆರಂಭ ಸಿಕ್ಕಿತ್ತು. ಆದರೆ, ಮಧ್ಯಮಕ್ರಮಾಂಕ ಕುಸಿದಿತ್ತು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಜಡೇಜ (22; 8ಎಸೆತ, 2ಬೌಂಡರಿ, 2ಸಿಕ್ಸರ್) ತಂಡವನ್ನು ಗೆಲುವಿನ ಹೊಸ್ತಿಲಿಗೆ ತಂದು ನಿಲ್ಲಿಸಿದರು. ಆದರೆ ಕೊನೆಯ ಓವರ್‌ನ ಐದನೇ ಎಸೆತದಲ್ಲಿ ಸುನೀಲ್ ನಾರಾಯಣ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಜಡೇಜ ಬಿದ್ದರು. ಕೊನೆಯ ಎಸೆತದಲ್ಲಿ ಗೆಲುವಿಗೆ ಅಗತ್ಯವಿದ್ದ ಒಂದು ರನ್ ಗಳಿಸಿದ ದೀಪಕ್ ಚಾಹರ್ ಸಂಭ್ರಮಿಸಿದರು. ಜಡೇಜ ಶ್ರಮ ವ್ಯರ್ಥವಾಗಲಿಲ್ಲ.

ಜಡೇಜ ಕ್ರೀಸ್‌ಗೆ ಬರುವ ಮುನ್ನ ತಂಡವು 17 ಓವರ್‌ಗಳಲ್ಲಿ 145 ರನ್ ಗಳಿಸಿ ಐದು ವಿಕೆಟ್ ಕಳೆದುಕೊಂಡಿತ್ತು. 18ನೇ ಓವರ್‌ನಲ್ಲಿ ನಾಯಕ ಧೋನಿ ಕೂಡ ನಿರ್ಗಮಿಸಿದರು. ಜಡೇಜರೊಂದಿಗೆ ಸೇರಿಕೊಂಡ ಸ್ಯಾಮ್ ಕರನ್ ದೊಡ್ಡ ಹೊಡೆತಗಳಿಗೆ ಪ್ರಯತ್ನಿ-ಸಲಿಲ್ಲ. ಆ ಓವರ್‌ನಲ್ಲಿ ಕೇವಲ ನಾಲ್ಕು ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಅದರಿಂದಾಗಿ ಜಯದ ಹಾದಿ ಮತ್ತಷ್ಟು ಕಠಿಣವಾಯಿತು.

ಆದರೆ,ಪ್ರಸಿದ್ಧ ಕೃಷ್ಣ ಹಾಕಿದ 19ನೇ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಎರಡು ಬೌಂಡರಿ ಸಿಡಿಸಿದ ಜಡೇಜ ಗೆಲುವನ್ನು ಮತ್ತೆ ತಮ್ಮತ್ತ ಸೆಳೆದುಕೊಂಡರು. ಈ ಓವರ್‌ನಲ್ಲಿ ಒಟ್ಟು 22 ರನ್‌ಗಳು ಬಂದವು. ಇದರಿಂದಾಗಿ ಕೊನೆಯ ಒಂದು ಓವರ್‌ನಲ್ಲಿ ಜಯಕ್ಕಾಗಿ ನಾಲ್ಕು ರನ್‌ಗಳ ಅಗತ್ಯವಿತ್ತು. ಕೊನೆಯ ಓವರ್‌ನ ಮೊದಲ ಎಸೆತದಲ್ಲಿಯೇ ಸ್ಯಾಮ್ ಕರನ್ ಔಟಾದರು. ಮೂರನೇ ಎಸೆತದಲ್ಲಿ ಠಾಕೂರ್ ಮೂರು ರನ್ ಗಳಿಸಿದ್ದರಿಂದ ಸ್ಕೋರ್ ಸಮವಾಯಿತು. ಆದರೆ, ವಿಜಯದ ಹೊಡೆತ ದಾಖಲಿಸುವ ಜಡೇಜ ಆಸೆ ಈಡೇರಲಿಲ್ಲ. ಕೊನೆ ಎಸೆತದ ಆತಂಕವನ್ನು ಚಾಹರ್ ದೂರ ಮಾಡಿದರು.

ರಾಹುಲ್ ತ್ರಿಪಾಠಿ (45 ರನ್) ಮತ್ತು ನಿತೀಶ್ ರಾಣಾ (ಔಟಾಗದೆ 37) ಅವರ ಆಟ ಚೇತೋಹಾರಿಯಾಗಿತ್ತು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 6ಕ್ಕೆ 171 (ರಾಹುಲ್ ತ್ರಿಪಾಠಿ 45, ನಿತೀಶ್ ರಾಣಾ ಔಟಾಗದೆ 37, ದಿನೇಶ್ ಕಾರ್ತಿಕ್ 26, ಆ್ಯಂಡ್ರೆ ರಸೆಲ್ 20; ಜೋಶ್ ಹ್ಯಾಜಲ್‌ವುಡ್ 40ಕ್ಕೆ 2, ಶಾರ್ದೂಲ್ ಠಾಕೂರ್ 20ಕ್ಕೆ 2, ರವೀಂದ್ರ ಜಡೇಜ 21ಕ್ಕೆ 1). ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 8ಕ್ಕೆ 172 (ಫಫ್ ಡುಪ್ಲೆಸಿ 43,ಋತುರಾಜ್ ಗಾಯಕವಾಡ 40, ಮೊಯಿನ್ ಅಲಿ 32, ರವೀಂದ್ರ ಜಡೇಜ 22; ಸುನಿಲ್ ನಾರಾಯಣ್ 41ಕ್ಕೆ 3, ಪ್ರಸಿದ್ಧ ಕೃಷ್ಣ 41ಕ್ಕೆ 1, ಲಾಕಿ ಫರ್ಗ್ಯುಸನ್ 33ಕ್ಕೆ 1) ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ ತಂಡಕ್ಕೆ ಎರಡು ವಿಕೆಟ್‌ಗಳ ಜಯ.

ಗೆಲುವಿನ ಒತ್ತಡದಲ್ಲಿ ರಾಜಸ್ಥಾನ್

ದುಬೈ (ಪಿಟಿಐ): ಪ್ಲೇ ಆಫ್ ಪ್ರವೇಶದ ಅವಕಾಶ ಜೀವಂತವಾಗಿ ಇರಿಸಿಕೊಳ್ಳಲು ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ಜಯ ಗಳಿಸುವುದು ಮಹತ್ವದ್ದಾಗಲಿದೆ.

ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ರಾಜಸ್ಥಾನ್ ಎದುರಿಸಲಿದೆ. ತಂಡದ ನಾಯಕ ಸಂಜು ಸ್ಯಾಮ್ಸನ್‌ಗೆ ಬ್ಯಾಟರ್‌ಗಳ ಪೂರ್ಣ ಬೆಂಬಲ ಸಿಕ್ಕರೆ ತಂಡವು ಗೆಲುವಿನ ಹಾದಿಗೆ ಮರಳಬಹುದು.ಒಂಬತ್ತು ಪಂದ್ಯಗಳನ್ನು ಆಡಿರುವ ರಾಜಸ್ಥಾನ್ ತಂಡವು ಎಂಟು ಅಂಕಗಳೊಂದಿಗೆ ಏಳನೇ ಸ್ಥಾನದಲ್ಲಿದೆ. ಅದರಲ್ಲಿ ಕನಿಷ್ಠ ನಾಲ್ಕರಲ್ಲಿ ಗೆದ್ದರೂ ಅವಕಾಶ ಸಿಗುವ ಸಾಧ್ಯತೆ ಇದೆ. ಎರಡನೇ ಹಂತದಲ್ಲಿ ರಾಜಸ್ಥಾನ್ ತಂಡವು ಪಂಜಾಬ್ ಕಿಂಗ್ಸ್ ಎದುರು ಎರಡು ರನ್‌ಗಳಿಂದ ಗೆದ್ದಿತ್ತು. ಆದರೆ, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 33 ರನ್‌ಗಳಿಂದ ಸೋತಿತ್ತು. ಆ ಪಂದ್ಯದಲ್ಲಿ ಸಂಜು 70 ರನ್ ಗಳಿಸಿದ್ದರು.

ಬಲಾಬಲ	
ಪಂದ್ಯಗಳು	14
ರಾಯಲ್ಸ್ ಜಯ	7
ಸನ್‌ರೈಸರ್ಸ್ ಜಯ	7

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ಆದರೆ, ಉಳಿದ ಬ್ಯಾಟರ್‌ಗಳು ವಿಫಲರಾಗಿದ್ದರು. ರಾಹುಲ್ ತೆವಾಟಿಯಾ, ರಿಯಾನ್ ಪರಾಗ್ ತಮಗೆ ಸಿಕ್ಕ ಅವಕಾಶಗಳಲ್ಲಿ ಸಾಮರ್ಥ್ಯ ಸಾಬೀತು ಮಾಡಿಲ್ಲ. ಬೌಲಿಂಗ್‌ನಲ್ಲಿ ಮುಸ್ತಫಿಜುರ್ ರೆಹಮಾನ್, ಕಾರ್ತಿಕ್ ತ್ಯಾಗಿ ಮತ್ತು ಚೇತನ್ ಸಕಾರಿಯಾ ತಮ್ಮ ಮೇಲಿನ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ.

ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿರುವ ಸನ್‌ರೈಸರ್ಸ್ ತಂಡವು ಇದುವರೆಗೆ ಟೂರ್ನಿಯಲ್ಲಿ ಗೆದ್ದಿರುವುದು ಒಂದು ಪಂದ್ಯ ಮಾತ್ರ. ಆತ್ಮವಿಶ್ವಾಸ ಕುಂದಿರುವ ಈ ತಂಡದ ವಿರುದ್ಧ ಸಂಜು ಬಳಗವು ಜಯಸುವ ಛಲದಲ್ಲಿದೆ.

'ಸರ್ದಾರ್ ಆಫ್ ಸ್ಪಿನ್' ಕೃತಿ ಬಿಡುಗಡೆ

75 ವಸಂತ ಪೂರೈಸಿದ ಬಿಷನ್ ಸಿಂಗ್

ನವದೆಹಲಿ (ಪಿಟಿಐ): ಬಿಷನ್ ಸಿಂಗ್ ಬೇಡಿ ಭಾರತ ತಂಡದ ನಾಯಕ-ರಾಗಿದ್ದಾಗ ತಮ್ಮ ಸಹ ಆಟಗಾರರ ಹಕ್ಕುಗಳಿಗಾಗಿ ಸದಾ ಹೋರಾಡಿದವರು. ನಿವೃತ್ತಿಯ ನಂತರವೂ ಕ್ರಿಕೆಟಿಗರ ಗೌರವಯುತ ಜೀವನವನ್ನು ಪ್ರತಿಪಾದಿಸಿ, ದೆಹಲಿ ಕ್ರಿಕೆಟ್ ಆಡಳಿತವನ್ನೇ ಎದುರು ಹಾಕಿಕೊಂಡಿದ್ದರು ಎಂದು ಮಾಜಿ ಕ್ರಿಕೆಟಿಗ ಕಪಿಲ್ ದೇವ್ ಹೇಳಿದ್ದಾರೆ.

ಶನಿವಾರ 75ನೇ ವಸಂತಕ್ಕೆ ಕಾಲಿರಿಸಿದ ಬೇಡಿಯವರ ಕುರಿತ 'ದ ಸರ್ದಾರ್ ಆಫ್ ಸ್ಪಿನ್; ಎ ಸೆಲಿಬ್ರೇಷನ್ ಆಫ್ ದ ಆರ್ಟ್ ಆಫ್ ಬಿಷನ್‌ಸಿಂಗ್ ಬೇಡಿ' ವಿಶೇಷ ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಕಪಿಲ್ ಹೇಳಿದ ಮಾತುಗಳಿವು. ಶುಕ್ರವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಬೇಡಿಯವರ ಕುಟುಂಬದ ಸದಸ್ಯರು ಮತ್ತು ಕ್ರಿಕೆಟ್ ರಂಗದ ಹಲವು ದಿಗ್ಗಜರು ಪಾಲ್ಗೊಂಡಿದ್ದರು.

ಬಿಷನ್ ಸಿಂಗ್

'ಕ್ರಿಕೆಟಿಗರು ಪ್ರವಾಸಕ್ಕೆ ಹೊರಟಾಗ ಅವರಿಗೆ ಸಿಗಬೇಕಾದ ವಸತಿ ಸೌಲಭ್ಯ, ಭತ್ಯೆ, ಸಂಭಾವನೆಗಳು ಮತ್ತು ಸೌಲಭ್ಯಗಳನ್ನು ಗೌರವಯುತವಾಗಿ ಒದಗಿಸುವಂತೆ ಡಿಡಿಸಿಎಯನ್ನು ಒತ್ತಾಯಿಸುತ್ತಿದ್ದರು. ಆಟಗಾರರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕೆಂದು ನಿಷ್ಠುರವಾಗಿ ವಾಗ್ವಾದವನ್ನೂ ಮಾಡುತ್ತಿದ್ದರು. ಮಂಡಳಿಯ ಅಧಿಕಾರಿಗಳನ್ನೂ ತರಾಟೆಗೆ ತೆಗೆದುಕೊಳ್ಳುವ ಮಟ್ಟಕ್ಕೆ ಹೋಗುತ್ತಿದ್ದರು. ಒಬ್ಬ ನಾಯಕನಿಗೆ ಇರುವ ಹಕ್ಕುಗಳ ಕುರಿತು ಸಮಗ್ರವಾಗಿ ಅರಿತು ನಡೆಯುತ್ತಿದ್ದರು. ಆದ್ದರಿಂದಲೇ ಅವರು ಸದಾ ಗೌರವಾನ್ವಿತರಾಗಿ-ದ್ದಾರೆ' ಎಂದು ಕಪಿಲ್ ಹೇಳಿದರು.

ಬೇಡಿಯವರ ಸಹ ಆಟಗಾರ, ಕನ್ನಡಿಗ ಬಿ.ಎಸ್. ಚಂದ್ರಶೇಖರ್, 'ಬಿಷನ್ ಸಿಂಗ್ ಒಬ್ಬ ವ್ಯಕ್ತಿ. ಆದರೆ ಅವರದ್ದು ಹಲವು ರೂಪಗಳು. ಅಮೋಘ ಬೌಲರ್, ಸಹೋದ್ಯೋಗಿ, ನಾಯಕ, ದಬ್ಬಾಳಿಕೆಯ ವಿರುದ್ಧ ಹೋರಾಟಗಾರ, ಆಯ್ಕೆಗಾರ, ಕೋಚ್, ಆಡಳಿತ-ಗಾರ,ವೀಕ್ಷಕ ವಿವರಣೆಗಾರ ಮತ್ತು ಅಂಕಣಕಾರ ಹೀಗೆ ಹಲವು ರೂಪಗಳು ಅವರದ್ದು. ಆ ಎಲ್ಲ ರೂಪಗಳೂ ನನ್ನ ಸ್ನೇಹಿತರು ಎಂಬುದೇ ಹೆಮ್ಮೆ' ಎಂದು ಈ ಪುಸ್ತಕದಲ್ಲಿ ಬರೆದಿದ್ದಾರೆ.

ಭಾರತ ತಂಡದ ಮಾಜಿ ನಾಯಕ ಬೇಡಿ ಕುರಿತ ಈ ಪುಸ್ತಕಕ್ಕೆ ದಿಗ್ಗಜ ಕಪಿಲ್ ದೇವ್ ಮುನ್ನುಡಿ ಬರೆದಿದ್ದಾರೆ. ಸುನೀಲ್ ಗಾವಸ್ಕರ್, ಇ.ಎ.ಎಸ್. ಪ್ರಸನ್ನ, ಫಾರೂಕ್ ಎಂಜಿನಿಯರ್, ಸಚಿನ್ ತೆಂಡೂಲ್ಕರ್, ವೆಂಕಟ ಸುಂದರಂ, ರಾಮಚಂದ್ರ ಗುಹಾ, ಗ್ರೇಗ್ ಚಾಪೆಲ್ ಮತ್ತು ನೇಹಾ ಬೇಡಿ (ಬಿಷನ್ ಸಿಂಗ್ ಅವರ ಮಗಳು) ಸೇರಿದಂತೆ ಬಹಳಷ್ಟು ದಿಗ್ಗಜರು ಸಂದೇಶಗಳನ್ನು ಬರೆದಿದ್ದಾರೆ. ಅಂತರರಾಷ್ಟ್ರೀಯ ಕ್ರಿಕೆಟ್ ಅಂಕಿ ಸಂಖ್ಯೆ ಸಂಗ್ರಹಕಾರ, ಬೆಂಗಳೂರಿನ ಎಚ್. ಆರ್. ಗೋಪಾಲಕೃಷ್ಣ ಈ ಕೃತಿಗೆ ಮಾಹಿತಿಗಳನ್ನು ಒದಗಿಸಿದ್ದಾರೆ. ಪುಸ್ತಕವನ್ನು ರೋಲಿ ಬುಕ್ಸ್ ಪ್ರಕಟಿಸಿದೆ. ಸಚಿನ್ ಬಜಾಜ್ ಸಂಪಾದಿಸಿದ್ದಾರೆ.

ರಷ್ಯಾದ ಸೋಚಿಯಲ್ಲಿ ಭಾನುವಾರ ನಡೆದ ರಷ್ಯನ್ ಗ್ರ್ಯಾನ್‌ಪ್ರಿಯಲ್ಲಿ ಪ್ರಶಸ್ತಿ ಗೆದ್ದ ಮರ್ಸಿಡಿಸ್ ಚಾಲಕ ಬ್ರಿಟನ್‌ನ ಲೂಯಿಸ್ ಹ್ಯಾಮಿಲ್ಟನ್ ಸಂಭ್ರಮ. ಫಾರ್ಮುಲಾ ಒನ್‌ನಲ್ಲಿ ಇದು ಅವರಿಗೆ ನೂರನೇ ಪ್ರಶಸ್ತಿ – ಎಎಫ್‌ಪಿ ಚಿತ್ರ

ಸ್ಯಾಫ್: ಭಾರತ ತಂಡ ಪ್ರಕಟ

ನವದೆಹಲಿ (ಪಿಟಿಐ): ಮಾಲ್ಡೀವ್ಸ್‌ನಲ್ಲಿ ಅ.1ರಿಂದ ನಡೆಯಲಿರುವ ಸ್ಯಾಫ್ ಚಾಂಪಿಯನ್‌ಷಿಪ್‌ಗೆ ಭಾರತ ಫುಟ್‌ಬಾಲ್ ತಂಡವನ್ನು ಪ್ರಕಟಿಸಲಾಗಿದೆ.

ಭಾರತ ತಂಡ ಇಂತಿದೆ: ಗೋಲ್‌ಕೀಪರ್ಸ್: ಗುರುಪ್ರೀತ್ ಸಿಂಗ್, ಅಮರಿಂದರ್ ಸಿಂಗ್, ವಿಶಾಲ್ ಕೈಥ್.

ಡಿಫೆಂಡರ್ಸ್: ಪ್ರೀತಮ್ ಕೊಟಲ್, ಸೆರಿಟನ್ ಫರ್ನಾಂಡಿಸ್, ಚಿಂಗ್ಲೆನ್ಸನಾ ಸಿಂಗ್, ರಾಹುಲ್, ಸುಭಶೀಶ್ ಬೋಸ್, ಮಂದಾರ್ ರಾವ್. ಮಿಡ್‌ಫೀಲ್ಡರ್ಸ್: ಉದಾಂತ್ ಸಿಂಗ್, ಬ್ರೆಂಡನ್ ಫರ್ನಾಂಡಿಸ್, ಲಲೆಂಗ್‌ಮಾವಿಯಾ, ಅನಿರುದ್ಧ ಥಾಪಾ, ಸಹಲ್ ಅಬ್ದುಲ್ ಸಮದ್, ಜೀಕ್‌ಸನ್ ಸಿಂಗ್, ಗ್ಲೆನ್ ಮಾರ್ಟಿನ್ಸ್, ಸುರೇಶ್ ಸಿಂಗ್, ಲಿಸ್ಟನ್ ಕೊಲಾಸೊ, ಯಾಸಿರ್ ಮೊಹಮ್ಮದ್.

ಫಾರ್ವರ್ಡ್ಸ್: ಮನವೀರ್ ಸಿಂಗ್, ರಹೀಂ ಅಲಿ, ಸುನಿಲ್ ಚೆಟ್ರಿ, ಫಾರೂಕ್ ಚೌಧರಿ.

ಆಸ್ಟ್ರೇಲಿಯಾ ಜಯದ ಓಟಕ್ಕೆ ಭಾರತದ ತಡೆ

ಮಕಾಯ್, ಆಸ್ಟ್ರೇಲಿಯಾ (ಪಿಟಿಐ):ಯುವ ಬ್ಯಾಟರ್‌ಗಳಾದ ಯಷ್ಟಿಕಾ ಭಾಟಿಯಾ (64) ಮತ್ತು ಶೆಫಾಲಿ ವರ್ಮಾ (56) ಅವರ ಅಮೋಘ ಅರ್ಧಶತಕಗಳು ಹಾಗೂ ಅನುಭವಿ ಜೂಲನ್ ಗೋಸ್ವಾಮಿ (37ಕ್ಕೆ3) ಅವರ ಬೌಲಿಂಗ್ ಭಾರತಕ್ಕೆ ಭಾನುವಾರ ಜಯ ತಂದುಕೊಟ್ಟವು.

ಆಸ್ಟ್ರೇಲಿಯಾ ಎದುರಿನ ಮೂರನೇ ಮತ್ತು ಕೊನೆಯ ಏಕದಿನ ಪಂದ್ಯದಲ್ಲಿ ಮಿಥಾಲಿ ರಾಜ್ ನಾಯಕತ್ವದ ಭಾರತ ಎರಡು ವಿಕೆಟ್‌ಗಳಿಂದ ಗೆದ್ದಿತು. ಇದರೊಂದಿಗೆ ಆತಿಥೇಯ ತಂಡದ 26 ಪಂದ್ಯಗಳ ಅಜೇಯ ಓಟಕ್ಕೆ ತಡೆಯೊಡ್ಡಿತು. ಆದರೆ ಮೊದಲೆರಡು ಪಂದ್ಯಗಳನ್ನು ತನ್ನದಾಗಿಸಿಕೊಂಡಿರುವ ಆಸ್ಟ್ರೇಲಿಯಾ ಸರಣಿಯನ್ನು 2–1ರಿಂದ ವಶಪಡಿಸಿಕೊಂಡಿದೆ.

ಭಾರತ 265 ರನ್‌ಗಳ ಗುರಿ ಬೆನ್ನಟ್ಟಿ ಗೆಲುವು ಸಾಧಿಸಿರುವುದು ದಾಖಲೆಯಾಗಿದೆ.ಟಾಸ್ ಗೆದ್ದು ಬ್ಯಾಟಿಂಗ್ ಆರಿಸಿಕೊಂಡ ಆಸ್ಟ್ರೇಲಿಯಾ ನಿಗದಿತ ಓವರ್‌ಗಳಲ್ಲಿ ಒಂಬತ್ತು ವಿಕೆಟ್‌ಗೆ 264 ರನ್ ಕಲೆಹಾಕಿತು. ಭಾರತದ ಮಹಿಳೆಯರು 8 ವಿಕೆಟ್ ಕಳೆದುಕೊಂಡು, ಕೊನೆಯ ಓವರ್‌ನಲ್ಲಿ ಜಯ ಸಾಧಿಸಿದರು.

ಜೂಲನ್ ಗೋಸ್ವಾಮಿ– ಎಎಫ್‌ಪಿ ಸಂಗ್ರಹ ಚಿತ್ರ

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 9ಕ್ಕೆ 264 (ಆ್ಯಶ್ಲೆ ಗಾರ್ಡನರ್ 64, ಬೆತ್ ಮೂನಿ 52, ತಾಹಿಲಾ ಮೆಕ್‌ಗ್ರಾ 47, ಅಲಿಸಾ ಹೀಲಿ 35; ಜೂಲನ್ ಗೋಸ್ವಾಮಿ 37ಕ್ಕೆ 3, ಪೂಜಾ ವಸ್ತ್ರಕಾರ್ 46ಕ್ಕೆ 3, ಸ್ನೇಹ ರಾಣಾ 56ಕ್ಕೆ 1) ಭಾರತ: 49.3 ಓವರ್‌ಗಳಲ್ಲಿ 8ಕ್ಕೆ 266 (ಯಷ್ಟಿಕಾ ಭಾಟಿಯಾ 64, ಶೆಫಾಲಿ ವರ್ಮಾ 56, ದೀಪ್ತಿ ಶರ್ಮಾ 31, ಸ್ನೇಹ್ ರಾಣಾ 30; ಅನ್ನಾಬೆಲ್ ಸುದರ್ಲೆಂಡ್ 30ಕ್ಕೆ 3, ಆ್ಯಶ್ಲೆ ಗಾರ್ಡನರ್ 30ಕ್ಕೆ 1, ಸ್ಟೆಲ್ಲಾ ಕ್ಯಾಂಪ್‌ಬೆಲ್ 41ಕ್ಕೆ 1). ಫಲಿತಾಂಶ: ಭಾರತಕ್ಕೆ ಎರಡು ವಿಕೆಟ್‌ಗಳ ಜಯ, ಆಸ್ಟ್ರೇಲಿಯಾಕ್ಕೆ 2–1ರಿಂದ ಸರಣಿ ಗೆಲುವು.

ವಿಶ್ವ ಆರ್ಚರಿ: ಜ್ಯೋತಿಗೆ ಬೆಳ್ಳಿ

ಯಾಂಕ್ಟನ್ (ಪಿಟಿಐ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಸೋತ ಭಾರತದ ಜ್ಯೋತಿ ಸುರೇಖಾ ವೆನ್ನಮ್ ಅವರು ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನ-ಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂ-ಡರು. ಶನಿವಾರ ತಡರಾತ್ರಿ ನಡೆದ ಮಹಿಳೆಯರ ವೈಯಕ್ತಿಕ ಕಂಪೌಂಡ್ ವಿಭಾಗದ ಫೈನಲ್ ಸೆಣಸಾಟದಲ್ಲಿ ಅವರು ಕೊಲಂಬಿಯಾದ ಸಾರಾ ಲೋಪೆಜ್ ಎದುರು ಮಣಿದರು.

ಕೊಲಂಬಿಯಾದ ಆರ್ಚರ್ 146–144ರಿಂದ ಜ್ಯೋತಿ ಅವರಿಗೆ ಸೋಲುಣಿಸಿದರು. ಪುರುಷರ ವೈಯಕ್ತಿಕ ಕಂಪೌಂಡ್ ವಿಭಾಗದಲ್ಲಿ ಸ್ಪರ್ಧಿಸಿದ್ದ, ಮೂರು ಬಾರಿಯ ವಿಶ್ವಕಪ್ ವಿಜೇತ ಅಭಿಷೇಕ್ ವರ್ಮಾ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೆದರ್ಲೆಂಡ್ಸ್‌ನ ಮೈಕ್ ಶೋಲೆಸರ್ ಎದುರು ಅವರು ಕೇವಲ ಒಂದು ಪಾಯಿಂಟ್‌ನಿಂದ (147–148) ಸೋಲು ಕಂಡರು.

ಜ್ಯೋತಿ

ಭಾರತದ ಆರ್ಚರಿ ಪಟುಗಳು ಕಂಪೌಂಡ್ ವಿಭಾಗದಲ್ಲಿ ಒಟ್ಟು ಮೂರು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಂತಾ-ಗಿದೆ. ಶುಕ್ರವಾರ ಮಹಿಳಾ ಮತ್ತು ಮಿಶ್ರ ವಿಭಾಗದ ತಂಡಗಳು ಕೊಲಂಬಿಯಾ ಎದುರು ಮಣಿದು ಎರಡನೇ ಸ್ಥಾನ ಗಳಿಸಿದ್ದವು.

RENAULTದ 10ನೇ ವಾರ್ಷಿಕೋತ್ಸವದ ಸಮಾರಂಭ
ಈಗ ಖರೀದಿಸಿರಿ, ಹಣ 2022ರಲ್ಲಿ ನೀಡಿರಿ.*

ಪ್ರತಿ ದಿನ ₹ 49 999 ಮೌಲ್ಯದ ಗಿಫ್ಟ್ ವೌಚರ್ಸ್ ನಿಮಗಾಗಿ ಕಾದಿರುತ್ತವೆ**
₹ 95 000## ವರೆಗಿನ ಅತಿರಿಕ್ತ ಲಾಯಲ್ಟಿ ಬೆನಿಫಿಟ್

RENAULT KWID
ಬೆಲೆಯ ಆರಂಭ ₹ 4.06 ಲಕ್ಷ#
₹ 40 000^ ವರೆಗಿನ ಲಾಭಗಳು

RENAULT KIGER
ಬೆಲೆಯ ಆರಂಭ ₹ 5.64 ಲಕ್ಷ#

RENAULT TRIBER
ಬೆಲೆಯ ಆರಂಭ ₹ 5.50 ಲಕ್ಷ#
₹ 60 000^^ ವರೆಗಿನ ಲಾಭಗಳು

for a test drive, call on 1800 315 4444. select variants available in CSD. special offers for defence personnel, government, PSU and corporate employees. for bulk enquiries, contact corpsales@renault.com for further details, visit renault.co.in

terms and conditions apply. #prices mentioned above are for base variant for ex-showroom Bengaluru for each model and are exclusive of local taxes. ^the benefits up to ₹ 40 000/- for Kwid include cash benefit of up to ₹ 10 000/-, exchange benefit of up to ₹ 20 000/- & corporate benefit of up to ₹ 10 000/- on select versions. ^^the benefits up to ₹ 60 000/- for Triber include cash benefit of up to ₹ 25 000/-, exchange benefit of up to ₹ 25 000/- & corporate benefit of up to ₹ 10 000/- on select versions. corporate/PSU/defence personnel/government employee/professionals benefits applicable for each model are basis eligibility of the customer and based on submission of required proof by the customer. ##loyalty benefits applicable on buying additional / exchange with Renault Model. for detail on loyalty benefits on each models and T&Cs visit www.renault.co.in/offers. * buy now, pay in 2022 corresponds to EMI holiday of 6 months from the date of disbursal of loan, applicable till 30th September 2021. **the gift vouchers scheme is applicable on all Renault cars, valid till 31st October,2021. for detailed terms & conditions, visit www.renault.co.in. Renault India Pvt. Ltd. reserves the right at its absolute discretion to terminate this scheme or vary, delete or add to any of these terms and conditions from time to time without notice including without limitation. finance at the sole discretion of Renault finance. offers may vary across variants and cities. model/accessories shown may not be a part of the standard fitment. the above mentioned offers & benefits are valid till 30th September 2021 and are through Renault dealership. for detailed offers, visit www.renault.co.in/offers. Renault India Pvt. Ltd. reserves the right to change or modify the mentioned schemes and conditions without prior notice. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: BENGALURU: RENAULT Mysore Road Mob: +91 8527240549, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626, RENAULT Kalyan Nagar Mob: +91 8527236137, RENAULT Sarjapura Mob: +91 8448481374, RENAULT Yelahanka Mob: +91 8527234592, RENAULT Yeswanthpur Mob: +91 9311832962. **TUMKUR:** RENAULT Tumkur Mob: +91 8527234251.

L&K | SAATCHI & SAATCHI